
ಕೊಡಗು ಸಂಗಾತಿ

ನವೆಂಬರ್ 1 ರಿಂದ 30, 2003 **ಪಾಕ್ಷಿಕ ಪತ್ರಿಕೆ** (ಬೊಂತಲ್ 15-30, ಜಾರ್ದೆ 1-14)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

RNo. : KA/SK/MYS-88/2003 ಸಂಪುಟ : 7 ಸಂಚಿಕೆ : 15-16 ಪುಟಗಳು : 24 ಬೆಲೆ ರೂ. : 12-00




ಶಾಲಾ ಹಂತದಿಂದಲೇ ಮಕ್ಕಳಿಗೆ ದೇಶಾಭಿಮಾನ
ಮಾಡಿಸಬೇಕೆನಿಸುವ ಕ್ರಿಯಾಶೀಲಾ ಯುವ ಪ್ರತಿಭೆ

ಕೊಡಗು ಜಿಲ್ಲಾ ಸರ್ಕಾರಿ ಶಾಲಾ, ಶಾಲಾಭಿವೃದ್ಧಿ ಹಾಗೂ ಹಿತೈಷಿಗಳ ಒಕ್ಕೂಟದ ಅಧ್ಯಕ್ಷ ದಂಬೆಕೋಡಿ ಎಸ್. ಹರೀಶ್

: ಲೇಖನ ಒಳಪುಟದಲ್ಲಿ



ಅರೆಗನ್ನಡ (ನಡುಗನ್ನಡ) ಭಾಷೆಯ ಮೊದಲ ಕಥಾ ಸಂಕಲನದ "ಚಾಂಪಾ" (ಅಜ್ಜ) ಬಿಡುಗಡೆ



ಸಾಹಿತಿ ಬಾರಿಯಂಡ ಜೋಯಪ್ಪನವರು

"ಕನ್ನಡಕ್ಕಾಗಿ ಕೈಯೆತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ" - ಕುವೆಂಪು

ಕನ್ನಡ ನಾಡಿನ ಜನತೆಗೆ ರಾಜ್ಯೋತ್ಸವದ ಶುಭಾಶಯಗಳು

ಉದ್ಯೋಗ ವಾರ್ತೆ

ಅವಿವಾಹಿತ ಪುರುಷ ಅಭ್ಯರ್ಥಿಗಳಿಂದ ನೌಕ ದಳದ ಎಕ್ಸಿಕ್ಯೂಟಿವ್‌ಬ್ರಾಂಡ್‌ನಲ್ಲಿ (ಜನರಲ್‌ಸರ್ವೀಸ್) ಶಾರ್ಟ್ ಸರ್ವೀಸ್ ಕಮಿಷನ್ಡ್ ಆಫೀಸರ್ ಹುದ್ದೆಗಳ ಜುಲೈ 2004 ರ ಕೋರ್ಸಿಗೀಗೆ ಅರ್ಜಿ ಆಹ್ವಾನಿಸಲಾಗಿದೆ. ವಯೋಮಿತಿ 19ರಿಂದ 25 (2-7-1979 To 1-1-1985) ಒಳಗೆ ಜನಿಸಿದವರಾಗಿರಬೇಕು. ಕೊನೆ ದಿನಾಂಕ 7-11-2003 ಹೆಚ್ಚಿನ ಮಾಹಿತಿಗಾಗಿ ಅಕ್ಟೋಬರ್ 18-24 ರ ಎಂಪ್ಲಾಯಿಮೆಂಟ್ ನ್ಯೂಸ್ ನೋಡಿ.

ಮ್ಯಾನೇಜ್‌ಮೆಂಟ್ ಟ್ರೇನೀ ಹುದ್ದೆಗಳು : ಭಾರತೀಯ ರೈಲ್ವೆ ಸಚಿವಾಲಯದ ಕನ್‌ಸ್ಟ್ರಕ್ಷನ್ ಕಂಪೆನಿಯಾದ ಇರ್ಕಾನ್ ಇಂಟರ್ ನ್ಯಾಷನಲ್ ಲಿಮಿಟೆಡ್ ಮ್ಯಾನೇಜ್‌ಮೆಂಟ್ ಟ್ರೈನಿ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿಯನ್ನು ಸಿವಿಲ್ ಮೆಕ್ಯಾನಿಕಲ್/ ಇಲೆಕ್ಟ್ರಿಕಲ್ / ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ಸ್‌ಇಂಜಿನಿಯರಿಂಗ್ ವಿಭಾಗಗಳ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ತರಬೇತಿಯ ಅವಧಿ 2 ವರ್ಷ ಕೊನೆಯ ದಿನಾಂಕ 9-11-2003 ಅಕ್ಟೋಬರ್ 18-24 ಎಂಪ್ಲಾಯಿಮೆಂಟ್ ನ್ಯೂಸ್ ನೋಡಿ.

ಸ್ಟಾಫ್ ಸೆಲೆಕ್ಷನ್ ಕಮಿಶನ್‌ನಲ್ಲಿ ವಿವಿಧ ಹುದ್ದೆಗಳ ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಆಹ್ವಾನ :

ಗ್ರೂಪ್ 'ಬಿ' ಹುದ್ದೆಗಳಿಗೆ ಈ ಮೇಲಿನ ಪರೀಕ್ಷೆಗಳನ್ನು ನಡೆಸಲಿದೆ, ಅರ್ಜಿಗಳನ್ನೂ ಆಹ್ವಾನಿಸಿದೆ. ವಿದ್ಯಾರ್ಹತೆ ಯಾವು ದಾದರೂ ಪದವಿ. ಕೊನೆ ದಿನಾಂಕ 14-11-2003 ಹೆಚ್ಚಿನ ಮಾಹಿತಿಗಾಗಿ ಅಕ್ಟೋಬರ್ 18-24 ಎಂಪ್ಲಾಯಿಮೆಂಟ್ ನ್ಯೂಸ್ ನೋಡಿ.

ಇಂಡೊ ಟಿಬೇಟಿಯನ್ ಬಾರ್ಡರ್ ಪೊಲೀಸ್ ವಿವಿಧ ಪೋಸ್ಟ್‌ಗಳ ಹುದ್ದೆಗಳಿಗೆ ಅರ್ಹರಾದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕಾನ್‌ಸ್ಟೇಬಲ್‌ಗಳ 405 ಹುದ್ದೆಗಳಿವೆ. ಹೆಡ್ ಕಾನ್‌ಸ್ಟೇಬಲ್(ಕಂಬಾಟೈಸ್‌ಡ್ ಮಿನಿಸ್ಟ್ರೀಯಲ್) ಹುದ್ದೆಗಳಿಗೆ ಮಾತ್ರವೇ ಸ್ತ್ರೀಯರೂ ಅರ್ಜಿ ಸಲ್ಲಿಸಬಹುದು. ಕೊನೆಯ ದಿನಾಂಕ 15-11-2003.

-ಕೃಪೆ : ವಿಜಯ ಕರ್ನಾಟಕ, ದಿನಾಂಕ 20-10-03

ರಾಷ್ಟ್ರೀಯ ರಕ್ಷಣಾ ಮತ್ತು ನೌಕ ಅಕಾಡೆಮಿ ಪರೀಕ್ಷೆ. ರಾಷ್ಟ್ರೀಯ ಲೋಕ ಸೇವಾ ಆಯೋಗವು ಭೂದಳ, ನೌಕದಳ, ವಾಯುದಳಗಳ 113 ನೇ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ. ಒಟ್ಟು 325 ಖಾಲಿಹುದ್ದೆಗಳು ವಿದ್ಯಾರ್ಹತೆ 10+2 PUC ಪಾಸಾಗಿರಬೇಕು. ನೌಕದಳ ವಾಯುದಳಕ್ಕೆ ವಿಜ್ಞಾನ ಪಾಸಾಗಿರಬೇಕು. ವಯಸ್ಸು 161/2ರಿಂದ 19 ವರ್ಷ (2-11996 To 1-7-1988) ಕೊನೆ ದಿನಾಂಕ 17-11-2003 ಹೆಚ್ಚಿನ ಮಾಹಿತಿಗಾಗಿ ಅಕ್ಟೋಬರ್ 18-24 ರ ಎಂಪ್ಲಾಯಿಮೆಂಟ್ ನ್ಯೂಸ್ ನೋಡಿ.

ಡಿಪಾರ್ಟ್‌ಮೆಂಟ್ ಆಫ್ ಕಲ್ಚರ್‌ನಿಂದ ಪ್ರತಿಭಾವಂತ ಕಲಾವಿಧರಿಗೆ ಫೆಲೋಸಿಪ್ : ಭಾರತ ಸರ್ಕಾರದ ಸಾಂಸ್ಕೃತಿಕ ಇಲಾಖೆಯು ಪ್ರತಿಭಾವಂತ ಕಲಾವಿದರಿಗೆ 2003-04 ರ ಸಾಲಿಗೆ ಜೂನಿಯರ್/ಸೀನಿಯರ್ ಫೆಲೋಸಿಪ್ ನೀಡಲಿದೆ. ವಿಭಾಗಗಳು ಪ್ರದರ್ಶನ ಕಲೆ, (ಸಂಗೀತ) ನೃತ್ಯ/ನಾಟಕ/ಗೊಂಬೆಯಾಟ, ಸಾಹಿತ್ಯ ಕವಿತೆ/ನಾಟಕ, ವಿಮರ್ಶೆ, ಪ್ರವಾಸ, ಕಥನ, ಇತಿಹಾಸ, ಫಿಕ್ಷನ್ ಮತ್ತು ಥಿಯರಿ ಆಫ್ ಆಪರೇಟರ್

ದೃಶ್ಯಕಲೆ : ಗ್ರಾಫಿಕ್ಸ್, ಶಿಲ್ಪಕಲೆ, ಪೆಯಿಂಟಿಂಗ್, ಫೋಟೋಗ್ರಾಫಿ, ಎಲ್ಲಾ ವಿಭಾಗ ಸೇರಿ 170 ಫೆಲೋಶಿಪ್ ನೀಡಲಿದೆ. ಅವಧಿ 2 ವರ್ಷಗಳು, ಕೊನೆ ದಿನಾಂಕ 20-11-2003, ಹೆಚ್ಚಿನ ಮಾಹಿತಿಗಾಗಿ ಅಕ್ಟೋಬರ್ 18-24ರ ಎಂಪ್ಲಾಯಿಮೆಂಟ್ ನ್ಯೂಸ್ ನೋಡಿ.

ಆರ್ಮಿಯಲ್ಲಿ ಎಂಜಿನಿಯರ್ ಅಧ್ಯಾಪಕರ 110 ಹುದ್ದೆಗಳು ಕೊನೆಯ ದಿನಾಂಕ 28-11-2003, ಸೌಜನ್ಯ : ವಿಜಯಕರ್ನಾಟಕ ದಿನಾಂಕ 27-10-2003

ತಿದ್ದುಪಡಿ -1 : ಸಂಗಾತಿ ಸಂಪುಟ 7, ಸಂಚಿಕೆ 13-14 ಪಿರಿಯಾಪಟ್ಟಣದ ಗೌಡ ಸಮಾಜ ಲೇಖನದಲ್ಲಿ ವಂದನಾರ್ಪಣೆ ಮಾಡಿದವರು ಮೇಡ್ತನ ಶಿವಾಜಿಯವರೆಂದು ಸಹೃದಯ ಓದುಗರು ಓದಿಕೊಳ್ಳುವುದು. - ಸಂ.

ತಿದ್ದುಪಡಿ -2 : ಸಂಗಾತಿ ಸಂಪುಟ, 7, ಸಂಚಿಕೆ 13-14 ರ ಸಂಪಾದಕೀಯ ಪುಟ 5 ರಲ್ಲಿ ತನ್ನ ಜಾತಿಯ ಜನರೆಲ್ಲಾ ಬ್ರಿಟಿಷರ ಕೃಪೆಗೆ ಪಾತ್ರರಾದರು ಎನ್ನುವುದನ್ನು ಬ್ರಿಟಿಷರ ಅವ ಕೃಪೆಗೆ ಪಾತ್ರರಾದರೆಂದು ಓದುಗರು ಓದಿಕೊಳ್ಳುವುದು.

- ಸಂ.



ಕುದುಪಜೆ ಎಂ. ಬಸಪ್ಪ

ಕ್ಷೇತ್ರ ನಿರ್ವಾಹಕರಾಗಿ ಶ್ರೀ ಕುದುಪಜೆ ಬಸಪ್ಪ ಆಯ್ಕೆ

ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಯ ಸೋಮವಾರಪೇಟೆ ತಾಲ್ಲೂಕಿನ ಕ್ಷೇತ್ರ ನಿರ್ವಾಹಕರಾಗಿ ಕುಶಾಲನಗರದ ಕುದುಪಜೆ ಎಂ. ಬಸಪ್ಪನವರನ್ನು ದಿನಾಂಕ 1-11-2003 ರಿಂದ ಆಯ್ಕೆ ಮಾಡಲಾಗಿದೆ. ಕುಂಭಗೌಡನ ಸೊಮಣ್ಣನವರ ಸೇವೆ ಈ ಹಿಂದಿನಂತೆಯೇ ಮುಂದುವರೆಯಲಿದೆ. ಸಂಗಾತಿಗೆ ಸಂಬಂಧಪಟ್ಟ ವ್ಯವಹಾರಗಳನ್ನು ಇವರಲ್ಲಿ ನಡೆಸಬಹುದು.

ಕುದುಪಜೆ ಎಂ.ಬಸಪ್ಪ, ಪತ್ರಿಕಾ ವರದಿಗಾರ
ಗೌಡ ಸಮಾಜ ರಸ್ತೆ, ಕುಶಾಲನಗರ ಫೋನ್ : 272944

ವಿಳಾಸ : ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯರಸ್ತೆ,
ಕುಶಾಲನಗರ ಫೋನ್ : 273370

-ಗೌರವ ಸಂಪಾದಕರು

2003, ನವೆಂಬರ್ 1 ರಿಂದ 30ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	ಕೊಡಗು ಸಂಗಾತಿ, 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. ಫೋನ್: **0821/2404290** ಕುಂಟುಪುಣಿ ರಾಮಕೃಷ್ಣ, ಕಾವೇರಿ ಆಟೋಮೊಬೈಲ್, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 **Mobile : 94480-87790**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸಮಣೆ ಪುಸ್ತಕ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್ ಇತ್ಯಾದಿಗಳು	ಕೊಡಗು ಸಂಗಾತಿ C/o ಪಾಂಡನ ಕಾಂಪೌಂಡ್, 21/4, (1), ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 ಬೈತಡ್ಕ ಜಾನಕಿ ಬೆಳ್ಯಪ್ಪ ಪಾಂಡನ ರತಿ ಚಂದ್ರಶೇಖರ್ ಫೋನ್ : **228380 / 228047**
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ ಫೋನ್ : 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/273370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006 Mobile : 94482 25160

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **12**ರೂ.

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ

•ಆಧುನಿಕ ಆಡಂಬರಗಳನ್ನು ವಿಡಂಬನೆ ಮಾಡುತ್ತಾ ಸಾಗುವ 'ಚಾಂಪಾ'
•ಅರೆಗನ್ನಡ ಮೊದಲ ಕಥಾ ಸಂಕಲನ ಜನರ ಕೈಗೆ

ಸೆಪ್ಟಂಬರ್ 28 ರಂದು ಮಡಿಕೇರಿಯ ಕೊಡಗು ಗೌಡ ವಿದ್ಯಾಸಂಘದಲ್ಲಿ ನಡೆದ ಸಮಾರಂಭದಲ್ಲಿ, ಕೊಡಗಿನ ಸಾಹಿತಿ ಹಾಗೂ ಮದೆ ಮಹೇಶ್ವರ ಕಾಲೇಜಿನ ಪ್ರಾಚಾರ್ಯರೂ ಆಗಿರುವ ಶ್ರೀ ಬಾರಿಯಂಡ ಜೋಯಪ್ಪನವರು ರಚಿಸಿದ ಅರೆಗನ್ನಡ ಭಾಷೆಯ ಮೊದಲ ಕಥಾ ಸಂಕಲನದ 'ಚಾಂಪಾ' ಬಿಡುಗಡೆ ಯಾಯಿತು. ಈ ಹಿಂದೆ ಅರೆಗನ್ನಡದಲ್ಲಿ ಹಾಡುಗಳು. ಪದ್ಯಗಳನ್ನೊಳಗೊಂಡ ಪುಸ್ತಕಗಳು ಹಾಗೂ ಅರೆಗನ್ನಡದ ಬಿಡಿ ಕಥೆಗಳು ಲೇಖನಗಳು ಪ್ರಕಟ ಗೊಂಡಿದ್ದವು. ಇದೇ ಮೊದಲ ಬಾರಿಗೆ ಕಥಾ ಗುಚ್ಛವೊಂದು ಹೊರಬಂದಿರುವುದು ಗೌಡಬಾಂಧವ ರಲ್ಲಿ ಸಾಹಿತ್ಯಾಭಿರುಚಿ ಚಿಗುರುವಂತೆ ಮಾಡುವಲ್ಲಿ ಯಶಸ್ವಿಯಾಗಿದೆ.

'ಚಾಂಪಾ'ಕೃತಿಯು ಸಣ್ಣಕಥೆಗಳನ್ನೊಳ ಗೊಂಡಿದ್ದು, 30 ಕಥೆಗಳನ್ನು ಹೊಂದಿರುವ ಆಕರ್ಷಕ ಕೃತಿಯಾಗಿದೆ. ಕೃತಿಕಾರರೇ ಹೇಳುವ ಹಾಗೆ 'ಚಾಂಪಾ' ಕೃತಿಯಲ್ಲಿ ಅರೆಗನ್ನಡ ಭಾಷೆಯನ್ನು ಅಳವಡಿಸಿದ್ದರೂ, ಅಲ್ಲಿ ನಡೆಯುವ ಘಟನೆಗಳು ಕೇವಲ ಗೌಡ ಜನಾಂಗಕ್ಕೆ ಮಾತ್ರ ಸೀಮಿತವಾದುದಲ್ಲ. ಎಲ್ಲಾ ಜನಾಂಗಗಳಲ್ಲೂ, ಎಲ್ಲಾ ಸಮಾಜದಲ್ಲೂ ನಡೆಯುವ ನೈಜ ಘಟನೆಗಳನ್ನು ಶ್ರೀ ಬಿ. ಆರ್. ಜೋಯಪ್ಪನವರು ತಮ್ಮದೇ ಶೈಲಿಯಲ್ಲಿ ನಿರೂಪಣೆ ಮಾಡಿದ್ದಾರೆ.

ಕೃತಿಯಲ್ಲಿ ಬರುವ ಪ್ರತಿ ಕಥೆಯೂ ಸಹ ಸಮಾಜಕ್ಕೆ ಹಲವು ಸಂದೇಶಗಳನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಜನರಲ್ಲಿ ಮನೆ ಮಾಡಿರುವ ಅಂಧಕಾರ, ಮೂಢನಂಬಿಕೆ, ಕ್ರೌರ್ಯ, ಸಂಸಾರದೊಳಗಿನ ವಿರಸ ಅದರೊಳಗೆ ಮತ್ತೆ ಅವಲಂಬನೆಗಾಗಿ ಕಾತರಿಸುವ ಮನಸ್ಸು, ಪೇಟೆ ಜೀವನ, ಹಳ್ಳಿ ಜೀವನಕ್ಕಿರುವ ವ್ಯತ್ಯಾಸ, ಇವೆಲ್ಲವನ್ನೂ ಮನ ಮುಟ್ಟುವ ಹಾಗೆ ಬರೆಯಲಾಗಿದೆ. ಕೃತಿಯಲ್ಲಿ ಬರುವ 'ಚಾಂಪಾ' ಕಥೆಯು ದೊಡ್ಡ ಕಥೆಯಾಗಿದ್ದು,'ಚಾಂಪಾ'ನ ಪರದಾಟದಲ್ಲಿ ಆಧುನಿಕ ಆಡಂಬರಗಳನ್ನೂ ಟೀಕಿಸಲಾಗಿದೆ. ಹಿಂದೆ ಸರಳ ಜೀವನ ನಡೆಸುತ್ತಾ ಕಾಣುತ್ತಿದ್ದ ಸುಖ ಜೀವನ, ಸ್ವಾವಲಂಬನೆ ಇಂದು ಮರೆಯಾಗುತ್ತಿರುವುದನ್ನೂ ಕಥೆ ಎಳೆ ಎಳೆಯಾಗಿ ಬಿಡಿಸಿಡುತ್ತದೆ. ಕೆಲವು ಕಡೆ ಗೌಡ ಜನಾಂಗದ ಕೆಲವು ಸಂಪ್ರದಾಯಗಳೂ ಸಹ ಓದುಗರಿಗೆ ಪರಿಚಯವಾಗುತ್ತವೆ. ಕಥೆಯಲ್ಲಿ ಬರುವ ಕೆಲವು ಪಾತ್ರಗಳು ಬಯ್ಯುವಾಗ ಅತ್ಯಂತ ಕೆಟ್ಟ ಪದಗಳನ್ನು ಬಳಸಿರುವುದು ಕಂಡುಬರುತ್ತದೆಯಾದರೂ ಹಳ್ಳಿಗಳಲ್ಲಿ ಅದರಲ್ಲೂ ಕುಡಿದು ಬಂದವರು ಅಂತಹ ಪದಗಳನ್ನೇ ಬಳಸುವುದು ಸರ್ವೇ ಸಾಮಾನ್ಯ ಸಂಗತಿಯಾಗಿದೆ.

ಎಲ್ಲರೂ ಓದಲೇಬೇಕಾದ ಚಾಂಪಾಕೃತಿ ಓದುಗರನ್ನು ಓದಿಸುತ್ತಾ ಸಾಗುತ್ತದೆ. ಒಟ್ಟಿನಲ್ಲಿ ಶ್ರೀ ಬಿ. ಆರ್. ಜೋಯಪ್ಪ ನವರು ಜನರ ಸಮೀಪಕ್ಕೆ ಹೋಗಿ, ಅವರ ಒಳಹೊಕ್ಕು ಕಥೆ ರಚಿಸಿದ್ದಾರೆ. ಕಥೆಯ ಮೂಲಕ ಮತ್ತೆ ಜನತೆಯ ಸಮೀಪಕ್ಕೆ ಹೋಗಿ ಮನಸ್ಸಿಗೆ ಲಗ್ಗೆ ಹಾಕಿದ್ದಾರೆ. ಅಂತೂ ಪುಸ್ತಕ ಪ್ರಕಾಶಿಸಿದ ವಿದ್ಯಾಸಂಘವೂ ಸಹ ಮೆಚ್ಚುಗೆಗೆ ಅರ್ಹವಾಗಿದೆ. 'ಗೌಡರ' ಸಾಹಿತ್ಯಾ ಲೋಕ ಮತ್ತಷ್ಟು ವಿಸ್ತಾರ ಗೊಳ್ಳಲೆಂಬುದು ನಮ್ಮ ಆಶಯ.

ಗೌಡ ಸಮಾಜಗಳು ಜನಾಂಗದ ಸಂಸ್ಕೃತಿ ಬಗ್ಗೆ ಪುಸ್ತಕ ಬಂಡಾರಗಳನ್ನು ತೆರೆಯಬೇಕು

ಗೌಡ ಯುವಕ ಯುವತಿಯರಿಗೆ ಗೌಡ ಸಂಸ್ಕೃತಿಯಲ್ಲಿ ಸರಿಯಾದ ಮಾಹಿತಿಗಳನ್ನು ಒದಗಿಸಲು, ಪ್ರತಿಯೊಂದು ಗೌಡ ಸಮಾಜದಲ್ಲಿ ಗೌಡರ ಚರಿತ್ರೆ ಸಮಾಜದಲ್ಲಿ ನಡೆಯುತ್ತಿರುವ ಹುಟ್ಟಿನಿಂದ ಸಾಯುವವರೆಗೆ ಇರುವ ಪದ್ಧತಿಗಳ ಬಗ್ಗೆ ಸಮಾಜದ ಲೇಖಕರು ಆಯಾಯ ಸಮಯದಲ್ಲಿ ಬರೆದು ಪ್ರಕಟಿಸಿದ ಪುಸ್ತಕಗಳು ಮತ್ತು ಲೇಖನಗಳನ್ನು ಸಂಗ್ರಹಿಸಿ ಅವುಗಳನ್ನು ಸಮಾಜದ ಸದಸ್ಯರಿಗೆ ಓದುವ ಹವ್ಯಾಸವನ್ನು ಮೂಡಿಸುವ ಪ್ರವರ್ತಿಯನ್ನು ಕಲ್ಪಿಸಬೇಕು. ಒಂದು ಸಮಾಜವು ಕಟ್ಟಡವನ್ನು ಕಟ್ಟಿ ಸಮಾರಂಭಗಳಿಗೆ ಬಾಡಿಗೆಗೆ ಕೊಟ್ಟು ಹಣವನ್ನು ಶೇಖರಿಸುವುದು ಮಾತ್ರ ಗೌಡ ಸಮಾಜದ ಕೆಲಸವೆಂದು ತಿಳಿದರೆ ಸಾಲದು ಸಮಾಜದ ಸದಸ್ಯರ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಷಯಗಳಲ್ಲಿ ಕಾಳಜಿ ವಹಿಸದಿದ್ದರೆ, ಒಂದು ಸಮಾಜ ಬರೇ ಹಣ ಸಂಗ್ರಹಿಸುವ ಸಂಸ್ಥೆಯಲ್ಲದೆ ಸಮಾಜವನ್ನು ಉದ್ಧರಿಸುವ ಸಮಾಜದಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸುವ ಸಂಸ್ಥೆಯಾಗುವುದಿಲ್ಲ. ಸಮಾಜದಲ್ಲಿ ಆಗಾಗ್ಗೆ ಮೇಲೆ ಕಾಣಿಸಿದ ವಿಷಯಗಳಲ್ಲಿ ಚರ್ಚಿಸಿ ಹಿರಿಯರು ಕಿರಿಯರಿಗೆ ಸರಿಯಾದ ಮಾರ್ಗದರ್ಶನ ನೀಡಬೇಕೆಂಬುದೆ ಸಂಗಾತಿಯ ಬಯಕೆ.

ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಇನ್ನಷ್ಟು ಹೆಚ್ಚಬೇಕು: ತೋಟಂಬೈಲು ನಾಣಯ್ಯ
ಕೊಡಗು ಗೌಡ ವಿದ್ಯಾಸಂಘದಿಂದ ಪ್ರತಿಭಾ ಪುರಸ್ಕಾರ, ಸನ್ಮಾನ, ಪುಸ್ತಕ ಬಿಡುಗಡೆ ಕಾರ್ಯಕ್ರಮ.

ಇಂದು ನಾವು ಸ್ಪರ್ಧಾ ಪ್ರಪಂಚದಲ್ಲಿದ್ದೇವೆ. ಅದನ್ನು ಎದುರಿಸಲು ಆರ್ಥಿಕ ಮುಗ್ಗಟ್ಟಿನಲ್ಲಿರುವ ನಮ್ಮ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಕಾರ ಅತ್ಯಗತ್ಯ. ಈಗ ನಾವು ವಿದ್ಯಾಸಂಘದ ಮೂಲಕ ನೀಡುತ್ತಿರುವ ಆರ್ಥಿಕ ಪ್ರೋತ್ಸಾಹ ಏನೇನೂ ಸಾಲದು. ವಿದ್ಯಾರ್ಥಿಗಳಿಗೆ ಅದರ ಸದುಪಯೋಗವಾಗಬೇಕಾದರೆ ವಿದ್ಯಾಸಂಘ ದೊಡ್ಡ ಮೊತ್ತದ ಹಣವನ್ನೂ ಧನ ಸಹಾಯಕ್ಕಾಗಿ ನೀಡಬೇಕು. ನಮ್ಮ ಜನಾಂಗದವರು ಇತರ ವಿಷಯಗಳಿಗೆ ಖರ್ಚು ಮಾಡುವ ಸ್ವಲ್ಪ ಭಾಗದ ಹಣವನ್ನಾದರೂ, ವಿದ್ಯಾನಿಧಿಗೆ ದಾನ ಮಾಡಿ, ಆ ಮೂಲಕ ಜನಾಂಗಕ್ಕೆ ವಿದ್ಯಾದಾನ ಮಾಡುವ ಕೈಂಕರ್ಯದಲ್ಲಿ ಪಾಲ್ಗೊಳ್ಳಬೇಕೆಂದು, ಜನಾಂಗದ ಹಿರಿಯರೂ, ಮಡಿಕೇರಿ ಗೌಡ ಸಮಾಜದ ಮಾಜಿ ಅಧ್ಯಕ್ಷರೂ ಆಗಿರುವ ಶ್ರೀ ತೋಟಂಬೈಲು ನಾಣಯ್ಯನವರು ಕರೆ ನೀಡಿದ್ದಾರೆ. ಅವರು ಸೆಪ್ಟಂಬರ್ 28 ರಂದು ಕೊಡಗು ಗೌಡ ವಿದ್ಯಾಸಂಘದ ಆಶ್ರಯದಲ್ಲಿ ನಡೆದ ಪ್ರತಿಭಾ ಪುರಸ್ಕಾರ, ಸನ್ಮಾನ, ಪುಸ್ತಕ ಬಿಡುಗಡೆ ಸಮಾರಂಭವನ್ನೂ ಉದ್ಘಾಟಿಸಿ ಮಾತನಾಡುತ್ತಾ ನಮ್ಮ ಜನಾಂಗದಲ್ಲೇ ಬಹುಮಂದಿ ಶಿಕ್ಷಕ ರಿದ್ದಾರೆ, ಅವರೆಲ್ಲರೂ ದೇಶದ ಭಾವೀ ಪ್ರಜೆಗಳಾದ ವಿದ್ಯಾರ್ಥಿಗಳಲ್ಲಿ ಸದ್ಗುಣ ಬೆಳೆಸುವಂತಾಗಬೇಕೆಂದು ಸಲಹೆ ನೀಡಿದರು.

ಪುಸ್ತಕ ಒಂದು 'ಬಾಂಬ್' ಇದ್ದಂತೆ : ಎ.ಕೆ. ಹಿಮಕರ:

ಇದೇ ಸಮಾರಂಭದಲ್ಲಿ ಬಾರಿಯಂಡ ಜೋಯಪ್ಪನವರು ರಚಿಸಿದ ಅರೆಗನ್ನಡದ ಮೊದಲ ಕಥಾ ಸಂಕಲನ 'ಚಾಂಪಾ' ಕೃತಿಯನ್ನೂ ಬಿಡುಗಡೆ ಮಾಡಿದ ಸುಳ್ಯ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಶ್ರೀ ಎ. ಕೆ. ಹಿಮಕರರವರು ಮಾತನಾಡಿ ಪುಸ್ತಕ ಒಂದು ಬಾಂಬ್‌ನಷ್ಟು ಶಕ್ತಿಯನ್ನು ಹೊಂದಿರುತ್ತದೆ. ಅದರ ಪರಿಣಾಮ ವ್ಯಾಪಕವಾಗಿರುತ್ತದೆ ಮತ್ತು ಶಾಶ್ವತವಾಗಿರುತ್ತದೆ. ಒಂದು ಹೆಜ್ಜೆ ಅಲ್ಲ - 100 ಹೆಜ್ಜೆ ಹಾಕಿ ಮುಂದೆ ಬಂದ ಅನುಭವ. ಒಂದೇ ಹೆಜ್ಜೆಯಿಂದ ಬಹುದೂರ ಸಾಗಲು ಪುಸ್ತಕ ಸಹಾಯ ಮಾಡಬಲ್ಲದು ಎಂದರು. ಗೌಡ ಜನಾಂಗ ಸಾಹಿತ್ಯ ಕ್ಷೇತ್ರದಲ್ಲಿ ಬಹಳ ಹಿಂದುಳಿದಿರುವಿಕೆಗೆ ಖೇದ ವ್ಯಕ್ತಪಡಿಸಿದ ಅವರು ಮೇಲ್ವರ್ಗ ಜನರ ದಬ್ಬಾಳಿಕೆಯಿಂದ ನಮಗೆ ಒಂದು ಶತಮಾನದಿಂದೀಚೆಗೆ ಮಾತ್ರ ಅಕ್ಷರ ಕಲಿಯಲು ಸಾಧ್ಯವಾಯಿತು. ಮೂಲತಃ ಕೃಷಿಕರಾದ ನಮ್ಮ ಜನಾಂಗದವರಿಗೆ ವಿದ್ಯೆಯ ನೆರವಿಲ್ಲದೆ ಯಾವಾಗ ಮಳೆ ಬರುತ್ತದೆ, ಯಾವಾಗ ಬಿತ್ತನೆಗೆ ಸೂಕ್ತ ಕಾಲ, ಯಾವ ಮಣ್ಣಿನಲ್ಲಿ ಯಾವ ಬೆಳೆ ಬೆಳೆಯುತ್ತದೆ ಎನ್ನುವುದು ಗೊತ್ತಿತ್ತು. ಅವರಿಗೆ ಬೇಟೆ ಗೊತ್ತಿತ್ತು. ಕಟ್ಟೆ ಕಟ್ಟಲು ಗೊತ್ತಿತ್ತು. ಕಲ್ಲು ಒಡೆಯಲು ಗೊತ್ತಿತ್ತು. ಯುದ್ಧ ಮಾಡಲು ಬರುತ್ತಿತ್ತು. ಆದರೆ ಯಾವುದನ್ನೂ ದಾಖಲೆಯಲ್ಲಿ ಬರೆಯಲು ಸಾಧ್ಯವಾಗದಿದ್ದದು ಒಂದು ದುರಂತ ಎಂದು ಬಣ್ಣಿಸಿದ ಅವರು ಈ ಶತಮಾನದಲ್ಲಿ ಶೇ. 2 ರಿಂದ 3 ರಷ್ಟು ಜನ ಮಾತ್ರ ಸಾಹಿತ್ಯ ರಚನೆಯಲ್ಲಿ ತೊಡಗಿರುವುದು ಜನಾಂಗದ ಹಿನ್ನಡೆಗೆ ಒಂದು ಮುಖ್ಯ ಕಾರಣ ಎಂದು ವಿಶ್ಲೇಷಿಸಿದರು.

'ಚಾಂಪಾ' ಕೃತಿಯನ್ನು ರಚಿಸಿದ ಸಾಹಿತಿ ಹಾಗೂ ಮದೆ ಮಹೇಶ್ವರ ಕಾಲೇಜಿನ ಪ್ರಾಚಾರ್ಯರೂ ಆಗಿರುವ ಶ್ರೀ ಬಿ. ಆರ್. ಜೋಯಪ್ಪನವರು ಮಾತನಾಡಿ, ಸಾಹಿತ್ಯ ಕೆಲವರಿಗೆ ಮಾತ್ರ ಸೀಮಿತವಲ್ಲ, ಇಲ್ಲಿ ಬರಹಗಾರ, ಪ್ರಕಾಶಕ, ಮುದ್ರಕ, ಓದುಗ, ವಿಮರ್ಶಕ ಎನ್ನುವ ಐದು ಗುಂಪುಗಳು ಸಮ್ಮಿಲನಗೊಂಡಿರುತ್ತವೆ ಎಂದರಲ್ಲದೆ, 'ಚಾಂಪಾ'ಕೃತಿಯು ಅರೆಗನ್ನಡ ಭಾಷೆಯಲ್ಲಿದ್ದರೂ, ಅದು ಪ್ರಪಂಚದ ಎಲ್ಲಾ ವರ್ಗಗಳ ಆಗು ಹೋಗುಗಳನ್ನೂ ಒಳಗೊಂಡಿದೆ ಎಂದರು. ನಾವು ಎಲ್ಲೇ ಇದ್ದರೂ ನಮ್ಮ ಮೂಲ ನೆಲೆಯನ್ನು ಮರೆಯಬಾರದು. ಹಾಗೆಯೇ ನಮ್ಮ ಮೂಲ ಭಾಷೆಯನ್ನೂ ಮರೆಯಬಾರದು ಎಂದು ಸಲಹೆ ನೀಡಿದ ಅವರು ಪುಸ್ತಕ ಬಿಡುಗಡೆಗೆ ಸಹಕರಿಸಿದ ಸರ್ವರನ್ನೂ ಸ್ಮರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಗೌಡ ವಿದ್ಯಾಸಂಘದ ಅಧ್ಯಕ್ಷರಾದ ಹೊಸೂರು ರಮೇಶ್ ಜೋಯಪ್ಪನವರು ಮಾತನಾಡಿ ಗೌಡ ವಿದ್ಯಾಸಂಘವು ವಿದ್ಯಾರ್ಥಿಗಳಿಗಾಗಿ ಹಲವಾರು ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದ್ದು ಅದರ ಸದುಪಯೋಗ ಪಡೆದುಕೊಳ್ಳಲು ಎಲ್ಲರೂ ಮುಂದೆ ಬರಬೇಕೆಂದು ಕರೆ ನೀಡಿ, ಜನಾಂಗದ ಸಹಕಾರ ಪ್ರೋತ್ಸಾಹ ಸಂಘಕ್ಕೆ ಸದಾ ಇರಲಿ ಎಂದು ಕೋರಿಕೆ ವ್ಯಕ್ತಪಡಿಸಿದರು. ಸಮಾರಂಭಕ್ಕೆ ಮೊದಲು ಸ್ವಾಗತ ಮಾಡಿ ಪ್ರಾಸ್ತಾವಿಕ ಭಾಷಣ ಮಾತನಾಡಿದ ವಿದ್ಯಾಸಂಘದ ಉಪಾಧ್ಯಕ್ಷರಾದ ಸೂರ್ತಲೆ ಸೋಮಣ್ಣನವರು 1908 ರಿಂದ ಗೌಡ ವಿದ್ಯಾಸಂಘ ನಡೆದು ಬಂದ ಹಾದಿಯನ್ನು ಮೆಲುಕು ಹಾಕಿದರಲ್ಲದೆ, ಹಿರಿಯರು ಹಾಕಿಕೊಟ್ಟ ಪಂಕ್ತಿಯಲ್ಲಿ ವಿದ್ಯಾಸಂಘ ಮುನ್ನಡೆಯುತ್ತಿದ್ದು, ವಿದ್ಯಾಸಂಘ ಸ್ಥಾಪಕರ ಕನಸನ್ನು ನನಸು ಮಾಡುವ ಹಾದಿಯಲ್ಲಿ ನಾವಿಂದು ಇದ್ದೇವೆ. ವಿದ್ಯಾನಿಧಿ ಸ್ಥಾಪನೆಯಾದ ಮೇಲೆ, ಜನಾಂಗದವರಿಂದ ನಿರಂತರವಾಗಿ ಹರಿದು ಬರುತ್ತಿರುವ ಸಹಕಾರದಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಸಾಧ್ಯವಾಗುತ್ತದೆ ಎಂದರು.

ಇದೇ ಸಮಾರಂಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿರುವ ಶ್ರೀ ಬೈತಡ್ಕ ದೇವಯ್ಯ ಮತ್ತು ಹೆಸರಾಂತ ನಾಟಿ ವೈದ್ಯರಾದ ಭಾಗಮಂಡಲದ ಡಾ|| ಬೇಕಲ್ ಸೋಮನಾಥ ಇವರನ್ನು ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಬಳಪದ ಸೋಮಣ್ಣ, ಮಂಡೀರ ದೇವಯ್ಯ, ಬೈಮನ ಪೊನ್ನಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕುಮಾರಿ ಬಾರಿಕೆ ಹರ್ಷಿತಾರವರ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ, ವಿದ್ಯಾಸಂಘದ ಖಜಾಂಚಿ ಪೊನ್ನಚ್ಚನಸೋಮಣ್ಣನವರು ವಿದ್ಯಾನಿಧಿಯ ವರದಿ ವಾಚಿಸಿದರು. ನಿರ್ದೇಶಕರಾದ ಕೋಡಿ ಚಂದ್ರಶೇಖರ್ ಮತ್ತು ಬಡ್ಡಡ್ಕ ವಿದ್ಯಾಧರ ಕಾರ್ಯಕ್ರಮ ನಿರೂಪಿಸಿದರೆ, ಸೂದನ ಈರಪ್ಪನವರು ಸರ್ವರನ್ನೂ ವಂದಿಸಿದರು.

ವರದಿ:ಪಟ್ಟಡ ಶಿವಕುಮಾರ್

2003 ನೇ ಸಾಲಿನ ಪ್ರತಿಭಾ ಪುರಸ್ಕಾರ ವಿಜೇತರು

I ಏಳನೇ ತರಗತಿಯ ವಿಜೇತರು (ಗ್ರಾಮೀಣ)

1. ಕುಮಾರಿ ಗುಡ್ಡೆಮನೆ ಅಕ್ಷತ್
ತಂದೆ ಗುಡ್ಡೆಮನೆ ಮಣಿಕುಮಾರ್ 579 /96.50%
2. ಕುಮಾರಿ ಸೂದನ ರೇಷ್ಮ
ತಂದೆ ಸೂದನ ಜನಾರ್ಧನ್ 566 /94.33
3. ಕುಮಾರಿ ಪೊನ್ನಚನ ಕೀರ್ತನ್
ತಂದೆ ಪೊನ್ನಚನ ದೇವಯ್ಯ 553 /92.16%

II ಏಳನೇ ತರಗತಿ (ನಗರ)

1. ಕುಮಾರಿ ಪಾಂಡನ ವಂಶಿ
ತಂದೆ ಪಾಂಡನ ರಾಮಚಂದ್ರ 588/ 98%
2. ಕುಮಾರಿ ಬೊಳಗಲು ಧಾನವಿ
ತಂದೆ ಬೊಳಗಲು ಕುಶಾಲಪ್ಪ 580 /96.66

2A ಕುಮಾರಿ ಚೆರಿಯಮನೆ ಚೇತನ್ ತಂದೆ
ತಂದೆ ತಿಮ್ಮಯ್ಯ 580 /96.66

3. ಕುಮಾರಿ ಪಾಣತ್ತಲೆ ಯಶಸ್ವಿ
ತಂದೆ ಪಾಣತ್ತಲೆ ಪೊನ್ನಪ್ಪ 576 /95%

III ಹತ್ತನೇ ತರಗತಿ (ಗ್ರಾಮೀಣ)

1. ಕುಮಾರಿ ನಂಗಾರು ಮಮತ (ಪ್ರಥಮ)
ತಂದೆ ನಂಗಾರು ಸುರೇಶ್ 475/ 75.84
2. ಕುಮಾರ್ ಮಂಜಿನೆ ಮನೆ ಸಂಜಯ
ತಂದೆ ಮಂಜಿನೆ ಮನೆ ಶೀವಪ್ಪ 433 /69.28%
3. ಕುಮಾರ್ ಕುರುಂಜಿ ಹರಿಪ್ರಸಾದ್
ತಂದೆ ಕುರುಂಜಿ ಬೋಜಪ್ಪ 421/ 67.30

ಹತ್ತನೆ ತರಗತಿ (ನಗರ)

1. ಕುಮಾರಿ ಪೂಜಾರಿರ ಶ್ರುತಿ
ತಂದೆ ಪೂಜಾರೀರ ಉತ್ತಪ್ಪ 567 /90.72%
2. ಕುಮಾರಿ ಮೊಟ್ಟೆರ ಬೃಂದಾ ಚಂಗಪ್ಪ
ತಂದೆ ಮೊಟ್ಟೆರ ಚಂಗಪ್ಪ 564 /90.24%
3. ಕುಮಾರ್ ಕಲ್ಲುಮುಟ್ಲು ಪವನ್
ತಂದೆ ಕಲ್ಲುಮುಟ್ಲು ಗಣೇಶ್ 554 /88.64%

VI ಪದವಿಪೂರ್ವ ಕಾಲೇಜು (ನಗರ)

ವಿಜ್ಞಾನ ವಿಭಾಗ

1. ಕುಮಾರ್ ಕಡ್ಯದ ಪಿ. ಶ್ರೀಕಾಂತ್
ತಂದೆ ಕಡ್ಯದ ಪುಟ್ಟಯ್ಯ 548 /91.35%
2. ಕುಮಾರ್ ಕೋಳಿಬೈಲು ಕುಶವಂತ್
ತಂದೆ ಕೋಳಿಬೈಲು ನಾರಾಯಣ 546 /91.10%

ಕಲಾ ವಿಭಾಗ

1. ಕುಮಾರಿ ಉದಿಯನ ಶಿವಾನಿ ರಾಮಯ್ಯ
ತಂದೆ ಉದಿಯನ ರಾಮಯ್ಯ 519 86.5%
2. ಕುಮಾರಿ ಕಾಳಮನೆ ಪವಿತ್ರ
ತಂದೆ ಕಾಳಮನೆ ಜನಾರ್ಧನ 489/ 81.50%

ವಾಣಿಜ್ಯ ವಿಭಾಗ

1. ಕುಮಾರಿ ಕಟ್ಟೆಮನೆ ರೂಪ
ತಂದೆ ಕಟ್ಟೆಮನೆ ತಿಮ್ಮಯ್ಯ 456 /79.33%

ಪದವಿ ಪೂರ್ವ ಕಾಲೇಜು (ಗ್ರಾಮೀಣ)

ಕಲಾ ವಿಭಾಗ

1. ಕುಮಾರ್ ಕುಂಜಿಲನ ವಿನೋದ್
ತಂದೆ ಕುಂಜಿಲನ ಟ್ರಾಗೂರ್ 455 /75.23%
2. ಕುಮಾರ್ ಕಡ್ಲೇರ ಮಿಥುನ್ ಕುಮಾರ್
ತಂದೆ ಕಡ್ಲೇರ ವಾಸುದೇವ 408 /68.00%

ಪದವಿ ಕಾಲೇಜು ವಿಭಾಗ

ಕಲಾ ವಿಭಾಗ

1. ಕುಮಾರ್ ಕೂಡಕಂಡಿ ಸಿ. ದಯಾನಂದ
ತಂದೆ ಕೂಡಕಂಡಿ ಚಂದ್ರಹಾಸ್ 1021/150 68.05%
2. ಕುಮಾರಿ ಸುಟ್ಟೇಜನ ಜಿ. ಅನ್ನಿ
ತಂದೆ ಸುಟ್ಟೇಜನ ಗಣಪತಿ 969/1500 /64.06%

ವಾಣಿಜ್ಯ ವಿಭಾಗ

1. ಕುಮಾರ್ ಚೀಯಪನ ಮೋಹನ್ ಕುಮಾರ್
ತಂದೆ ಚೀಯಪನ ಮೊಟಯ್ಯ 1446/1700 /85.05
2. ಕುಮಾರಿ ಕಲ್ಲಂಬಿ ದೀಪೂ
ತಂದೆ ಕಲ್ಲಂಬಿ ಡಾಲು 2143/3100 /66.96%

ಚಿತ್ರ ಕಲೆ ಸ್ಪರ್ಧೆ

1. ಕುಮಾರಿ ದೇವಜನ ನವಾನಿ ಕುಶಾಲಪ್ಪ
ತಂದೆ ದೇವಜನ ಕುಶಾಲಪ್ಪ
2. ಕುಮಾರಿ ದಂಬೆಕೋಡಿ ಮೌಲ್ಯ ಪೊನ್ನಪ್ಪ
ತಂದೆ ದಂಬೆಕೋಡಿ ಪೂರ್ಣಚಂದ್ರ
3. ಕುಮಾರಿ ಮುಕ್ಕಾಟೀರ ರಾಧಿಕಾ
ತಂದೆ ಮುಕ್ಕಾಟೀರ ದಯಾನಂದ

ಸಾಮಾನ್ಯ ಜ್ಞಾನ ವಿಭಾಗ

1. ಕುಮಾರಿ ಕುಯ್ಯುಮುಡಿ ಆಶ್ರಿತ್
ತಂದೆ ಕುಯ್ಯುಮುಡಿ ಚಿಂಣಪ್ಪ 74
2. ಕುಮಾರಿ ಕುದುಕುಳಿ ಹೇನ್ ಭರತ್
ತಂದೆ ಕುದುಕುಳಿ ಭರತ್ 68
3. ಕುಮಾರಿ ಕೊಡೆಕಲು ನಂದಿತಾ ಪ್ರಕಾಶ್
ತಂದೆ ಕೊಡೆಕಲ್ಲು ನಂದಗೋಪಾಲ 56

3a. ಕುಮಾರ್ ಹೊಸೂರು ದೀನ್ ದೇವಯ್ಯ
ತಂದೆ ಹೊಸೂರು ರಮೇಶ್ 56

ರಸ ಪ್ರಶ್ನೆ ವಿಭಾಗ

1 ಕುಮಾರಿ ಮೇಡ್ತನ ಮೋನಿಕ
ತಂದೆ ಮೇಡ್ತನ ವಿಠಲ 72
ಕುಮಾರಿ ಪೂಜಾರೀರ ಪುಷ್ಪಾಂಜಲಿ
ತಂದೆ ಪೂಜಾರೀರ ಬೆಳ್ಯಪ್ಪ 72
ಕುಮಾರ್ ಪೂಜಾರೀರ ಚಂದ್ರಜಿತ್
ತಂದೆ ಪೂಜಾರೀರ ಬೆಳ್ಯಪ್ಪ 72

2. ಕುಮಾರಿ ಪರ್ಲಕೋಟಿ ಕಾತ್ಯಾಯಿನಿ
ತಂದೆ ಪರ್ಲಕೋಟಿ ಗೋಪಾಲ ಕೃಷ್ಣ 30
ಕುಮಾರಿ ಬಾರಿಕೆ ಹರ್ಷಿತಾ
ತಂದೆ ಬಾರಿಕೆ ಅಯ್ಯಪ್ಪ 30

13 ನೇ ಪುಟಕ್ಕೆ

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ವಿದ್ಯಾಸಂಘದ ಆಶ್ರಯದಲ್ಲಿ ಹಾಸನದಲ್ಲಿ ಕೈಲು ಮುಹೂರ್ತ ಸಮಾರಂಭ.



ಶ್ರೀಮತಿ ಪ್ರೇಮ ಮತ್ತು ಶ್ರೀ ಕಟ್ಟೆಮನೆ ಗಣೇಶ್ ದಂಪತಿಯವರು ರೂ. 5000/- ಅನ್ನು ಸಂಘದ ಅಧ್ಯಕ್ಷರಿಗೆ ಹಸ್ತಾಂತರಿಸುತ್ತಿರುವುದು. ವೇದಿಕೆಯಲ್ಲಿ ಮತ್ತೋರ್ವ ಅತಿಥಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್ ಮತ್ತು ನವೀನಾ ದಂಪತಿಗಳು ಆಸೀನರಾಗಿದ್ದರು.

ದಿನಾಂಕ 14-9-2003 ರಂದು ಹಾಸನದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಅರೆಭಾಷಿಕ ಗೌಡ ಜನಾಂಗದವರು ಸೇರಿ ಕೈಲ್‌ಮುಹೂರ್ತ ಹಬ್ಬವನ್ನು ಆಚರಿಸಲಾಯಿತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕೊಡಗಿನ ಬೆಳೆಗಾರರಾದ ಕಟ್ಟೆಮಾಡು ಗ್ರಾಮದ ಕಟ್ಟೆಮನೆ ಗಣೇಶ್ ಮತ್ತು ಪ್ರೇಮ ಗಣೇಶನವರು ಆಗಮಿಸಿದರೆ, ಇನ್ನೋರ್ವ ಅತಿಥಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷರಾದ ತುಂತಜೆ ಗಣೇಶ್ ಮತ್ತು ಶ್ರೀಮತಿ ನಯನ ಗಣೇಶ್‌ನವರು ಆಗಮಿಸಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಕೈಬೀಲಿರ ಎಂ. ಪೊನ್ನಣ್ಣನವರು ವಹಿಸಿದ್ದರು. ನಡುಬೆಟ್ಟೀರ ಗಾಯತ್ರಿ ಲಕ್ಷ್ಮಣನವರು ಪ್ರಾರ್ಥಿಸಿದರು. ಕಾರ್ಯದರ್ಶಿಗಳಾದ ಕಲ್ಲುಮುಟ್ಲು ಲೋಕನಾಥ್ ನೆರೆದ ಸರ್ವರನ್ನೂ ಆದರದಿಂದ ಸ್ವಾಗತಿಸಿದರು. ಸಂಘದ ಸದಸ್ಯರಾದ ಚೈನೀರ ನಂಜಪ್ಪನವರು ವಿಧಿವಶರಾದ್ದರ ಜ್ಞಾಪಕಾರ್ಥವಾಗಿ ಒಂದು ನಿಮಿಷ ಮೌನ ಆಚರಿಸಲಾಯಿತು. ಕೈಬೀಲಿರ ಪೊನ್ನಣ್ಣನವರು ಅತಿಥಿಗಳನ್ನು ಪರಿಚಯಿಸಿದರು.

ಅತಿಥಿಗಳಾದ ಕಟ್ಟೆಮನೆ ಗಣೇಶ್, ಶ್ರೀಮತಿ ಪ್ರೇಮಾ ಗಣೇಶ್, ತುಂತಜೆ ಗಣೇಶ್ ಹಾಗೂ ಶ್ರೀಮತಿ ನಯನಾ ಗಣೇಶ್‌ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಹಾಸನದಲ್ಲಿ ಸಮಾಜ ಕಟ್ಟುವ ಉದ್ದೇಶದಿಂದ ಅತಿಥಿಗಳಿಬ್ಬರು ತಲಾ ರೂ. 5000/- ಅನ್ನು ನೀಡಿ ಶುಭ ಕೋರಿದರು. ಮುಖ್ಯ ಅತಿಥಿಗಳಿಂದ ಬಹುಮಾನ ವಿತರಿಸಲಾಯಿತು. ಕೊಂಬಾರನ ಬಸಪ್ಪನವರು ಕಾರ್ಯಕ್ರಮದಲ್ಲಿರುವ ಅತಿಥಿಗಳಿಗೂ, ನೆರೆದವರಿಗೂ ವಂದಿಸಿದರು.

ಸಭೆಯ ನಂತರ ಕೊಡಗು ಸಂಪ್ರದಾಯದ ಅದ್ದೂರಿ ಭೋಜನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಖಜಾಂಚಿ ಕೆ. ಎಸ್. ಗಣೇಶ್, ಬೈಲೋಳಿರ ಹರೀಶ್, ಚೈನೀರ ಸತೀಶ್ ಹಾಗೂ ಕುದುಪಜೆ ಚಂದ್ರಶೇಖರ್‌ನವರನ್ನು ಪ್ರಶಂಸಿಸಲಾಯಿತು.

ವರದಿ: ಕಲ್ಲು ಮುಟ್ಲು ಲೋಕನಾಥ್

ಕೊಡಗು ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷರಾಗಿ ಎಸ್.ಜಿ. ಮೇದಪ್ಪ ಆಯ್ಕೆ



ಕೊಡಗು ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷರಾಗಿ, ಜಿಲ್ಲಾ ಪಂಚಾಯಿತಿಯ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ ಅವರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಪಕ್ಷದ ಹಿರಿಯ ಮುಖಂಡ ಡಿ. ಹೆಚ್. ಶಂಕರಮೂರ್ತಿ ಅವರ ಸಮ್ಮುಖದಲ್ಲಿ ಈ ಆಯ್ಕೆ ನಡೆದಿದೆ. ಪಕ್ಷದ ಕಾರ್ಯಕರ್ತರಲ್ಲಿ ತೀವ್ರ ಕುತೂಹಲಕ್ಕೆ ಎಡೆಮಾಡಿಕೊಟ್ಟಿದ್ದ ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷರ ಆಯ್ಕೆಯು ಕೊನೆಗೂ ಪೈಪೋಟಿಯಿಲ್ಲದೆ ನಡೆದಂತಾಗಿದೆ. ಎಸ್.ಜಿ.ಮೇದಪ್ಪ ಅವರು ಈ ಹಿಂದೆ ೨ ಬಾರಿ ಜಿಲ್ಲಾ ಪಂಚಾಯತ್ ಸದಸ್ಯರಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಉತ್ತಮ ಸಂಘಟನಾ ಕೌಶಲ್ಯ ಹೊಂದಿರುವುದರಿಂದ, ಮುಂದಿನ ಚುನಾವಣೆಯನ್ನು ಬಿಜೆಪಿ ಜಿಲ್ಲೆಯಲ್ಲಿ ಸಮರ್ಥವಾಗಿ ಎದುರಿಸಲು ಅನುಕೂಲವಾಗುವ ಮೇರೆಗೆ, ಈ ಆಯ್ಕೆ ಮಾಡಲಾಗಿದೆ ಎಂದು ಬಿಜೆಪಿ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

ಇದುವರೆಗೆ ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷರಾಗಿದ್ದ ವಕೀಲ ಕೆ.ಜಿ. ಬೋಪಯ್ಯ ಅವರ ಅಧಿಕಾರ ಅವಧಿಯು ಈಗಾಗಲೇ ಮುಕ್ತಾಯಗೊಂಡಿರುವ ಮೇರೆಗೆ ನೂತನ ಅಧ್ಯಕ್ಷರ ಆಯ್ಕೆಯು ಪಕ್ಷದ ಬೆಳವಣಿಗೆಗೆ ಪೂರಕವಾಗಲಿದೆ ಎಂಬ ಆಶಯವನ್ನು ಬಿ.ಜೆ.ಪಿ. ಮುಖಂಡರು ವ್ಯಕ್ತಪಡಿಸಿದ್ದಾರೆ.

ಈ ಮುನ್ನ ಅಧ್ಯಕ್ಷ ಸ್ಥಾನಕ್ಕಾಗಿ ಆಕಾಂಕ್ಷಿಗಳಾಗಿದ್ದ ಇತರ ಪ್ರಮುಖರು, ರಾಜ್ಯ ನಾಯಕರ ಸಮಕ್ಷಮ ತಮ್ಮ ಉಮೇದುವಾರಿಕೆಯಿಂದ, ಹಿಂದೆ ಸರಿದ ಮೇರೆಗೆ ಎಸ್.ಜಿ. ಮೇದಪ್ಪ ಅವರ ಆಯ್ಕೆ ಸುಗಮವಾಯಿತೆಂದು ಈ ಮುಖಂಡರು ಸಂತಸ ವ್ಯಕ್ತಪಡಿಸಿದ್ದು, ಎಲ್ಲರೂ ಒಮ್ಮತದೊಂದಿಗೆ ಜಿಲ್ಲೆಯಲ್ಲಿ ದುಡಿಯುವಂತೆ ಸಲಹೆ ಮಾಡಿದ್ದಾರೆ.

-ಸಂಗಾತಿ.

ಸತ್ಯ ಯಾವಾಗಲೂ ಬಹು ಜನರಿಗೆ ಸ್ವಂತವಾದದ್ದೆಂದು ಹೇಳುವುದೇ ಒಂದು ಸುಳ್ಳಾಗಿರುತ್ತದೆ.

ಗೌಡ ಸಮಾಜ (ರಿ.) ಮರಗೋಡು
ಕೈಲು ಮುಹೂರ್ತ ಪ್ರಯುಕ್ತ ಸಂತೋಷ ಕೂಟ

ದಿನಾಂಕ 21-9-2003 ರ ಭಾನುವಾರದಂದು ಮರಗೋಡು ಗೌಡ ಸಮಾಜದ ಆಶ್ರಯದಲ್ಲಿ ವಾರ್ಷಿಕ ಕೈಲು ಮುಹೂರ್ತ ಹಬ್ಬದ ಪ್ರಯುಕ್ತ ಸಂತೋಷಕೂಟವನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಉದ್ಘಾಟನೆಯನ್ನು ಸಮಾಜದ ಗೌರವ ಅಧ್ಯಕ್ಷರಾದ ಶ್ರೀ ಬೈಮನ ಆರ್. ಪೊನ್ನಪ್ಪನವರು ನೇಗಿಲು - ನೊಗ, ಕತ್ತಿ - ಕೋವಿಗೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ, ಜ್ಯೋತಿ ಬೆಳಗಿಸಿ ತೆಂಗಿನ ಕಾಯಿಗೆ ಗುಂಡು ಹೊಡೆಯವುದರ ಮೂಲಕ ಸಮಾರಂಭಕ್ಕೆ ಚಾಲನೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷರಾದ ಶ್ರೀ ಕೊಂಪುಳೀರ ಪುಟ್ಟಯ್ಯನವರು ವಹಿಸಿದ್ದರು. ಕು||ಬಡುವಂಡ್ರ ಶಾಲಿನಿಯವರಿಂದ ಪ್ರಾರ್ಥನೆ ಮಾಡಲಾಗಿ, ಸಮಾಜದ ಉಪಾಧ್ಯಕ್ಷರಾದ ಶ್ರೀ ಪುಳಕಂಡ್ರ ಮುತ್ತಪ್ಪನವರು ಸರ್ವರನ್ನು ಸ್ವಾಗತಿಸಿದರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷರಾದ ಶ್ರೀ ಹೊಸೂರು ರಮೇಶ್ ಜೋಯಪ್ಪನವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ನಮ್ಮ ಜನಾಂಗ ಇನ್ನೂ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಹಿಂದುಳಿದಿರುವೆವು. ಜನಾಂಗದ ಯುವ ಪೀಳಿಗೆ ಸರ್ವ ವಿಧದಲ್ಲಿ ಕಂಕಣಬದ್ಧರಾಗಿ ಮುಂದೆ ಬರುವಂತಾಗಬೇಕೆಂದು ಕರೆ ಇತ್ತರು. ಮತ್ತೊಬ್ಬ ಅತಿಥಿ ಮರಗೋಡು ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷೆ ಶ್ರೀಮತಿ ಮಂಡೀರ ಭಾರತಿ ದೇವಯ್ಯನವರು ಮಾತನಾಡುತ್ತಾ, ಜನಾಂಗ ಬಾಂಧವರು ಇಂತಹ ಕಾರ್ಯಕ್ರಮಗಳನ್ನು ಎಲ್ಲಾ ಕೇಂದ್ರಗಳಲ್ಲಿ ಹಮ್ಮಿಕೊಳ್ಳುವಂತಾದರೇ, ಜನಾಂಗದ ಒಗ್ಗಟ್ಟನ್ನು ಪ್ರದರ್ಶಿಸಿದಂತಾಗುತ್ತದೆ ಎಂದು ಕರೆ ಇತ್ತರು.

ಸಮಾರಂಭದಲ್ಲಿ 2002-2003 ನೇ ಸಾಲಿನಲ್ಲಿ ಯುವ ಜನ ಸೇವೆ ಮತ್ತು ಕ್ರೀಡೆ ಇಲಾಖೆ ವತಿಯಿಂದ ನೀಡಲ್ಪಡುವ "ಜಿಲ್ಲಾ ಮಟ್ಟದ ಯುವ ಪ್ರಶಸ್ತಿ" ವಿಜೇತರಾದ ಸ್ಥಳೀಯ ಶ್ರೀ ಪೋತಂಡ್ರ ನಾಗೇಂದ್ರ ತೇಜಪ್ರಸಾದ್, ಅಧ್ಯಕ್ಷರು, ಗ್ರೀನ್ಸ್ ಯುವಕ ಸಂಘ, ಕಟ್ಟೆಮಾಡು ಮತ್ತು ಶ್ರೀಮತಿ ಚೆರಿಯಮನೆ ತಾರಾದೇವಿ ಜೀವರತ್ನ, ಅಧ್ಯಕ್ಷೆ,ಲತಾ ಯುವತಿ ಮಂಡಳಿ, ಮರಗೋಡು ಹಾಗೂ ಮಂಗಳೂರು ವಿ. ವಿ. ವತಿಯಿಂದ ನಡೆದ ಅಂತಿಮ ವರ್ಷದ ಎಂ.ಪಿ.ಎಡ್. ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕು ಪಡೆದು ಚಿನ್ನದಪದಕ ಪಡೆದ, ಗುಡ್ಡ ಗಾಡು ಓಟದ ಅಂತರ ವಿಶ್ವ ವಿದ್ಯಾನಿಲಯದ ಕ್ರೀಡಾ ಪಟು ಶ್ರೀ ಕರ್ಣಯನ ಅಶೋಕ ಈಶ್ವರ ಇವರುಗಳನ್ನು ಸಮಾಜದ ವತಿಯಿಂದ ಹಾರ ಹಾಕಿ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಸಮಾಜದ ವತಿಯಿಂದ ನಡೆಸಲಾದ ಲಘು ಕ್ರೀಡಾ ಕಾರ್ಯಕ್ರಮವನ್ನು ಶ್ರೀ ಕರ್ಣಯ್ಯನ ಈಶ್ವರ, ಶ್ರೀ ಕಟ್ಟೆಮನೆ ಸೋನ, ಶ್ರೀ ಪಾಂಡನ ಪ್ರಕಾಶ, ಶ್ರೀ ಉಳುವಾರನ ಹೀರಾಲಾಲ್, ಶ್ರೀಮತಿ ಪಾಂಡನ ಪುಷ್ಪವೇಣಿ ಮತ್ತು ಶ್ರೀಮತಿ ಕೊಂಪುಳೀರ ಕುಸುಮ ಬೋಪಯ್ಯನವರುಗಳು ತೀರ್ಪುಗಾರರುಗಳಾಗಿ ಕಾರ್ಯ ನಿರ್ವಹಿಸಿದ್ದರು. ಕ್ರೀಡಾ ವಿಜೇತರಿಗೆ ಬಹುಮಾನ ಮತ್ತು ಎಸ್. ಎಸ್. ಎಲ್.ಸಿ. ಹಾಗೂ 2 ನೇ ಪಿ.ಯು.ಸಿ 2002-2003 ನೇ ಸಾಲಿನ ಅಂತಿಮ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ಸಹಾಯಧನವನ್ನು ಅತಿಥಿಗಳಿಂದ ವಿತರಿಸಲಾಯಿತು. ಕೊನೆಯಲ್ಲಿ ಕಾರ್ಯಕ್ರಮವನ್ನು ನಿರೂಪಿಸಿದ ಸಮಾಜದ ಗೌರವ ಕಾರ್ಯದರ್ಶಿ ಶ್ರೀ ಜೈನೀರ ವೆಂಕಟೇಶ್‌ನವರು ಸರ್ವರನ್ನು ವಂದಿಸಿದರು.

ಕೊಡಗಿನ ಸಾಂಪ್ರದಾಯಿಕ ಊಟದೊಂದಿಗೆ ಸಮಾರಂಭ ಮುಕ್ತಾಯವಾಯಿತು.

ಜೈನೀರ ಎ. ವೆಂಕಟೇಶ್

ಹಾಸ್ಯ

ಒಂದಿನ ಪಿಳ್ಳಿ ಅಜ್ಜಿಗೆ ಹೊಡ್ತ್. ಆಗ ಅಜ್ಜಿ ಪಿಳ್ಳಿನ ಬೆನ್ನಿಗೊಂದ್ ಗುದ್ದಿಬುಟ್ಟ್ ಹೇಳ್ತ್"ಹೊಡೆಬ್ಯಾಡೆತ ಎಷ್ಟು ಸಾರಿ ಹೇಳೋಕು ನಿಂಗೆ? ನಂಗೆ ಬೇನ್ಸ್ ಬ್ಯಾನ್ನಾತ್. ಸ್ವಲ್ಪ ಹೊತ್ತಿಗೆ ಅಡಿಗೆ ಮನೇಲಿ ಅತ್ತೆಗೂ ಸೊಸೆಗೂ ಎಂತಕೊ ಜಗಳ ಹತ್ತಿತ್. ಅತ್ತೆ ಸೊಸೆಗೆ ಸಮಾ ಬೈತ್. ಮಜ ಇದನ ನೋಡೀ ನೋಡೀ ಸಾಕಾಗಿ ಹೇಳ್ತ್ - " ಎಂತಕವ್ವಾ ಹಂಗೆ ಬೈದೀಯಾ? ನಂಗೂ ಸನ ಬ್ಯಾನ್ನಾದ" ಇದನ ಕೇಳ್ಸಿಕಂಡ ಪಿಳ್ಳಿ ಅಜ್ಜಿನ ಕೇಳ್ತ್ -" ಅವ್ವಾ, ಅವ್ವಾ ನೀನ್ ಅಮ್ಮಂಗೆ ಬೈಯಕನ ಪೊಪ್ಪಂಗೆ ಎಲ್ಲಿ ಬ್ಯಾನ್ನಾತ್?"

2. ನಮ್ಮ ದೊಡ್ಡವ್ವ ಯಾಗಾರೂ ನಾವ್ಗೆ ನಾಕೈದ್ ಚಿಳ್ಳಿ ಪಿಳ್ಳೆಗಳಿಗೆ ಏನಾರ್ ತಿಂಡಿ ಕೊಡ್ತ್‌ತಿತ್ತ್. ಒಂದಿನ ನಮ್ಮ ದನ ಅವರ ಅವರ ಗದ್ದೆ ತ್ವಾಟಕೆ ನುಗ್ಗಿ ಮನಾರ ಸೌತೆ, ಬದನೆ, ಯಲಸಂಡೆ, ಮೆಣ್ಸ್, ಇಲಾತ್‌ಕಾಳ್ ಬಳ್ಳಿನ ತಿಂದಿತ್. ಮಾರ್‍ನೆದಿನ ನಮ್ಮ ಅಮ್ಮ ಗೂಡೆ ದೊಡವಾ ದೊಡವಾತ ಕರ್‌ಕಂಡ್ ಅವರ ಮನೆಗೆ ಹೋತ್. ಸ್ವಲ್ಪ ಹೊತ್ತಿಗೆ ಮಖ ಬಾಡ್ಸಿಕಂಡ್ ವಾಪಸ್ ಬಾತ್. ನಾವೆಲ್ಲಾ ಸುತ್ತ್ ಕಟ್ಟಿಕಂಡ್ ಅವಳ್ನ ದೊಡವ ಎಂತ ಕೊಟ್ಟಿತ್ತ್ ಕೇಳ್ದೊ. ಅವ್ವ ಬಿಸ್ಕೆಟ್ ಕಾಫಿತ ಹೇಳ್ತ್. ಸ್ವಲ್ಪ ಹೊತ್ತಿಗೆ ದೊಡವ್ವನ ಮಜ ಹಾರಿಕಂಡ್ ಬಂದ್ ಹೇಳ್ತ್, ಅಮ್ಮ ಗೂಡೆಗೆ ತ್ವಾಟಕೆ ದನ ಬುಟ್ಟದಕೆ ಅಪ್ಪ ಸಮಾ ಬೈತ್" ಗೊತ್ತಾತಲ ಅಮ್ಮನ ಬಿಸ್ಕೆಟ್ ಕಾಫಿ.

ರೇಣುಕಾ ವಸಂತ್, ಕೊಡಗು.

ವಿಮಾನದಿಂದ ಹಾರುವ ಪ್ಯಾರಚೂಟ್‌ನಲ್ಲಿ ಒಂದು ರಂಧ್ರವಿರದಿದ್ದರೆ ಧರೇ ಸೇರದ ಮರಣವನ್ನಪ್ಪಬೇಕಾಗುತ್ತದೆ.

ಸದಾ ಚಟುವಟಿಕೆಗಳ ಕೇಂದ್ರವಾಗಿರುವ ಬೆಂಗಳೂರಿನ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ 60 ರ ದಶಕದಲ್ಲಿ ಕೂಸಾಗಿ ಹುಟ್ಟಿಕೊಂಡ ಈ ಸಮಾಜವು ಇಂದು ಹೆಮ್ಮರವಾಗಿ ಬೃಹದಾಕಾರವಾಗಿ ಬೆಳೆದು ಸಾವಿರಕ್ಕೂ ಹೆಚ್ಚು ನಮ್ಮ ಗೌಡ ಬಾಂಧವರು ಸದಸ್ಯರಾಗಿದ್ದಾರೆ. ನಮ್ಮ ಗೌಡ ಬಾಂಧವರನ್ನು ಒಂದು ವೇದಿಕೆಯಲ್ಲಿ ತರುವುದಕ್ಕೆ ಕ್ರೀಡಾಸ್ಪರ್ಧೆ, ಸಾಂಸ್ಕೃತಿಕ ಚಟುವಟಿಕೆಗಳು, ಕೈಲ್‌ಮುಹೂರ್ತ, ಸಂತೋಷಕೂಟಗಳನ್ನು ಏರ್ಪಡಿಸುವುದರ ಮೂಲಕ ರಚನಾತ್ಮಕವಾದ ಕಾರ್ಯನಿರ್ವಹಿಸುತ್ತಿದೆ. ಈ ಸಮಾಜದ ಪ್ರಮುಖವಾದ ಸಮಾರಂಭ ತಾರೀಖು 12-10-2003ರಂದು ಸಮಾಜ ಹೊಸದಾಗಿ ಕೊಂಡುಕೊಂಡ ಪೀಣ್ಯಬಳಿಯ ನೆಲದದರನ ಹಳ್ಳಿಯಲ್ಲಿ ಭವ್ಯವಾಗಿ ಹಾಕಿದ ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ದಂಬೆಕೋಡಿ ಆನಂದನವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯಕ್ರಮದ ವಿವರದಂತೆ ಸಮಾಜದ ವಾರ್ಷಿಕ ಮಹಾ ಸಭೆ ರಮ್ಮತಿಮ್ಮಪ್ಪಗೌಡರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಆಯುಧ ಪೂಜೆಯನ್ನು ನೆರವೇರಿಸಿಕೊಟ್ಟವರು ಹಿರಿಯರಾದ ಪೂಜಾರಿರ ಪೂವಯ್ಯನವರು. ವಾರ್ಷಿಕ ಮಹಾಸಭೆಗೆ ನೆರೆದಿದ್ದ ಬಾಂಧವರನ್ನು ಸ್ವಾಗತಿಸಿದವರು ಸಮಾಜದ ಉಪಾಧ್ಯಕ್ಷ ಹಾಗೂ ಬಿ. ಇ. ಎಲ್‌ನಲ್ಲಿ ಪರ್ಸನಲ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ತಿಮ್ಮಪ್ಪಗೌಡರು. 2002-03 ರ ವಾರ್ಷಿಕ ವರದಿಯನ್ನು ಸಭೆಯ ಮುಂದಿಟ್ಟವರು ಗೌರವ ಕಾರ್ಯದರ್ಶಿಗಳಾದ ನಂಗಾರು ನಿಂಗರಾಜುರವರು. ಈ ವರದಿಯ ಪ್ರಕಾರ ಪ್ರಸ್ತುತ ಆಡಳಿತ ಮಂಡಳಿಯಲ್ಲಿ 30 ಮಂದಿ ಸದಸ್ಯರಿದ್ದು, 10 ಮಂದಿ ತಜ್ಞರು ಕೂಡಿರುವ ವಿಶೇಷ ಆಹ್ವಾನಿತರಿದ್ದಾರೆ. ಗೌರವ ಕಾರ್ಯದರ್ಶಿಯವರ ವರದಿಯಂತೆ 1995ರಿಂದಲೂ ಮಾಯಾನಗರಿ ಬೆಂಗಳೂರಿನ ಯಾಂತ್ರಿಕ ಜೀವನದಿಂದಲೂ ಹೊರಬರಲು ಹಾಗೂ ಜನರನ್ನು ಒಂದೆಡೆ ಸೇರಲು ದೊಡ್ಡ ಪ್ರಮಾಣದಲ್ಲಿ ಪಂದ್ಯಾಟ, ಕ್ರೀಡಾಕೂಟಗಳನ್ನು ನಡೆಸುತ್ತಾ ಬಂದಿದ್ದಾರೆ. ಅದರಂತೆ 24-8-2003 ರಂದು ಷಟ್ಲ್ ಬ್ಯಾಡ್ಮಿಂಟನ್ ಪಂದ್ಯಾಟವನ್ನು ಆರ್.ಟಿ. ನಗರದ ಪಟೇಲ್ಸ್ ಇನ್ ಕ್ಲಬ್‌ನಲ್ಲಿ ನಡೆಸಿಕೊಡಲಾಯಿತು. ಸುಮಾರು 250 ಮಂದಿ ಬಾಂಧವರು ಭಾಗವಹಿಸಿದ್ದರು. ಅನಂತರ 31-8-2003 ರಂದು ಬಿ. ಇ. ಎಂ. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಪ್ರಪ್ರಥಮ ಬಾರಿಗೆ ವಯಸ್ಕರಿಗೆ ಕ್ರಿಕೆಟ್ ಪಂದ್ಯಾಟವನ್ನು ನಡೆಸಿಕೊಡಲಾಯಿತು. ಸುಮಾರು 12 ತಂಡಗಳು ಭಾಗವಹಿಸಿದ್ದು, ಮೈಸೂರು ಕೊಡಗಿನಿಂದಲೂ ತಂಡಗಳು ಬಂದಿದ್ದು ವಿಶೇಷ. ಮೈಸೂರಿನ ಗೌಡ ಕ್ರಿಕೆಟ್ ತಂಡವು ಪ್ರಥಮ ವಿಜಯ ಸಾಧಿಸಿತ್ತು. ತಾರೀಖು 28-9-2003 ರಂದು ಬಿ. ಇ. ಎಂನ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಗುಡ್ಡೇರ ಮೊಣ್ಣಯ್ಯ, ನಿವೃತ್ತ ಮುಖ್ಯ ಇಂಜಿನಿಯರ್ ಹಾಗೂ ಕೆ. ಎಸ್. ಆನಂದ, ಡಿ.ಸಿ.ಎಫ್ ಬೆಂಗಳೂರು ಇವರು ಕ್ರೀಡಾಕೂಟವನ್ನು ಉದ್ಘಾಟಿಸಿದರು. ಸುಮಾರು 600-700 ಮಂದಿ ಬಿಸಿಲಿನ ಬೇಗೆಯಲ್ಲೂ ಭಾಗವಹಿಸಿದ್ದು, ಕ್ರೀಡಾಂಗಣದಲ್ಲಿ ಹಬ್ಬದ ವಾತಾವರಣವನ್ನು ಮೂಡಿಸಿತ್ತು. ಅಥ್ಲೆಟಿಕ್ ವಿಭಾಗವಲ್ಲದೆ ವಾಲಿಬಾಲ್, ಥ್ರೋಬಾಲ್, ಏರ್‌ಗನ್ ಶೂಟಿಂಗ್, ಕಾಯಿಗೆ ಕಲ್ಲು ಹೊಡೆಯುವುದು ಮುಂತಾದ ಸಂಪ್ರದಾಯಿಕ ಆಟಗಳನ್ನು ಬಹಳ ಯಶಸ್ವಿಯಾಗಿ ನಡೆಸಿಕೊಡಲಾಯಿತು.

ವಾರ್ಷಿಕ ಕ್ರೀಡಾಕೂಟವಲ್ಲದೆ ಸಾಂಸ್ಕೃತಿಕ ಸಾಂಪ್ರದಾಯವನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಸ್ಪರ್ಧೆಗಳನ್ನು 14-9-2003 ರಂದು ಎ.ಡಿ.ಎ. ಕಲಾ ಮಂದಿರದಲ್ಲಿ ದೇವರಗೊಂಡ ಶಿವರಾಂ, ಅಪರ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಕೊಡಗಿನಿಂದ ಬೆಂಗಳೂರಿಗೆ ಬಂದಿದ್ದ ನಂಗಾರು ಮಾಚಮ್ಮನವರು ಉದ್ಘಾಟಿಸಿದರು. ಸುಮಾರು 600 ಕ್ಕೂ ಹೆಚ್ಚು ಕಲಾಭಿಮಾನಿಗಳು ಈ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಈ ವರ್ಷದ ವಿಶೇಷತೆ. ಭಾವಗೀತೆ, ಭಕ್ತಿಗೀತೆ, ಜನಪದಗೀತೆ, ಚಿತ್ರಗೀತೆ, ಸೋಬಾನೆ, ನಾಟಕ ಯಕ್ಷಗಾನ, ಭಾರತೀಯ ಹಾಗೂ ಪಾಶ್ಚಿಮಾತ್ಯ, ನೃತ್ಯಗಳು, ರಸಪ್ರಶ್ನೆ ಸ್ಥಳದಲ್ಲಿ ಚಿತ್ರ ಬರೆಯುವುದು ನೋಡಲು ನಯನಮನೋಹರವಾಗಿತ್ತು.

ಈ ಸಮಾಜವು 29-6-2003 ರಂದು ಬೆಂಗಳೂರಿನ ಕೆ. ಆರ್. ಪುರಂನಬಿ.ಜಿ.ಎಲ್ ಕಲ್ಯಾಣಮಂಟಪದಲ್ಲಿ ಆದರ್ಶದಂಪತಿ ಹಾಗೂ ವಧುವರರ ಮುಖಾಮುಖಿ ಕಾರ್ಯಕ್ರಮವನ್ನು ಏರ್ಪಡಿಸಿದ್ದರು ಎಂದು ಗೌರವ ಕಾರ್ಯದರ್ಶಿಗಳಾದ ನಂಗಾರು ನಿಂಗರಾಜು ತಮ್ಮ ವರದಿಯಲ್ಲಿ ತಿಳಿಸಿದರು. ಈ ಆದರ್ಶ ದಂಪತಿ ಕಾರ್ಯಕ್ರಮವನ್ನು ಉದ್ಘಾಟಿಸಿದವರು ಕೊಡೆಕಲ್ಲು ಪುಟ್ಟಪ್ಪ ಮತ್ತು ಸರಸ್ವತಿ ದಂಪತಿಗಳು ಹಾಗೂ ನಳಿನಾಕ್ಷಿ ಗೌಡ ದಂಪತಿಗಳು. ಸುಮಾರು 700-800 ಮಂದಿ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ವಧು-ವರ ಮುಖಾಮುಖಿ ಕಾರ್ಯಕ್ರಮದಲ್ಲಿ ಅನೇಕ ಭಾವಿ ವಧುವರರು ತಮ್ಮ ಬಾಳ ಸಂಗಾತಿಗಳನ್ನು ಹುಡುಕಿಕೊಂಡರು. ಗೌರವ ಕಾರ್ಯದರ್ಶಿಯವರ ಪ್ರಕಾರ ಗಂಗಾನಗರದ ಮುಖ್ಯ ಕಛೇರಿ (080-3433014) ಯಲ್ಲಿ 100 ಕ್ಕೂ ಹೆಚ್ಚು ಭಾವಿ ವಧುವರರ ಮಾಹಿತಿ ಇದೆ. ಇದರ ಪ್ರಯೋಜನವನ್ನು ನಮ್ಮಬಾಂಧವರು ಸದುಪಯೋಗಪಡಿಸಿಕೊಳ್ಳಬಹುದು. ಈ ಸಮಾಜದ ಮತ್ತೊಂದು ಮಹತ್ವದ ಸಾಧನೆಯೆಂದರೆ ಕರ್ನಾಟಕ ಸರ್ಕಾರದ ಹಿಂದುಳಿದ ಪಟ್ಟಿಯಲ್ಲಿ "ಗೌಡ" ಎಂಬ ಪದವನ್ನು ಸರಿಪಡಿಸಿ ನಮ್ಮ ಬಾಂಧವರಿಗೆ ಪ್ರಯೋಜನ ಕಲ್ಪಿಸಿದ್ದು, ಇದಕ್ಕಿಂತಲೂ ಒಂದು ಮಹತ್ ಸಾಧನೆಯೆಂದರೆ Gowda/ Gouda ಎಂಬ ನಮ್ಮ ಜಾತಿಯನ್ನು ಕೇಂದ್ರ ಹಿಂದುಳಿದ ಆಯೋಗದ ಮುಂದೆ ಯಶಸ್ವಿಯಾಗಿ ಮಂಡಿಸಿ ಹಿಂದುಳಿದ ಪಟ್ಟಿಯಲ್ಲಿ ಸೇರಿಸಬೇಕೆಂದು ಒತ್ತಾಯಿಸಿದ ಫಲವಾಗಿ ಅದು ಇಂದು ಕೇಂದ್ರ ಹಿಂದುಳಿದ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ ಹಾಗೂ ಇದರಲ್ಲಿ ನಮ್ಮ ಸಮಾಜವಲ್ಲದೆ ಅನೇಕ ಸಮಾಜಗಳು, ಗಣ್ಯರು ಶ್ರಮಿಸಿದ್ದಾರೆಂದು ಗೌರವ ಕಾರ್ಯದರ್ಶಿಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಆ ವರದಿಯಂತೆ ಈ ಸಮಾಜದ ಇನ್ನೊಂದು ಮೈಲಿಗಲ್ಲಿನ ಸಾಧನೆಯೆಂದರೆ ದಾಸರಹಳ್ಳಿಯ ಗೃಹಲಕ್ಷ್ಮಿಯ ಬಡಾವಣೆಯಲ್ಲಿ 12,000 ಚದರಡಿಯ ನಿವೇಶನವನ್ನುಕೊಂಡಿದ್ದು, 4 ವರ್ಷದ ಹಿಂದೆ ಈ ನಿವೇಶನವನ್ನು ಕೊಂಡುಕೊಂಡಾಗ ಸಮಾಜದಲ್ಲಿದ್ದದ್ದು ಬರೇ 6 ಲಕ್ಷ ರೂ. ಮಾತ್ರ. ಇದರ ಸಹಾಯಾರ್ಥವಾಗಿ ನಿಂತದ್ದು ಕೆಂಪೇಗೌಡ ರೂರಲ್ ಹೌಸ್ ಬಿಲ್ಡಿಂಗ್ ಸೊಸೈಟಿ ಮತ್ತು ಇನ್ನಿತರರು.

ಗೌರವ ಕಾರ್ಯದರ್ಶಿಯ ವರದಿಯ ನಂತರ ಗೌಡ ಸಮಾಜದ ಮಹಿಳಾ ಕಾರ್ಯದರ್ಶಿಗಳಾದ ವೈಶಾಲಿ ಅಮರನಾಥ 2002-03 ರ ವರದಿಯನ್ನು ಮುಂದಿಟ್ಟರು. ಅನಂತರ ಸಮಾಜದ ಖಜಾಂಚಿಯಾದ ಕೇವಳ ರವೀಂದ್ರನಾಥರವರು 2002-03 ನೇ ಸಾಲಿನ ಲೆಕ್ಕಪತ್ರದ ವರದಿಯನ್ನು ಸಭೆಯಲ್ಲಿ ಮಂಡಿಸಿದರು. ನಂತರ ಅಧ್ಯಕ್ಷರಾದ ಆನಂದರವರು ಮಾತನಾಡಿ ಲೆಕ್ಕ ಪತ್ರವನ್ನು ಎಳೆಎಳೆಯಾಗಿ ವಿಶ್ಲೇಷಣೆ ಮಾಡಿದರು. ನಿವೇಶನದ ಬಗ್ಗೆ ಮಾತನಾಡಿ 18 ಲಕ್ಷದ ಈ ನಿವೇಶನ ಇಂದು 35 ಲಕ್ಷ ಬೆಲೆ ಬಾಳುತ್ತದೆ. ಇದು

ಸಮಾಜದ ಒಂದು ಮಹತ್ವದ ಸಾಧನೆ ಎಂದು ಜನರಿಗೆ ಮನವರಿಕೆ ಮಾಡಿಕೊಟ್ಟರು. ಈ ಮಹಾಸಭೆಯ ಕಾರ್ಯಕ್ರಮವನ್ನು ನಡೆಸಿಕೊಟ್ಟವರು ಸಮಾಜದ ಯುವ ಪ್ರತಿಭೆ ಶ್ರೀ ಮಾಣಿಬೆಟ್ಟು ಬೋಜಪ್ಪನವರು ಈ ಸಮಾಜದ ಕೈಲ್‌ಮುಹೂರ್ತ ಹಬ್ಬ ಆಚರಣೆ ಹಾಗೂ ಸಂತೋಷಕೂಟ ಸಮಾರಂಭ ಸುಮಾರು 11 ಗಂಟೆಗೆ ಪ್ರಾರಂಭವಾಯಿತು. ರಾತ್ರಿ ಇಡೀ ಮಳೆ ಬಿದ್ದರೂ ಲೆಕ್ಕಿಸದೆ ಸುಮಾರು 1000 ಕ್ಕಿಂತಲೂ ಜನ ಬಾಂಧವರು ಸಭೆಯಲ್ಲಿ ಕಿಕ್ಕಿರಿದು ತುಂಬಿದ್ದರು. ಸಭೆಯು ರಾಜ್ಯ ಪ್ರಶಸ್ತಿ ವಿಜೇತೆ ಕುಮಾರಿ ಸಹನಾಳ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಮುಖ್ಯ ಅತಿಥಿಗಳಾಗಿ ಖ್ಯಾತ ಶಿಕ್ಷಣ ತಜ್ಞರು, ನಿವೃತ್ತ ಪ್ರಾಧ್ಯಾಪಕರು ಹಾಗೂ ಸ್ಥಾಪಕ ನಿರ್ದೇಶಕರು "Centre for Studies in Education" ಮಕ್ಕಳ ಮಂಟಪ, ದರ್ಬೆಯ ನಂಗಾರು ಸುಕುಮಾರ ಗೌಡ, ಪ್ರಸಿದ್ಧ ಉದ್ಯಮಿ ಕಾರ್ಲೆ ಗಾರ್ಮೆಂಟ್ಸ್‌ನ ಮುಖ್ಯಸ್ಥ ಶ್ರೀ ಸುದರ್ಶನ ಕಾರ್ಲೆ ಹಾಗೂ ಮಡಿಕೇರಿ ಪುರಸಭೆಯ ಪ್ರಪ್ರಥಮ ಮಹಿಳಾ ಅಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣನವರು ಆಗಮಿಸಿದ್ದರು.

ಅತಿಥಿಗಳನ್ನು ಹಾಗೂ ಬಂದು ಬಾಂಧವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದವರು ಸಮಾಜದ ಅಧ್ಯಕ್ಷರಾದ ದಂಬೆಕೋಡಿ ಆನಂದರವರು ದೀಪ ಬೆಳಗಿಸುವುದರ ಮೂಲಕ ಸಭೆಯ ಉದ್ಘಾಟನೆಯನ್ನು ನೆರವೇರಿಸಲಾಯಿತು. ಅನಂತರ ಮುಖ್ಯ ಅತಿಥಿಗಳಾದ ನಂಗಾರು ಸುಕುಮಾರ ಗೌಡ, ಸುದರ್ಶನ್ ಕಾರ್ಲೆ ಕೂಡಕಂಡಿ ಕಾವೇರಮ್ಮ ಸೋಮಣ್ಣ, ಕರ್ನಾಟಕ ಹಣಕಾಸು ನಿಗಮದ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿ ಬಡ್ತಿ ಹೊಂದಿದ ಶ್ರೀ ದಂಬೆಕೋಡಿ ಆನಂದರವರು ಮತ್ತು ಅವರ ಧರ್ಮಪತ್ನಿ ಮಾಲಿನಿ ಆನಂದ, ಐಟಿ ಕಾರ್ಲೆಯ ಜನರಲ್ ಮ್ಯಾನೇಜರ್ ಆಗಿ 26 ವರ್ಷಗಳ ಸತತ ಸೇವೆ ಸಲ್ಲಿಸಿ ಅವಿಶ್ರಾಂತವಾಗಿ ದುಡಿಯುತ್ತಿರುವ ಕಡಂಬಡ್ಕ ಅಣ್ಣೇಗೌಡ ಉತ್ತಯ್ಯನವರುಗಳನ್ನು ತುಂಬಿದ ಸಭೆಯಲ್ಲಿ ಸನ್ಮಾನಿಸಿ ದವರು ಶ್ರೀ ಪೂಜಾರಿರ ಮೊಣ್ಣಪ್ಪ ಶ್ರೀ ಡಿ .ವಿ. ಶಿವರಾಂ, ಶ್ರೀ ಅನಂತರಾಜ ಗೌಡ, ಮತ್ತು ಶ್ರೀ ಮೇದಪ್ಪನವರುಗಳು. ಇವರೆಲ್ಲರ ಸಂಕ್ಷಿಪ್ತ ಪರಿಚಯವನ್ನು ಸಭೆಗೆ ಮಾಡಿಕೊಟ್ಟವರು ವಕೀಲರಾದ ಪ್ರವೀಣ್ ಹಾಗೂ ನಂಗಾರು ನಿಂಗರಾಜುರವರು. ಪ್ರಶಸ್ತಿ ವಿಜೇತರು ಹಾಗೂ ಪಿ.ಯು.ಸಿ, ಎಸ್.ಎಸ್. ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದವರಿಗೆ ಮುಖ್ಯ ಅತಿಥಿಗಳಿಂದ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಪುರಸ್ಕೃತರಿಗೆ ನಗದು ಹಾಗೂ ನೆನಪಿನ ಕಾಣಿಕೆಯುನ್ನು ನೀಡಲಾಯಿತು. ಈ ಕಾರ್ಯಕ್ರಮವನ್ನು ನಡೆಸಿಕೊಟ್ಟವರು ಮೂಲೆಮಜಲು ಯಶೋಧ ಚಿನ್ನಪ್ಪನವರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ನಂಗಾರೂ ಸುಕುಮಾರ ಗೌಡ ಮಾತನಾಡುತ್ತಾ, ಅಧ್ಯಕ್ಷರಾದ ಆನಂದರವರ ಪ್ರೀತಿಯ ಕರೆಗೆ ನಾನು ಈ ಸಭೆಯಲ್ಲಿ ಭಾಗವಹಿಸುತ್ತಿರುವುದಾಗಿ ಹೇಳಿ, ತಮ್ಮ ಮಾತಿನ ಮೋಡಿಯಿಂದ ಸಭಿಕರನ್ನು ಮೂಕ ವಿಸ್ಮಿತರನ್ನಾಗಿ ಮಾಡಿದರು. ಸಾಂಸ್ಕೃತಿಕ ಚಟುವಟಿಕೆಗಳು ಜನರನ್ನು ಒಂದೆಡೆ ಸೇರಿಸುತ್ತವೆ ಹಾಗೂ ಜನರು ಸರಳ ಜೀವನ ನಡೆಸಬೇಕು. ಮದುವೆ ಇತ್ಯಾದಿ ಸಾಮಾಜಿಕ ಚಟುವಟಿಕೆಗಳಿಗೆ ದುಂದುವೆಚ್ಚ ಮಾಡದೆ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕು. ಹಾಗೂ ನಮ್ಮ ಮಾತೃಭಾಷೆಯಾದ ಗೌಡ ಕನ್ನಡ ಅರೆಭಾಷೆ ಹಾಗೂ ತುಳು ಭಾಷೆಯನ್ನು ಪಿತ್ರಾರ್ಜಿತ ಭಾಷೆಯಾಗಿ ನಾವು ಆಡಿಬೆಳೆಸಬೇಕೆಂದು ಜನರಿಗೆ ಕರೆಕೊಟ್ಟರು. ಇನ್ನೊಬ್ಬ ಮುಖ್ಯ ಅತಿಥಿ ಮಡಿಕೇರಿ ಪುರಸಭೆಯ ಪ್ರಪ್ರಥಮ ಮಹಿಳಾ ಅಧ್ಯಕ್ಷೆ ಹಾಗೂ ಉಕ್ಕಿನ ಮಹಿಳೆ ಎಂದೇ ಖ್ಯಾತರಾಗಿರುವ ಕೂಡಕಂಡಿ ಕಾವೇರಮ್ಮನವರು ಮಾತನಾಡಿ ನಾನು ಕುಲ ದೇವರ ಆಶೀರ್ವಾದದಿಂದ ಹಾಗೂ ಹಿರಿಯರ ಪ್ರೋತ್ಸಾಹದಿಂದ ಈ ಪದವಿಗೇರಿದೆ. ಅಂತೆ ಮಹಿಳೆಯರು ಅಬಲೆಯರಲ್ಲ, ಸಬಲೆಯರು. ಅವರ ಏಳಿಗೆಯಲ್ಲಿ ಪುರುಷರು ಪ್ರಮುಖ ಪಾತ್ರ ವಹಿಸಬೇಕು ಎಂದು ನುಡಿದವರಲ್ಲದೆ ಬೆಂಗಳೂರಿನ ಗೌಡ ಸಮಾಜದ ಈ ನಿವೇಶನದ ನಿರ್ಮಾಣಕ್ಕೆ ಪ್ರತಿಯೊಬ್ಬರು ರೂ. 10,000/- ಕೊಟ್ಟು ಭವ್ಯವಾದ ಕಲ್ಯಾಣ ಮಂಟಪವನ್ನು ನಿರ್ಮಿಸಬೇಕೆಂದು ಬಾಂಧವರಿಗೆ ಕರೆಕೊಟ್ಟರು. ಖ್ಯಾತ ಉದ್ಯಮಿ ಸುದರ್ಶನ ಕಾರ್ಲೆ 15 ಜನ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡುವುದಾಗಿ ಘೋಷಣೆ ಮಾಡಿದರಲ್ಲದೆ ಎಂದಿನಂತೆ ತಮ್ಮ ಉದ್ಯಮದಲ್ಲಿ ಗೌಡರಿಗೆ ಆದ್ಯತೆ ನೀಡುವುದಾಗಿ ಪ್ರಕಟಿಸಿದರು.

ಕಾರ್ಯನಿರ್ವಾಹಕರಾದ ನಂಗಾರು ನಿಂಗರಾಜುರವರು ಅನೇಕ ಪ್ರಕಟಣೆಯನ್ನು ಪ್ರಕಟಿಸಿದರು. ಅದರಲ್ಲಿ ಪ್ರಥಮ ಬಾರಿಗೆ ಸಲಹೆ ಸೂಚನೆಗಳನ್ನು ನೀಡಲು ಒಂದು ಪೆಟ್ಟಿಗೆಯನ್ನು ಇಟ್ಟಿರುವುದಾಗಿ ಅದರಲ್ಲಿ ಬಂದು ಬಾಂಧವರು ತಮ್ಮ ಸಲಹಾ, ಸೂಚನೆ, ಚಿಂತನ-ಮಂಥನ ಸೂಚಿಸುವುದು ಅಗತ್ಯವೆಂದರು. ಸಮಾಜದ ವತಿಯಿಂದ ಮಡಿಕೇರಿಯಿಂದ ಆಗಮಿಸಿದ ಅಡುಗೆ ತಜ್ಞರಾದ ಗೋಪಿಸ್ವಾಮಿಯವರನ್ನು ಕರೆಸಿ ಭೋಜನವನ್ನು ಏರ್ಪಡಿಸಲಾಯಿತು. ಭೋಜನದ ನಂತರ ಆರ್ಕೆಸ್ಟ್ರಾ ಕಾರ್ಯಕ್ರಮವನ್ನುವಾಸುದೇವ್, ಹರೀಶ್, ತೇಜಸ್ವಿನಿ, ಕೋಟೆರ ಹರೀಶ್‌ರವರ ಗಾಯನದಲ್ಲಿ ಕಾರ್ಯಕ್ರಮವನ್ನು ಸುಗಮವಾಗಿ ನಡೆಸಲು ಶ್ರಮಿಸಿದವರೆಂದರೆ ಶ್ರೀ ತೆಕ್ಕಡೆ ಕಾವೇರಪ್ಪನವರು. ಇದು ನಮ್ಮ ಯುವ ಪ್ರತಿಭೆಗೆ ನೀಡಿದ ತಕ್ಕ ಪುರಸ್ಕಾರವಾಗಿದೆ.

ಅನಂತರ ಸಾಂಸ್ಕೃತಿಕ ಸ್ಪರ್ಧೆಯಲ್ಲಿ, ಕ್ರೀಡಾಕೂಟದಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಜೇತರಾದವರಿಗೆ 300 ಕ್ಕೂ ಹೆಚ್ಚು ಬಹುಮಾನವನ್ನು ನೀಡಲಾಯಿತು. ಬಹುಮಾನ ವಿತರಣೆ ಕಾರ್ಯಕ್ರಮವನ್ನು ನಡೆಸಿಕೊಟ್ಟವರು ಪ್ರವೀಣ್ ಮತ್ತು ನಂಗಾರು ಸುಮಿತ ನಿಂಗರಾಜು.

ಪೋರೆಯನ ಪ್ರಕಾಶ್‌ರವರು 2002-04 ರ ಕಾರ್ಯಕಾರಿ ಮಂಡಳಿಯ returning Officer ಆಗಿ ಈ ಕೆಳಗಿನ ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಆದದ್ದನ್ನು ಪ್ರಕಟಿಸಿದರು.

ಶ್ರೀ ದಂಬೆಕೋಡಿ ಆನಂದ, ಶ್ರೀ ಎಸ್. ತಿಮ್ಮಪ್ಪಗೌಡ, ನಂಗಾರು ನಿಂಗರಾಜು, ಕೆ ರವೀಂದ್ರನಾಥ, ಹೊದ್ದೇಟಿ ಭವಾನಿಶಂಕರ್, ಅಡ್ಕಾರ್ ಹೂವಪ್ಪಗೌಡ, ಬೊಳಾಣ ಸಾಂತಪ್ಪ ಗೌಡ, ಕೊಟೇರ ಪೊನ್ನಪ್ಪ, ಕನ್ನಡ್ಕ ಗಂಗಾಧರ ಗೌಡ, ಪಾಣತ್ತಲೆ ಕುಶಾಲಪ್ಪ, ಕೊಡೆಕಲ್ಲು ನಾರಾಯಣ ಗೌಡ, ಎಂ.ಕೆ. ಗೌಡ, ಕೆ. ಎಂ. ವಿಠಲಗೌಡ, ಕೆ.ಆರ್. ಬಸಪ್ಪ, ಶಿರಗಜೆ ಪೊನ್ನಪ್ಪ, ಹೊಸೊಕ್ಲು ಪದ್ಮನಾಭ, ಮೊಟ್ಟೇರ ಕುಶಾಲಪ್ಪ, ತೆಕ್ಕಡೆ ಕಾವೇರಪ್ಪ, ಅಮ್ಮೆ ತಿಲಕ್, ಮಾಣಿಬೆಟ್ಟು ಬೋಜಪ್ಪ, ಮೂಲೆಮಜಲು ಯಶೋದಮ್ಮ, ವೈಶಾಲಿ ಅಮರ್‌ನಾಥ್, ಎಂ. ಶಿವಪ್ಪ, ತೇನನ ರಾಜೇಶ್, ಪದ್ಮನಾಭ ಕೊಳಚಾರ್, ಪ್ರವೀಣ್, ಹರೀಶ್, ಕೂಡಕಂಡಿರ ಹೊನ್ನಮ್ಮ, ಜಾಜಿ ಉತ್ತಪ್ಪ, ಪಿ. ಎಂ. ಕುಶಾಲಪ್ಪ, ಕಾರ್ಯ ನಿರ್ವಾಹಕರು, ಮೋದನ ಪ್ರಿಯಾ.

ಭವ್ಯವಾದ ವೇದಿಕೆ ಮತ್ತು ಸಕಲ ಸೌಲಭ್ಯಗಳನ್ನು ಒದಗಿಸಿರುವವರು ಸುಳ್ಯಕೋಡಿ ಪ್ರದೀಪ್‌ಕುಮಾರ್ ಮತ್ತು ಅಮರನಾಥ ಹಾಗೂ ಕುಟುಂಬಸ್ಥರು.

ಆಮಂತ್ರಣ ಪತ್ರಿಕೆಯ ಪ್ರಾಯೋಜಕರು ಮಹೇಶ್ ಮತ್ತು ಪದ್ಮ ಕೋಲ್ಚಾರ್. ಕೊಡುಗೈ ದಾನಿಗಳು ಡಾ|| ಗುಡ್ಡೆ ಚಿಣ್ಣಯ್ಯ ಕೆ. ಎಸ್. ಆನಂದ್ ಲೋಕನಾಥ್, ವೆಂಕಪ್ಪಗೌಡ, ಕೆದಂಬಾಡಿ ನಂದಗೋಪಾಲ್, ದಂಬೆಕೋಡಿ ಚಿಣ್ಣಪ್ಪ, ಮುಕ್ಕಾಟಿ ಚಂದ್ರಶೇಖರ್, ಡಾ|| ವಸಂತ್‌ಕುಮಾರ್, ಡಾ|| ಹೇಮಂತ್. ಭೋಜನ ಸಮಿತಿಯ ಸದಸ್ಯರು ಬಹಳಷ್ಟು ಕಷ್ಟಪಟ್ಟು ಉತ್ತಮ ಭೋಜನವನ್ನು ಜನತೆಗೆ ನೀಡಿದರು. ಉಪಾಧ್ಯಕ್ಷರಾದ ಶ್ರೀ ತಿಮ್ಮಪ್ಪಗೌಡರ ವಂದನಾರ್ಪಣೆ ಯೊಂದಿಗೆ ಸಭೆ ಮುಕ್ತಾಯವಾಯಿತು.

ವರದಿ : ಕೆ. ಕೆ. ಸುಮಿತ ಮತ್ತು ಮೂಲೆ ಮಜಲು ಯಶೋದಮ್ಮ.

ಮೌನಂ ಪಂಡಿತ ಲಕ್ಷಣಂ, ಉದ್ಯೋಗಂ ಪುರುಷ ಲಕ್ಷಣಂ

ಚಿಂತನೆ

ಆಚಾರ, ಕಲೆ, ವಿಚಾರ, ಸಂಸ್ಕೃತಿಗಳಲ್ಲಿ ತನ್ನದೇ ಆದ ವೈವಿಧ್ಯತೆಯನ್ನು ಹೊಂದಿರುವುದು ಅರೆಭಾಷೆ ಮಾತನಾಡುವ ಗೌಡ ಜನಾಂಗ. ಈ ಅರೆಭಾಷೆಯು ಬರೀ ಗೌಡ ಸಮುದಾಯದವರಿಗೆ ಮಾತ್ರ ಸೀಮಿತವಾದದ್ದು ತುಂಬಾ ವಿಶೇಷ. ಹಾಗೇ ಅರೆಗನ್ನಡಭಾಷೆ ಗೌಡರುಗಳ ಧಾರ್ಮಿಕ ಕ್ರಿಯಾ ವಿಧಿಗಳು, ಕರ್ಮಗಳು ಉಳಿದ ಪಂಗಡಗಳಿಗಿಂತ ಭಿನ್ನವಾಗಿದ್ದು, ವೈಶಿಷ್ಟ್ಯ ಪೂರ್ಣ, ತುಂಬಾ ಅಪರೂಪದ್ದೂ ಮತ್ತು ಯೋಗ್ಯವಾದವೂ ಆಗಿದೆ.

ಗೌಡ ಜನಾಂಗವೆಂದ ಕೂಡಲೇ ಇತರರ ಗಮನ ದ. ಕನ್ನಡ ಮತ್ತು ಕೊಡಗು ಗೌಡರುಗಳ ಕಡೆಗೆ ದೃಷ್ಟಿ ಹರಿಯುವುದು ಸಾಮಾನ್ಯ. ಸಮಾಜದಲ್ಲಿ ತನ್ನದೇ ಆದ ಶ್ರೀಮಂತಿಕೆ ಆಚಾರ-ವಿಚಾರಗಳನ್ನೊಳಗೊಂಡಿರುವ ಅರೆಭಾಷೆ ಗೌಡರುಗಳು ಇತ್ತೀಚೇಗೆ ಒಕ್ಕಲಿಗರೆಂದು ಕರೆಯಲ್ಪಡುವುದು ಮತ್ತು ಕರೆಯಿಸಿಕೊಳ್ಳಲು ಬಯಸುವುದು ನಿಜಕ್ಕೂ ವಿಷಾದನೀಯ ಮತ್ತು ಚಿಂತಿಸಬೇಕಾದ ವಿಷಯವಾಗಿ ಪರಿಣಮಿಸಿದೆ. ಈ ರೀತಿಯ ಬೆಳವಣಿಗೆಗಳು ಇಷ್ಟರವರೆಗೆ ಹೊರ ಊರಿನವರೆಂದೂ ಪರಿಗಣಿಸಲ್ಪಡುತ್ತಿದ್ದ ಮತ್ತು ನಾವುಗಳು ಅರೆಭಾಷೆ ಗೌಡರುಗಳಿಗಿಂತ, ಮೇಲು, ಶ್ರೇಷ್ಟರು ಎಂದು ಬೀಗುವ ಒಕ್ಕಲಿಗ ಜನಾಂಗದೊಂದಿಗೆ ಐಕ್ಯಗೊಂಡಂತೆ ಭಾಸವಾಗುತ್ತದೆ. ಇನ್ನೂ ಮುಂದಕ್ಕೆ ದೃಷ್ಟಿ ಹರಿಸಿದರೆ ದ. ಕನ್ನಡ ಮತ್ತು ಕೊಡಗಿನ ಗೌಡರುಗಳು ಆಂತರ್ಯದಲ್ಲಿ ಒಪ್ಪಿಗೆ ಸೂಚಿಸಿದಂತೆ ವರ್ತಿಸುವುದು ತುಂಬಾ ಖೇದಕರ ವಿಷಯವಾಗಿದೆ.

ಸಾಮಾಜಿಕವಾಗಿ, ಆರ್ಥಿಕವಾಗಿ, ಭೌಗೋಳಿಕವಾಗಿ ತುಂಬಾ ಹಿಂದುಳಿದ ಸಮುದಾಯವಾಗಿದ್ದ ಅರೆಭಾಷೆ ಗೌಡರುಗಳು ಈ ದಶಕದಲ್ಲಿ ಬಹಳವಾಗಿ ಮುಂದುವರೆದದ್ದು ಮತ್ತು ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮ ಇರುವನ್ನು ಗುರುತಿಸಿಕೊಳ್ಳಲು ಶಕ್ತವಾದದ್ದು ತುಂಬಾ ಶ್ಲಾಘನೀಯ ವಿಷಯವಾಗಿದೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಅರೆಭಾಷೆ ಗೌಡರುಗಳು ಗಣನೀಯವಾಗಿ ಮತ್ತು ಮೇರು ಕುರ್ಚಿಗಳಲ್ಲಿ ಆಸೀನರಾಗಿ ಕಾರ್ಯ ನಿರ್ವಹಿಸುವುದು ಮತ್ತು ಸೇವೆ ಸಲ್ಲಿಸುತ್ತಿರುವುದು ತುಂಬಾ ಹೆಮ್ಮೆಯ ಸಂಗತಿಯಾಗಿದೆ. ಅಲ್ಲದೆ ಒಂದು ಕಾಲದಲ್ಲಿ ಒಕ್ಕಲಿಗರ ಪ್ರತ್ಯೇಕತೆಯ ದೃಷ್ಟಿಯು ಬದಲಾಗಿ ಅರೆಭಾಷೆ ಗೌಡರುಗಳು ನಮ್ಮ ಹತ್ತಿರದ ಬಂಧುಗಳಂತೆ ವರ್ತಿಸುತ್ತಿರುವುದು ಸೋಜಿಗವೆನಿಸುತ್ತದೆ. ಒಂದು ದೃಷ್ಟಿಯಲ್ಲಿ ಇದು ಲಾಭಕರವಾಗಿ ಪರಿಣಮಿಸಿದರೂ ಅರೆಭಾಷೆ ಗೌಡರುಗಳು ಒಕ್ಕಲಿಗರೆನಿಸಿಕೊಳ್ಳುವುದು ಸಮಂಜಸವಲ್ಲ.

ದ. ಕನ್ನಡ ಮತ್ತು ಕೊಡಗಿನ ಗೌಡರುಗಳ ಆಚಾರ ವಿಚಾರ, ಭಾಷೆ, ಸಂಸ್ಕೃತಿ ಒಕ್ಕಲಿಗರ ಆಚಾರ ವಿಚಾರಗಳಿಗೆ ಹೋಲಿಸಿದರೆ ತುಂಬಾ ಭಿನ್ನವಾಗಿರುವುದು ಎಲ್ಲರಿಗೆ ಗೊತ್ತಿರುವ ವಿಚಾರವಾಗಿರುತ್ತದೆ. ಹಾಗಿದ್ದು ನೀವೇ ನಮಗೆ ದಾರಿದೀಪವೆಂದು ಒಕ್ಕಲಿಗರನ್ನು ಎತ್ತಿಕಟ್ಟಿ, ಬೇರೆ ಜಾತಿ, ಧರ್ಮದವರೊಂದಿಗೆ ನಾವು ಅರೆಭಾಷೆ ಮಾತನಾಡುವ ಗೌಡರುಗಳು ಎಂದು ಕರೆಯಿಸಿಕೊಳ್ಳಲು ಇಷ್ಟ ಪಡದೆ ಒಕ್ಕಲಿಗರು ನಾವು ಎಂದು ಗುರುತಿಸಿಕೊಳ್ಳಲು ಇಷ್ಟಪಡುವುದು ಮತ್ತು ಹವಣಿಸುವುದು ತುಂಬಾ ದುರದೃಷ್ಟಕರ ಹಾಗೂ ಸಂವಿಧಾನದಲ್ಲಿ ತಮ್ಮ ಭಾಷೆ, ಪಂಗಡದ ಇರುವಿಕೆಗೂ ಶ್ರಮಿಸದೆ ಅರೆಭಾಷೆ ಮಾತನಾಡುವ ಒಕ್ಕಲಿಗರು ಎಂದು ಸಮಾಜದಲ್ಲಿ ಕರೆಯಿಸಿಕೊಳ್ಳುವುದು ತುಂಬಾ ನಾಚಿಕೆಗೇಡಿತನದ ವಿಷಯವಾಗಿದೆ.

ಯಾಕೆ ಹೀಗಾಯಿತು? ಅರೆಭಾಷೆ ಗೌಡರುಗಳು ಅಷ್ಟೊಂದು ಅಶಕ್ತರೂ, ತನ್ನತನವನ್ನು ಗುರುತಿಸುವ ಹಂಬಲವೂ ಹಸಿವೂ ಇಲ್ಲವಾಯಿತೆ? ಲಕ್ಷಗಟ್ಟಲೆ ಅರೆಭಾಷೆ ಗೌಡರುಗಳಿಗೆ ತಮ್ಮ ಇರುವಿಕೆಗೆ ಪ್ರಾಧಾನ್ಯತೆಯನ್ನು ಪಡೆಯಲು ಶಕ್ತಿ ಇಲ್ಲವೆಂದು ಮತ್ತು ಅರೆಭಾಷೆ ಗೌಡರು ಎಂದು ಗುರುತಿಸಿಕೊಳ್ಳಲು ಇಷ್ಟಪಡದವರು ಅಥವಾ ಭಾವಿಸುವವರು, ಎಲ್ಲಾ ದ. ಕನ್ನಡ ಮತ್ತು ಕೊಡಗಿನ ಗೌಡರುಗಳು ಒಕ್ಕಲಿಗರು ಎಂದು ಪ್ರತಿಪಾದಿಸಿದರೇ? ಬಹುಶಃ ಪ್ರತಿಪಾದಿಸಿದ್ದಾರೆ. ಇಲ್ಲದಿದ್ದರೆ ಸಂವಿಧಾನದಲ್ಲಿ ಅರೆಭಾಷೆ ಗೌಡರುಗಳು ಬೇರೆಯೇ ಪರಿಚ್ಛೇದದಲ್ಲಿ ಕಂಡುಬರುತ್ತಿದ್ದರು. ಬಹುಶಃ ಕೆಲವರ ದೃಷ್ಟಿಯಲ್ಲಿ ಒಕ್ಕಲಿಗ ಸಮುದಾಯದ ವಿಸ್ತರಣೀಯವಾಗಿರಬಹುದು. ಹಾಗೆಯೇ ಕಾಣುತ್ತದೆ.

ದ. ಕನ್ನಡ ಮತ್ತು ಕೊಡಗಿನ ಗೌಡರುಗಳ ಮಾತೃ ಭಾಷೆಯಾದ ಅರೆಭಾಷೆಯು ತನ್ನದೇ ಆದ ವೈವಿಧ್ಯ ಮತ್ತು ಸೊಬಗನ್ನು ಹೊಂದಿರುವುದು ತುಂಬಾ ವಿಶೇಷ. ಸಮಾಜದ ಯಾವುದೇ ಸಮುದಾಯವು ಮಾತನಾಡದ ಭಾಷೆ ಅರೆಭಾಷೆಯಾಗಿದೆ. ಇದು ತುಂಬಾ ವಿಶೇಷ. ಈ ಭಾಷೆಯು ತಲೆಮಾರಿನ ಭಾಷಾ ಮತ್ತು ಜೀವನ ಕ್ರಮಗಳನ್ನು ಮತ್ತು ಅದರ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿರುವುದು ಗೌಡ ಜನಾಂಗದವರಿಗೆ ಮಾತ್ರ ಈ ಭಾಷೆ ಸೀಮಿತವಾದುದಕ್ಕೆ ಕಾರಣವಾಗಿದೆ.

ಅರೆಭಾಷೆ ಗೌಡರುಗಳನ್ನು ಹಿಂದುಳಿದ ಪಟ್ಟಿಯಲ್ಲಿ ಸೇರಿಸಬೇಕು. (ತುಂಬಾ ಒಳ್ಳೆಯ ಅಭಿಪ್ರಾಯ) ದ. ಕನ್ನಡ ಹಾಗೂ ಕೊಡಗಿನ ಅರೆಭಾಷೆ ಗೌಡರುಗಳು ಒಕ್ಕಲಿಗರಲ್ಲವೆಂದು ಪ್ರತಿಪಾದಿಸಿದಲ್ಲಿ ಗ್ರಾಮೀಣ ಕೃಪಾಂಕದಲ್ಲಿ ಆಯ್ಕೆಯಾದವರು ತಮ್ಮ ಹುದ್ದೆ ಕಳೆದುಕೊಂಡಂತೆ ಹಲವಾರು ಸ್ವಜಾತಿ ನೌಕರರುಗಳು ತಮ್ಮ ಉದ್ಯೋಗ ಕಳೆದುಕೊಳ್ಳುವ ಅಪಾಯವನ್ನುಮನಗಾಣಬೇಕು ಎಂಬ ತರ್ಕವನ್ನು ಒಪ್ಪುವುದು ಅಷ್ಟೊಂದು ಸಮಂಜಸವಾಗಿ ತೋರುವುದಿಲ್ಲ. ಇಂತಹ ತರ್ಕಗಳು ಬರೀ ಅಲ್ಪ ಲಾಭವನ್ನು ತಂದುಕೊಡಬಹುದು. ಇಲ್ಲಿ ದೂರದೃಷ್ಟಿಯನ್ನು ಪರಿಗಣಿಸಬೇಕು. ಮತ್ತು ಶಾಶ್ವತವಾದ

ಅರೆಭಾಷಿಕ ಗೌಡರು ಕ್ಷತ್ರಿಯರಾಗಿ ಒಕ್ಕಲುತನ ಮಾಡುತ್ತಿದ್ದವರು.

ಲಾಭದ ಕಡೆಗೆ ದೃಷ್ಟಿ ಹರಿಸಬೇಕು. ಹಾಗೇ ನೋಡಿದರೆ ಈಗಿನ ಕಾಲದಲ್ಲಿ ಸರಕಾರವನ್ನೇ ನಂಬಿ ಕುಳಿತವರು ಕೆಲವೇ ಮಂದಿ. ಅರೆಭಾಷೆ ಗೌಡರುಗಳು ಎಲ್ಲಾ ಕ್ಷೇತ್ರದಲ್ಲಿ ಇತರ ಸಮುದಾಯದ ನೇರಕ್ಕೆ ಬೆಳೆದಿದ್ದಾರೆ. ಹೀಗಿರುವಾಗ ಕೆಲವು ಸಣ್ಣ ಕಾರಣಗಳಿಗೆ ಅಂಜಿಕೊಂಡು ಸುಮ್ಮನೆ ಕುಳಿತರೆ ನಮಗೂ ನಷ್ಟವಾಗುವುದೆಂದು ಮನಗಾಣಬೇಕು. ಅಲ್ಲದೇ ಇಂತಹ ಸಣ್ಣ ನಿರ್ಧಾರಗಳು ನಾವು ಒಕ್ಕಲಿಗರೆಂದು ಕರೆಯಿಸಿಕೊಳ್ಳಲು ಹಂಬಲಿಸುತ್ತಿದ್ದೇವೆ ಎಂಬ ಶಬ್ಧಕ್ಕೆ ಪುಷ್ಟಿ ನೀಡುವುದರಲ್ಲಿ ಸಂಶಯವಿಲ್ಲ.

ದ. ಕನ್ನಡದಲ್ಲಿ ಸುಳ್ಯ ಮತ್ತು ಆಸುಪಾಸಿನ ಪ್ರದೇಶಗಳನ್ನು ಬಿಟ್ಟರೆ ಉಳಿದ ಗೌಡರುಗಳು (ಪುತ್ತೂರು ಮತ್ತು ಅದರ ಹತ್ತಿರದ ಪ್ರದೇಶಗಳಲ್ಲಿ) ತುಳು ಭಾಷೆಯನ್ನು ತಮ್ಮ ಮಾತೃಭಾಷೆಯಾಗಿ ಕಾಣುವುದು ಹಲವಾರು ಪ್ರಶ್ನೆಗಳಿಗೆ ದಾರಿಮಾಡಿಕೊಡುತ್ತದೆ. ಆದರೆ ಅವರುಗಳ ಆಚಾರ, ವಿಚಾರ, ಕ್ರಿಯಾವಿಧಿ-ವಿಧಾನಗಳು ಧಾರ್ಮಿಕ ಕ್ರಿಯೆಗಳು ಮತ್ತು ಶೋತ್ರಗಳಲ್ಲಿ ಹೇಳಿಕೊಳ್ಳುವಂತಹ ವ್ಯತ್ಯಾಸವೇನು ಕಂಡುಬರುವುದಿಲ್ಲ. ಅಲ್ಲದೇ ಸುಳ್ಯ/ಕೊಡಗಿನವರು ಅರೆಭಾಷೆ ಗೌಡರುಗಳೆಂದು, ಪುತ್ತೂರು ಮತ್ತು ಅದರ ಆಸುಪಾಸಿನವರು ತುಳು ಗೌಡರೆಂದೂ ಚಿಕ್ಕಮಗಳೂರು, ಮಂಡ್ಯದವರು ಒಕ್ಕಲಿಗರು ಎಂದು ನಮ್ಮ ಸಮುದಾಯದಲ್ಲಿ ಸಾಮಾನ್ಯವಾಗಿ ಪ್ರಚಲಿತ ದಲ್ಲಿರುವುದು ಎಲ್ಲರಿಗೂ ತಿಳಿದ ವಿಚಾರವಾಗಿರುತ್ತದೆ. ಇದರಿಂದ ನಮಗೆ ಗೌಡರುಗಳು ಎಂಬ ಸಮುದಾಯದಲ್ಲಿ ಈ ಮೂರು ವ್ಯತ್ಯಾಸಗಳು ಮೇಲ್ನೋಟಕ್ಕೆ ಕಂಡುಬರುತ್ತವೆ. ಈ ಮೂರು ವ್ಯತ್ಯಾಸಗಳು ಸಂವಿಧಾನದ ಒಂದು ಪರಿಚ್ಛೇದದಲ್ಲಿ ಒಂದೇ ಜಾತಿ (ಒಕ್ಕಲಿಗ)ಯೆಂದು ಪರಿಗಣಿಸಲ್ಪಟ್ಟಿದ್ದು ಇದಕ್ಕೆ ಕಾರಣಕರ್ತನಾರು ಎಂಬುದಕ್ಕೆ ಹುಡುಕಲು ತುಂಬಾ ಕಷ್ಟ ಸಾಧ್ಯ.

ದ. ಕ. ಕೊಡಗಿನ ಗೌಡರುಗಳು ಅರೆಭಾಷೆ ಮಾತನಾಡುವುದರಿಂದ ಮತ್ತು ಅರೆಭಾಷೆಯು ತುಂಬಾ ಪುರಾತನ ನಡುಗನ್ನಡ ಭಾಷೆಯಾದುದರಿಂದ ಈ ಭಾಗದ ಗೌಡರುಗಳು "ಗೌಡ ಎಂಬ ಪದಕ್ಕೆ ಅರ್ಥವನ್ನು ನೀಡಬಲ್ಲವರು" ಮತ್ತು ಇವರುಗಳು ಸಂವಿಧಾನದ ಚೌಕಟ್ಟಿನಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆಯಲು ಅರ್ಹರು ಆಗಿರುತ್ತಾರೆ. ತಮ್ಮದೇ ಆದ ವೈವಿಧ್ಯತೆ ವೈಶಿಷ್ಟ್ಯತೆಗಳನ್ನು ಹೊಂದಿರುವ ಇತರ ಸಮುದಾಯದವರು ತಮ್ಮ ಇರುವಿಕೆಯನ್ನು ಪಡೆದು ಸಂವಿಧಾನದ ಹಲವು ಸವಲತ್ತುಗಳನ್ನು ಪಡೆಯುತ್ತಿರುವಾಗ ನಾವು ಯಾಕೆ ಪ್ರಯತ್ನಿಸಬಾರದು? ಇದರಿಂದ ಸ್ವಲ್ಪ ನಷ್ಟವಾದಂತೆ ಬಾಹ್ಯವಾಗಿ ಕಂಡು ಬಂದರೂ ಲಾಭಗಳು ತುಂಬಾ ರೀತಿಯಲ್ಲಿ ಸಿಗುವುದು ಖಂಡಿತವಾಗಿರುತ್ತದೆ.

ಸಮಸ್ಯೆ ಇಲ್ಲಿ ಉದ್ಭವಿಸುವುದು ಯಾವ ರೀತಿಯ ತಿದ್ದುಪಡಿ ಸಂವಿಧಾನದಲ್ಲಿ ಮಾಡಬೇಕೆಂಬುವದು ಸಂವಿಧಾನದಲ್ಲಿ ಒಂದೇ ಪರಿಚ್ಛೇದದಲ್ಲಿ ಈ ಮೂರು (ಅರೆಭಾಷೆ ಗೌಡರುಗಳು, ತುಳು ಗೌಡರುಗಳು ಮತ್ತು ಕನ್ನಡ ಮಾತನಾಡುತ್ತ ಒಕ್ಕಲಿಗ ಬಂಧುಗಳು) ಪಂಗಡ ಗಳನ್ನು ಉಪಜಾತಿಯೆಂದು ಪರಿಗಣಿಸಬಹುದು. ಆದರೆ ಈ ಉಪಜಾತಿಗೆ ಮೂಲ ಜಾತಿಯು ಯಾವುದೆಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಈ ಮೂರು ಪಂಗಡಗಳಲ್ಲಿ ಶ್ರೇಷ್ಠತೆಯನ್ನು ಹುಡುಕುವುದು ಮತ್ತು ಬೆಟ್ಟು ಮಾಡುವುದು ಹಲವಾರು ಭಿನ್ನಾಭಿಪ್ರಾಯಗಳಿಗೆ ಮತ್ತು ಅಂತರ್‌ಕಲಹಕ್ಕೆ ದಾರಿಯಾಗಬಹುದು. ಆದರೆ ಬುದ್ಧಿಜೀವಿಗಳು ಸರಿಯಾದ ದೃಷ್ಟಿಕೋನದಲ್ಲಿ ಚಿಂತನೆ ನಡೆಸಿದರೆ ಖಂಡಿತ ಉತ್ತರ ದೊರಕಬಹುದು.

ನೇರವಾಗಿ ಇಲ್ಲಿ ತರ್ಕಿಸುವುದೇನೆಂದರೆ ಅರೆಭಾಷೆ ಗೌಡರುಗಳು ತಮ್ಮದೇ ಆದ ಹೊಸ ಹುಟ್ಟನು ಸಂವಿಧಾನದಲ್ಲಿ ಪಡೆದರೆ ಸಾಮಾಜಿಕವಾಗಿ, ಆರ್ಥಿಕವಾಗಿ ಅಥವಾ ರಾಜಕೀಯವಾಗಿ ಹಲವು ಸಮಸ್ಯೆ, ತೊಂದರೆಗಳನ್ನು ಎದುರಿಸಬೇಕಾಗಬಹುದೋ, ನನ್ನ ದೃಷ್ಟಿಯಲ್ಲಿ ಅಂತಹ ಯಾವ ಸಮಸ್ಯೆಗಳು ಉದ್ಭವಿಸಲಾರವು. ಏಕೆಂದರೆ ಅರೆಭಾಷೆ ಗೌಡರುಗಳು ಈಗಾಗಲೇ ತಮ್ಮ ಇರುವಿಕೆಯನ್ನು ಎಲ್ಲಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದು ಮತ್ತು ಇತರ ಸಮುದಾಯದವರ ಸರಿಸಮದಲ್ಲಿ ನಿಂತಿರುವುದೇ ಸಾಕ್ಷಿ. ಈ ಸಾಧನೆ ಯಾವುದೇ ಹಸ್ತದ ಸಹಾಯದಿಂದ ಅಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಅಲ್ಲದೇ ಬೇರೆ ಜಾತಿ ಧರ್ಮಗಳಲ್ಲಿ ಅರೆಭಾಷೆ ಗೌಡರುಗಳು ತಮ್ಮ ಪ್ರಭಾವ ಬೀರಲು ಶಕ್ತವಾದದ್ದು ತುಂಬಾ ಹೆಮ್ಮೆ ಪಡಬೇಕಾದ ಸಂಗತಿಯಾಗಿರುತ್ತದೆ.

ಯಾರ ಸಹಾಯಹಸ್ತವಿಲ್ಲದೆ ತನ್ನ ಸ್ವಂತ ಶಕ್ತಿಯಿಂದ ಬೆಳೆದು ನಿಂತ ಮತ್ತು ಅಭಿವೃದ್ಧಿ ಪಥದೆಡೆಗೆ ಸಾಗುತ್ತಿರುವಾಗ, ಉಳಿದ ಪಂಗಡಗಳ ದೃಷ್ಟಿ ನಮ್ಮ ಕಡೆಗೆ ಹರಿದುಬರುವುದು ಸಾಮಾನ್ಯ ವಿಷಯ.ಅದೂ ಲಾಭ ದೃಷ್ಟಿಯೇ ಆಗಿರುತ್ತದೆ. ಮುಖ್ಯವಾಗಿ ಒಕ್ಕಲಿಗ ಬಂಧುಗಳು ಅರೆಭಾಷೆ ಗೌಡರುಗಳ ಪ್ರಗತಿಯನ್ನು ಕಂಡು ಅವರೇ ಇಷ್ಟಪಟ್ಟು ವೈವಾಹಿಕ ಸಂಬಂಧಗಳಿಗೆ ಕೈ ಹಾಕುವುದು ನಾವೀಗ ನೋಡುತ್ತಿರುವ ಸಂಗತಿಗಳಾಗಿವೆ. ನಾವಾಗಿ ಹೋಗದಿದ್ದರೂ ಅವರಾಗಿಯೇ ಬರುತ್ತಿದ್ದಾರೆ. ಹಾಗಿದ್ದೂ ನಾವು ಯಾಕೆ ಒಕ್ಕಲಿಗರೆನಿಸಿ ಕೊಳ್ಳಬೇಕು.ನಾವುಗಳಿಗೆ ನಮ್ಮದೇ ಆದ ಭಾಷೆ ಮತ್ತು ಸಂಸ್ಕೃತಿಯಿಲ್ಲವೆ ?

ನಮ್ಮ ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕ, ವಿಧಿ, ವಿಧಾನಗಳ ಪರಂಪರೆಯನ್ನು ಹಕ್ಕುದಾರರಾದ ನಾವು ವಿಶ್ವಸ್ತರಂತೆ ಅವುಗಳನ್ನು ಉಳಿಸಿ, ಮೂಲೆ ಗುಂಪಾಗಿಸದೆ ಬೆಳೆಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಜವಾಬ್ದಾರಿಯನ್ನು ಹೊಂದಿದ್ದೇವೆ. ನಮ್ಮ ಹಕ್ಕಿನ ಹೊಣೆಗಾರಿಕೆಯನ್ನು ತಿಳಿದಿರಬೇಕು. ಆತ್ಮ ವಿಮರ್ಶಣೆಯು ಅಗತ್ಯವಾಗಿರುತ್ತದೆ. ಈ ರೀತಿಯ ಹಕ್ಕು ಪ್ರತಿಪಾದನೆಯಿಂದ ಅಥವಾ ವಾದಿಸುವುದರಿಂದ ಪ್ರತ್ಯೇಕತೆಯನ್ನು ಬಯಸುವುದು ಸರಿಕಾಣದು. ಇದು ಜಾತಿವಾದಯೆಂದು ಕರೆಯಲ್ಪಡಬಹುದು. ಆದರೆ ತನ್ನ ಮೂಲವನ್ನು ಕಾಪಾಡಿ ಕೊಳ್ಳಲು ಮೂಲಭೂತಿಯಾಗಿ ವರ್ತಿಸುವುದು ಮತ್ತು ತರ್ಕಿಸುವುದು ಅಸಮಂಜಸವಾಗಿ ಪರಿಗಣಿಸಲು ಸಾಧ್ಯವಿಲ್ಲ.

ಬಿ. ಯು. ಹಿತೇಶ್, ಬಿಳಿಮಲೆ, ಸುಳ್ಯ.

ಅರೆಭಾಷೆ ಬೇರೆ ಯಾವುದು ಅಲ್ಲಾ ಅದು ನಡುಗನ್ನಡವೇ ಆಗಿದೆ, ಈ ಬಗ್ಗೆ ಅಧ್ಯಯನವಾಗಲಿ.

ಜನಪದ ಕಸೂತಿಯಲ್ಲಿ ಮಹಿಳೆ

ಮಾನವನ ಕ್ರೀಯಾಶೀಲ ಮನಸ್ಸು ಜಡದಿಂದ ಚೈತನ್ಯಕ್ಕೆ ಸಾಗಲು ಸದಾ ಪ್ರಯತ್ನದಲ್ಲಿರುವುದರಿಂದ ತನ್ನ ಪ್ರಕೃತಿಯಲ್ಲಿನ ಅನ್ವೇಷಣೆಗೆ ಆತ ಪಟ್ಟ ಶ್ರಮವೇ ಕಲೆಯ ಹುಟ್ಟಿಗೆ ಕಾರಣವಾಗಿದೆ.

ಮನುಷ್ಯನ ನಿತ್ಯ ಜೀವನದಲ್ಲಿ ತನ್ನ ಬದುಕನ್ನು ಸುಂದರ ಸಾರ್ಥಕ ಮಾಡುವ ಹಂತದಲ್ಲಿ ಉಂಟಾದ ಭಯ, ಆಯಾಸ, ಉತ್ಸಾಹ ಇವುಗಳ ಪ್ರತೀಕವಾಗಿ ಕಾಣಿಸಿಕೊಂಡದ್ದನ್ನು ಕಲೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಇಂತಹ ಕಲೆಗಳ ವಿಕಾಸವು ಆಯಾ ಸಂಸ್ಕೃತಿಯನ್ನು ಅಲ್ಲಿಯ ವೈಶಿಷ್ಟ್ಯತೆಯನ್ನು ಗುರುತಿಸುವಲ್ಲಿ ಮಹತ್ತರ ಪಾತ್ರ ವಹಿಸಿದೆ.

ಪ್ರಾಚೀನ ಕಾಲದಿಂದಲೂ ಹೆಚ್ಚು ಮನ್ನಣೆ ಪಡೆದ ಕಲೆ ಚಿತ್ರಕಲೆಯಾಗಿದೆ. ಕಲೆಗಳಲ್ಲಿ ಶಿಷ್ಟಕಲೆ ಮತ್ತು ಜಾನಪದ ಕಲೆ ಎಂಬುದಾಗಿ ಪರಿಗಣಿಸಿದರೂ ಇವು ಜನಾಂಗದ ಆತ್ಮನಿವೇದನೆಯೆನಿಸಿವೆ. ನಾಗರಿಕ ಜನರ ಲಕ್ಷಣಯುಕ್ತವಾದ, ಪ್ರಮಾಣ ಬದ್ಧವಾದ ಚಿತ್ರಕಲೆಯು ಶಿಷ್ಟಪದ ಚಿತ್ರಕಲೆಯೆನಿಸಿದರೆ ಗ್ರಾಮೀಣರ ಮನಸ್ಸನ್ನೇ ಸೆರೆಹಿಡಿದ ಅವರ ಆನಂದ, ಅಂದ, ಚಂದದ ಚಿತ್ರಕಲೆ ಲಕ್ಷಣಯುಕ್ತವಾದುದು ಜಾನಪದ ಕಲೆಯೆನಿಸಿದೆ. ಕಲಾತ್ಮಕವಾದ ಜನಜೀವನ ಸಹಜತೆ ಮುಗ್ಧತೆಗಳನ್ನು ಪ್ರತಿಬಿಂಬಿಸುವ ಅವರ ಅನುಭವಗಳಿಗೆ ಮೂರ್ತರೂಪ ಒದಗಿಸುವ,ಅವರ ದುಡಿಮೆ ಸಮಯದಲ್ಲಿ ಸೃಷ್ಟಿಯಾದುದು ಕಲೆಯೆನಿಸಿದೆ. ಜನಪದ ಚಿತ್ರಕಲೆಯು ನೆಲ, ಗೋಡೆ, ಚರ್ಮ, ತಾಳೆಗರಿ, ರಟ್ಟು ಮೊದಲಾದವುಗಳಲ್ಲಿ ದಾರದ ಸಾಧನೆಯ ಮೂಲಕ ತೋರಿಸದೆ ಚಿತ್ರಕಲೆ ವಿಶಿಷ್ಟಪೂರ್ಣವಾಗಿದೆ.

ಬಟ್ಟೆ ಮಾಧ್ಯಮದಲ್ಲಿ ದಾರ ಸೂಜಿಗಳಿಂದ ನಿರ್ಮಿತವಾದ ಕಲೆ ಕಸೂತಿಯೆನಿಸಿದೆ. ಕೈ ಕಸೂತಿಯು ಜನಪದ ಮಾದರಿಯೆನಿಸಿದರೆ ಯಂತ್ರದ ಕಸೂತಿ ನಾಗರಿಕ ಮಾದರಿಯಾಗಿದೆ. ಪ್ರಾಚೀನಕಾಲದಿಂದಲೂ ಕರ್ನಾಟಕ ಕಸೂತಿ ಕಲೆಯು ಹೆಚ್ಚು ಪ್ರಖ್ಯಾತಿಯನ್ನು ಪಡೆದು ಇಂದಿಗೂ ಅನೇಕ ಮಾದರಿಯ ಕಲೆಗಳು ಉಳಿದುಕೊಂಡಿವೆ. ಹಾಗೆಯೆ ಕಲೆಯನ್ನು ಹಲವು ವಿಧಗಳನ್ನಾಗಿ ಮಾಡಿದೆ. ಅವು ಸೌಂದರ್ಯ ಧರ್ಮ, ವೃತ್ತಿ, ಪ್ರಯೋಜನ ಮನರಂಜನೆಯ ಮೂಲವೆಂದು ತಿಳಿಯಲಾಗಿದೆ.

ಕರ್ನಾಟಕ ಕಸೂತಿ ಕಲೆ ಉಪಯುಕ್ತ ಗ್ರಾಮೀಣ ಕಲೆ. ಧಾರವಾಡ ಸುತ್ತಮುತ್ತ ಮಹಿಳೆಯರ ನಂಬಿಕೆ-ಧಾರ್ಮಿಕ-ಸಾಮಾಜಿಕ, ಮಾನಸಿಕ ಭಾವನೆಗಳು ಒಟ್ಟು ಸ್ತ್ರೀ ಜೀವನದ ಚಿತ್ರ ಪ್ರಕಟಗೊಂಡಿದೆ. ಅವರ ಅಭಿರುಚಿ ಆಸಕ್ತಿ ಜನಪದ ಕಲೆಯ ಕಸೂತಿ ಮೂಲಕ ಜನಪದರ ನಂಬಿಕೆ ಶ್ರಮ ಪ್ರತಿಭೆಯ ಫಲವಾಗಿ ಮನಸಿನ ಸ್ವಪ್ರತಿಭೆಯಿಂದ ಪೂರೈಕೆಯಾಗಿದೆ. ದೇವರ ಮೇಲಿನ ಭಕ್ತಿಯನ್ನು ಕೂಡ ಕಸೂತಿಯ ಮೂಲಕ ಅರಳಿಸಿದ್ದಾರೆ. ಇವರ ಶ್ರಮದ ಪರಿಹಾರಕ್ಕಾಗಿ ವಿರಾಮಕಾಲದ ಪ್ರಯೋಜನಕ್ಕಾಗಿ ಜಾನಪದ ಜೀವನದಲ್ಲಿ ಸಂಸ್ಕೃತಿಯನ್ನು ಹೊರಹೊಮ್ಮಿಸಿದ್ದಾರೆ. ಹೀಗೆ ಜನರು ಗೆರೆಗಳನ್ನು ಗೀಚಿ ಎಳೆದು ಬಣ್ಣ ತುಂಬಿಸಿ ಜೀವ ತುಂಬಿದರು.

ಸಂಪ್ರದಾಯಸ್ಥೆಯರಾದ ಮಹಿಳೆಯರದೇ ಕಸೂತಿಯಲ್ಲಿ ಮೇಲುಗೈ. ಜನಪದ ಕಲೆಯನ್ನು ಸೌಂದರ್ಯಮೂಲ, ವೃತ್ತಿಮೂಲ ಹಾಗೂ ಧರ್ಮಮೂಲವೆಂದು ವಿಂಗಡಿಸಲಾಗಿದೆ.

ಬಟ್ಟೆಯಲ್ಲಿ ದಾರಗಳಿಂದ ತಮ್ಮ ಭಾವನೆಯನ್ನು ಮೂಡಿಸುವ ಕಲೆಯ ಕಸೂತಿ-ಧರ್ಮಶ್ರದ್ಧೆ ಪ್ರಕೃತಿಯ ಸ್ಫೂರ್ತಿ ಮನುಷ್ಯ ಕಲ್ಪನೆಗಳ ಮೂಲಕ ತಂದಿರುವುದು ಕಸೂತಿ ಕಲೆ.

1. ಪೂರ್ವ ವೈದಿಕ ಕಾಲದಲ್ಲಿ ಬಾಳಿದ ಜನತೆಯ ಸಂಸ್ಕೃತಿ ಉಚ್ಚಮಟ್ಟದಾಗಿದ್ದು ಆಕಾಲದಲ್ಲಿ ಜಿಂಕೆ ಚರ್ಮ ಮತ್ತು ಉಡುಪುಗಳಿಗೆ ಚಿನ್ನದ ಎಳೆಗಳಿಂದ ಕಸೂತಿ ಮಾಡುತ್ತಿದ್ದರಂತೆ.
2. ಮಹೆಂಜೋದಾರದಲ್ಲಿ ಹೆಚ್ಚಾಗಿ ಕಸೂತಿಗಾಗಿ ಕಂಚಿನ ಸೂಜಿಗಳನ್ನು ಬಳಸುತ್ತಿದ್ದರಂತೆ.
3. ಮಗಧರ ಕಾಲದಲ್ಲಿ ಮಸ್ಲಿನ್ ಬಟ್ಟೆಯ ಮೇಲೆ ಕಸೂತಿ ಮಾಡುತ್ತಿದ್ದರಂತೆ.
4.ಮೊಘಲ್ ಆಳ್ವಿಕೆಯಲ್ಲಿ ಭಾರತಕ್ಕೆ ಬಂದ ಕಸೂತಿ ಕಲೆಯನ್ನು ಮುಸ್ಲಿಂ ಮತ್ತುಹಿಂದೂ ಅರಸರು ಪ್ರೋತ್ಸಾಹಿಸಿ ಬೆಳೆಸಿದರು.
5.ಭಾರತದ ಕಸೂತಿ ಕಲೆಯು ಮೇಲೆ ವಿದೇಶಿಯರ ಪ್ರಭಾವದಿಂದ ಶೈಲಿಗಳು ಬದಲಾಗಿದ್ದು ಮಣಿಪುರ ಸ್ತ್ರೀಯರ ರೇಷ್ಮೆ ಹೊಲಿಗೆಯ ಕಲೆ, ಬನಾರಸದ ಕಲಾಬತ್ತಿನ ಕಸೂತಿ ಸೀರೆ ಭಾರತದ ಮಹಿಳೆಯ ಕಲಾಭಿರುಚಿಗೆ ಸಾಕ್ಷಿಯಾಗಿದೆ.

ಹಿಂದೆ ಧನಿಕ ಮನೆತನದ ಸ್ತ್ರೀಯರೂ ಕೂಡ ಕಸೂತಿಯಲ್ಲಿ ಪರಿಣತಿಯನ್ನುಪಡೆಯುವುದಕ್ಕೋಸ್ಕರ ಪ್ರತಿದಿನ ಗಂಟೆಗಟ್ಲೆ ಕೆಲಸದಲ್ಲಿ ನಿರತರಾಗುತ್ತಿದ್ದರು. ಕಸೂತಿ ಕಲೆ ಸುಂದರವಾಗಿ ಮನಮೋಹಕವಾಗಿದ್ದು ಮನಸ್ಸಿಗೆ ಮುದ ನೀಡುತ್ತದೆ. ಆದ್ದರಿಂದ ವಿರಾಮದ ವೇಳೆಗಳಲ್ಲಿ ಹೆಂಗಸರು ಕಸೂತಿಯ ಮೂಲಕ ಮನರಂಜನೆ ಹಣ ಸಂಪಾದನೆಯೊಂದಿಗೆ ನೆರೆಮನೆಯವರಿಗೂ ಹೇಳಿಕೊಡುತ್ತಾ ವಿರಾಮಕಾಲದ ಸದುಪಯೋಗಕ್ಕಾಗಿ ಒಳ್ಳೆಯ ಸಾಧನೆಯಾಯಿತು.

ಇತ್ತೀಚೆಗೆ ಸಂಘ ಸಂಸ್ಥೆಗಳೂ ಕೂಡ ತರಬೇತಿಯನ್ನು ಕೊಡುತ್ತಿದ್ದು ಕಸೂತಿಯ ಬೆಳವಣಿಗೆಯಲ್ಲಿ ಮಹಿಳೆಯರು ಮಹತ್ತರ ಪಾತ್ರವಹಿಸಿದ್ದಾರೆ. ಹೀಗೆ ಉತ್ತರ ಕರ್ನಾಟಕದಲ್ಲಿ ಕಸೂತಿ ಕಲೆ ಉಳಿದಿದೆ. ಕಸೂತಿಯಲ್ಲಿ 2 ಬಗೆಯ ಆನಂದವಿದೆ. ಹೆಣೆಯುವವರಲ್ಲಿ ತೋರುವ ಸಮಾಧಾನ ಮತ್ತು ನೋಡುವವರಲ್ಲಿ ಕಾಣುವ ತೃಪ್ತಿ ಮುಖ್ಯವಾಗಿದೆ. ಕಸೂತಿ ಹಾಕಿದ ಉಡುಪುಗಳನ್ನು ಧರಿಸುವುದು ನಾಗರಿಕರಲ್ಲಿ ವಿಶೇಷವೆನಿಸಿದೆ. ಕಸೂತಿಯ ಸಾಂಪ್ರದಾಯಿಕ ವಿನ್ಯಾಸಗಳನ್ನು ಯಂತ್ರ ಕಸೂತಿಗಳಲ್ಲೂ ಕಾಣಬರುವುದು. ವಾಣಿಜ್ಯ ದೃಷ್ಟಿಯಿಂದ ಇಂದು ಕಸೂತಿ ಕಲೆಗೆ ಹೆಚ್ಚಿನ ಮಹತ್ವಬರುತ್ತಿದ್ದು ಪ್ರತಿಷ್ಠೆಯ ಸಂಕೇತವಾಗಿ ಸಾಂಸ್ಕೃತಿಕ ಹಿರಿಮೆಯನ್ನು ಪಡೆದುಕೊಳ್ಳುತ್ತಿರುವುದು ಗಮನಿಸಬೇಕಾದ ಅಂಶವಾಗಿದೆ.

ಮಾನವನ ಎಲ್ಲಾ ಕಲಾ ಪ್ರಕಾರಗಳಿಗೆ ಜಾನಪದ ಪ್ರವೃತ್ತಿ ಮೂಲವಾಗಿದೆ. ಅದರಂತೆ ಅಂಗಳದಲ್ಲಿ ರಂಗೋಲಿ ಹಾಕುವುದು, ಹಚ್ಚೆ ಹಾಕಿಸಿಕೊಳ್ಳುವುದು ಇದೆಲ್ಲಾ ಹೆಂಗಳೆಯರು ತಮ್ಮ ಮನದ ಕಲ್ಪನೆಯಂತೆ; ಹಚ್ಚೆ ರಂಗೋಲಿಯಲ್ಲಿ ವಿವಿಧ ವಿನ್ಯಾಸಗಳನ್ನು ರಚಿಸುವುದು ಕೈಯಲ್ಲಿ ಮದುರಂಗಿ ಹಾಕುವುದು- ಇತ್ಯಾದಿ ಕಲೆಗಳು ಮಹಿಳೆಯರೆನಿಸಿವೆ. ಆದ್ದರಿಂದ ಕಲೆಯಲ್ಲಿ ಭಯ ಹುಟ್ಟಿಸುವಂತಹ ಪ್ರಾಣಿ ಪಕ್ಷಿಗಳು ಕಾಣಬಾರದೆಂಬಂತೆ ಕಸೂತಿಗಳನ್ನು ಮಾಡುತ್ತಾರೆ. ಮುಖ್ಯವಾಗಿ ತುಳಸಿಕಟ್ಟೆ, ರಂಗೋಲಿ ಕಸೂತಿಯಲ್ಲಿ ಕಾಣಿಸಿಕೊಂಡಿದೆ.

ಹಣ್ಣುಗಳು ತುಂಬಿದ ಮರ ಭಾರದಿಂದ ಬಾಗಿರುತ್ತದೆ. ನೀವೂ ಅದರಂತೆ ಯಾವಾಗಲೂ ತಗ್ಗಿ, ಬಗ್ಗಿ ನಡೆಯಬೇಕು.

ರಂಗೋಲಿ ಮತ್ತು ಹಚ್ಚೆಗಳು ಹಿಂದೂ ಧರ್ಮದಲ್ಲಿ ಮಾತ್ರ ಕಾಣಿಸಿದರೆ ಕಸೂತಿಯು ಎಲ್ಲಾ ಧರ್ಮದ ಮಹಿಳೆಯರಲ್ಲೂ ಕಾಣ ಸಿಗುತ್ತದೆ.

ಹಚ್ಚೆ ರಂಗೋಲಿ ಕಸೂತಿಯ ಮದುರಂಗಿ ಕಲೆಯಲ್ಲಿ ವಿವಿಧ ನಮೂನೆಗಳು ಇದ್ದು ಮನಸ್ಸನ್ನು ಅರಳಿಸುವ ಧಾರ್ಮಿಕ ಹಿನ್ನಲೆಯ ಈ ಅಲಂಕಾರ ಕಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಪ್ರಯತ್ನ ಹಲವು ಭಾಗಗಳಲ್ಲಿದೆ.

ಸ್ತ್ರೀಯರ ಕಲೆಯ ಮೂಲ ಉಗಮ ಸ್ಥಾನ ಉತ್ತರ ಕರ್ನಾಟಕ ಅನ್ನುತ್ತಾರೆ. ಸ್ತ್ರೀ ಕಲೆಯಲ್ಲಿ ಮೈ ಮರೆತು ದಿನದ ಹಲವು ಗಂಟೆಗಳು ಮುಕ್ತಳಾಗಿ ಕಲೆಯನ್ನು ಅರಳಿಸಬಲ್ಲಳು. ವಿರಾಮ ಕಾಲದ ಕಲೆಯಾಗಿ ಆಯಾ ಜನಾಂಗದ ಧಾರ್ಮಿಕ ಸಾಮಾಜಿಕ ಭಾವನೆಗಳ ಪ್ರತಿನಿಧಿಯಾಗಿ ಅವರ ನಂಬಿಕೆ ಆಚಾರ ವಿಚಾರಗಳನ್ನು ಪ್ರಕಟಿಸುವ ಮಾಧ್ಯಮವಾಗಿ ಅಲಂಕಾರಿಕವಾಗಿ ಹೊರಹೊಮ್ಮಿ ಸ್ತ್ರೀಯ ಪ್ರತಿಭೆ ಗ್ರಾಮೀಣ ಕಲೆ ಕಸೂತಿಯಲ್ಲಿ ಪಾಶ್ಚಾತ್ಯರಿಂದ ಮನ್ನಣೆಗಳಿಸಿದೆ. ಈಗ ಮಹಿಳೆಯರ ಸಹನೆ, ಕಲ್ಪನಾಶಕ್ತಿ, ಸೃಜನಾತ್ಮಕ ದೃಷ್ಟಿಯ ಸಾಂಪ್ರದಾಯಿಕ ಕಲೆಯನ್ನು ಆಧುನಿಕ ಮಾದರಿಯಲ್ಲಿ ಪರಿವರ್ತಿಸತೊಡಗಿದೆ.

ಕರ್ನಾಟಕ ಗ್ರಾಮೀಣ ಸಾಂಪ್ರದಾಯಿಕ ಕಸೂತಿ ಕಲೆ ಹೆಚ್ಚಾಗಿ ತ್ರಿಕೋನ-ಆಯತ-ಚೌಕೋನ-ವರ್ತುಳ ಪಟ್ಟೆಯನ್ನುಒಳಗೊಂಡು ಸಾಂಕೇತಿಕವಾಗಿರುತ್ತದೆ. ಕಸೂತಿ ಕಲೆಯು ಮಹಿಳೆಯರದೇ ಸೊತ್ತು ಎನಿಸಿದರೂ, ಎತ್ತುಗಳ ಬೆನ್ನ ಮೇಲೆ, ಜೂಲಗೊರವಯ್ಯಗಳು ತೊಡುವ ವೇಷಭೂಷಣಗಳಲ್ಲಿ ಪುರುಷರೇ ಕಸೂತಿ ಹಾಕುತ್ತಾರೆ.

ಮಹಿಳೆಯರ ಮನರಂಜನೆಯ ಪ್ರತೀಕವಾಗಿ, ಮಂಗಳಕರ ಚಿಹ್ನೆಯಾಗಿ ಗೃಹಲಂಕಾರ ಅಲಂಕಾರಿಕ ಶುಭ ಸೌಭಾಗ್ಯ ಜೀವನ ಶ್ರದ್ಧೆ ಆರ್ಥಿಕ ಮಟ್ಟ ತೋರುವ ಮಧ್ಯವರ್ತಿ ಇದಾಗಿದೆ. ಕಸೂತಿ ಕಲೆ ಕ್ಷೀಣವಾಗುತ್ತಿದ್ದು ಇದನ್ನು ಉಳಿಸಿ ಬೆಳೆಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ. ಹೀಗೆ ಮನಮೋಹಕವಾದ ಕಸೂತಿ ಕಲೆಯಲ್ಲಿ ರಾಷ್ಟ್ರ ಪ್ರಶಸ್ತಿ ಕೂಡಾ ಪಡೆದವರು ಅನೇಕರಿದ್ದಾರೆ. ಕರ್ನಾಟಕ ಕಸೂತಿ ಕಲೆಯಲ್ಲಿ ರಾಜ್ಯ ಕೈ ಮಗ್ಗ ಮತ್ತು ಕರಕುಶಲ ನಿಗಮದಿಂದ ಪ್ರಶಸ್ತಿ ಕೂಡಾ ಲಭಿಸಿದೆ. ಅಲ್ಲದೆ ರಾಜಸ್ಥಾನ ಲಂಬಾಣಿಗಳು ಬಳಸುವ ಕಾಜಿನ ಬಿಲ್ಲೆ, ಕಾಸಿನ ಬಿಲ್ಲೆ ಕನ್ನಡಿ ಚೂರುಗಳಿಂದ ಕೊಕ್ಕೆ ಸೂಜಿಗಳಿಂದ ಅಲಂಕಾರಗೊಳಿಸುವ ಕಸೂತಿ ಕಲೆಯನ್ನೇ ಇಂದು ಹವ್ಯಾಸಕ್ಕಾಗಿಯೂ, ಗೃಹಕೈಗಾರಿಕೆಯಾಗಿಯೂ ಮುಂದುವರಿಸಲಾಗಿದೆ. ಅಲ್ಲದೆ ಮಹಿಳೆಯರ ದೈನಂದಿನ ಚಟುವಟಿಕೆಯಾಗಿ ಪರಿಗಣಿಸಿ ಕರ್ನಾಟಕ ರಾಜ್ಯ ಗೃಹ ಕೈಗಾರಿಕಾ ನಿಗಮದವರು ಧಾರವಾಡದ ಜನತಾ ಶಿಕ್ಷಣ ಸಮಿತಿ ವಿನಯಾ ಹ್ಯಾಂಡಿ ಕ್ರಾಫ್ಟ್ ಸಹಕಾರಿ ಸಂಘ ಸಂಸ್ಥೆಗಳು ಸ್ಟೈಫಂಡ್ ಕೊಟ್ಟು 10 ತಿಂಗಳ ತರಬೇತಿಯನ್ನು ಕಸೂತಿಗಾಗಿ ಹಾಕಿಕೊಂಡಿದ್ದಾರೆ.

ಉತ್ತರ ಕರ್ನಾಟಕ ಹಾಗೂ ಉತ್ತರ ಭಾರತದ ಕೆಲವು ಕಡೆಗಳಲ್ಲಿ ಶಾಲೆಗಳಲ್ಲಿ 2 ನೇ ತರಗತಿಯಿಂದಲೇ ಹೆಣ್ಣು ಮಕ್ಕಳಿಗೆ ಕಡ್ಡಾಯವಾಗಿ ಕಸೂತಿ ಕಲೆಯನ್ನು ಕಲಿಸಲಾಗುತ್ತಿದೆ. ಇಂತಹ ಅಳವಡಿಕೆ ಕೂಡಾ ಒಂದು ಉತ್ತಮ ಬೆಳವಣಿಗೆ.

ಇಲ್ಲಿ ಕೂಡಾ ಅನೇಕ ಮಹಿಳಾ ಸಂಘ ಸಂಸ್ಥೆಗಳು ತಮ್ಮದೇ ಆದ ಚಟುವಟಿಕೆಗಳಲ್ಲಿ ಭಾಗವಹಿಸುತ್ತವೆ. ಕಸೂತಿ ಕಲೆಯನ್ನು ಕಲಿಯುವುದರಿಂದ ಮನರಂಜನೆ,ಏಕಾಗ್ರತೆ, ಜ್ಞಾಪಕಶಕ್ತಿವೃದ್ಧಿ, ವಿರಾಮ ಜೀವನದ ಉಪಯೋಗ ಹಾಗೂ ಗೃಹಲಂಕಾರ ವಸ್ತುವಾಗಿ ಜಾನಪದ ಕಸೂತಿ, ಹೊಲಿಗೆ ಕಲೆಗಳನ್ನು ಕಲಿತು ಅದರಂತೆ ಆರ್ಥಿಕ ಮಟ್ಟವನ್ನು ಸುಧಾರಿಸುವುದಲ್ಲದೆ ಕಲೆಗಳು ಉಳಿಯುವಂತೆ ಮಾಡಲು ಸಹ ನಮ್ಮ ಹೆಣ್ಣು ಮಕ್ಕಳು ಏನಾದರೊಂದು ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಆಯಾಸ ಮರೆತು ನೆಮ್ಮದಿಯಾಗಿರಲು ಸಾಧ್ಯವಿದೆ.

ಸಂಗ್ರಹ ಬರಹ : ಬೈತಡ್ಕ ಜಾನಕಿ

ಕೊಡಗು ಗೌಡ ಸಮಾಜ, ಮಡಿಕೇರಿ

ದಿನಾಂಕ 13-10-2003 ರ ಸೋಮವಾರದಂದು ಗೌಡ ಸಮಾಜ ಕೊಡಗು ಆಡಳಿತ ಮಂಡಳಿಯ ಸಭೆಯನ್ನು ಸಮಾಜದ ಅಧ್ಯಕ್ಷರಾದ ಶ್ರೀ ಪೈಕೆರ ಎ. ಅನಂತರಾಂರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಸಭೆಯಲ್ಲಿ ಕೆಳಕಂಡ ನಿರ್ದೇಶಕರುಗಳು ಹಾಜರಿದ್ದರು. ಉಪಾಧ್ಯಕ್ಷರಾದ ಶ್ರೀ ಪೇರಿಯನ ಜಯಾನಂದನವರು. ಗೌರವ ಕಾರ್ಯದರ್ಶಿ ಕೋಳಿಮುಡಿಯನ ಆರ್. ಅನಂತಕುಮಾರ ರವರು, ಖಜಾಂಜಿಯವರಾದ ಶ್ರೀ ಕೊಳಂಬೆ ಬಿ. ಶಿವಪ್ಪನವರು, ನಿರ್ದೇಶಕರಾದ ಶ್ರೀ ಪಂಜಿಪೆಳ್ಳ ವೆಂಕಪ್ಪನವರು, ಶ್ರೀ ಪಡಿಕಲ್ ಚಂಗಪ್ಪನವರು, ಶ್ರೀ ದಂಬೆಕೋಡಿ ಎಸ್ ಪೂವಯ್ಯನವರು, ಶ್ರೀ ಕೆದಂಬಾಡಿ ಪ್ರಸನ್ನರವರು, ಶ್ರೀ ಚೆರಿಯಮನೆ ರಾಘವಯ್ಯನವರು, ಶ್ರೀ ಕೋರನ ಪಿ. ವಿಶ್ವನಾಥ್‌ರವರು, ಶ್ರೀಮತಿ ಕೂಡಕಂಡಿ ಕಾವೇರಮ್ಮನವರು ಸಭೆಯಲ್ಲಿ ಹಾಜರಿದ್ದರು.

ಸಭೆಯಲ್ಲಿ ಸ್ವಾಗತದೊಂದಿಗೆ ಗೌರವ ಕಾರ್ಯದರ್ಶಿಯವರಿಂದ ಕಳೆದ ಸಭೆಯ ನಡಾವಳಿಕೆಯುನ್ನು ಓದಿ ಒಪ್ಪಲಾಯಿತು. ಜಮಾ ಖರ್ಚನ್ನು ನೋಡಿ ಖಾತರಿ ಪಡಿಸಲಾಯಿತು. ನೂತನ ಸದಸ್ಯತನವನ್ನು ಪರಿಶೀಲಿಸಿ ನೊಂದಾಯಿಸಿಕೊಳ್ಳಲಾಯಿತು. ಸಮಾಜಕ್ಕೆ ಬಂದಂತ ಅರ್ಜಿಗಳನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಯಿತು.

ಇತರ ವಿಷಯಗಳಲ್ಲಿ ಸಮಾಜದ ನೋಂದಾವಣೆ ಬಗ್ಗೆ, ಲೆಕ್ಕಪತ್ರಗಳ ವಿವರಣೆ ಬಗ್ಗೆ, ಸಮಾಜದ ಸ್ಥಿರ ಆಸ್ತಿ ಮತ್ತು ಚರಾಸ್ತಿಗಳ ಪಟ್ಟಿಯ ಬಗ್ಗೆ, ಗುಡ್ಡೆಮನೆ ಅಪ್ಪಯ್ಯಗೌಡರ ರಸ್ತೆಯ ನಾಮ ಫಲಕ ದುರಸ್ತಿ ಬಗ್ಗೆ, ಸಮಾಜದಲ್ಲಿ ದಾನಿಗಳಾಗಿದ್ದು ಸದಸ್ಯತನ ಪಡೆಯದಿದ್ದಲ್ಲಿ ಅವರಿಗೆ ಸದಸ್ಯರಾಗಲು ಪತ್ರ ಬರೆಯುವ ಬಗ್ಗೆ, ಸಮಾಜದ ಶೌಚಾಲಯ ಮತ್ತು ಸುತ್ತಮುತ್ತಲ ಸ್ವಚ್ಛತೆ ಕಾಪಾಡುವ ಬಗ್ಗೆ, ಸಮಾಜಕ್ಕಾಗಿ ಈ ಹಿಂದೆ ದುಡಿದು ಅಧ್ಯಕ್ಷ, ಉಪಾಧ್ಯಕ್ಷ, ಗೌರವ ಕಾರ್ಯದರ್ಶಿ, ಖಜಾಂಚಿಯಾಗಿ ದುಡಿದವರ ನಾಮಫಲಕ ಹಾಕುವ ಬಗ್ಗೆ ಅಲ್ಲದೆ ಸಮಾಜದಲ್ಲಿ ಒಂದು ಬ್ಯಾಂಕು ತೆರೆಯುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಉತ್ತಮ ತೀರ್ಮಾನ ಕೈಗೊಳ್ಳಲಾಯಿತು. ಸಭೆಯ ಮೊದಲಿಗೆ ಅಧ್ಯಕ್ಷ ಶ್ರೀ ಪೈಕೇರ ಅನಂತರಾಮ ಸ್ವಾಗತಿಸಿದರೆ, ಕಾರ್ಯದರ್ಶಿ ಕೋಳಿಮುಡಿಯನ ಆರ್. ಅನಂತ್‌ಕುಮಾರ್ ರವರು ಬರವಣಿಗೆ ಮಾಡಿ, ಉಪಾಧ್ಯಕ್ಷ ಶ್ರೀ ಪೇರಿಯನ ಜಯಾನಂದನವರಿಂದ ವಂದನಾರ್ಪಣೆ ಮಾಡಲಾಯಿತು. ಸಭೆಯಲ್ಲಿ ವ್ಯವಸ್ಥಾಪಕ ಶ್ರೀ ಚೆಟ್ಟಿಮಾಡ ರಘುಪತಿಯವರು ಉಪಸ್ಥಿತರಿದ್ದರು.

ಗೌರವ ಕಾರ್ಯದರ್ಶಿ

ಮನರಂಜಿಸಿದ ಅಕಾಡೆಮಿಯ ಕೈಲ್ ಮುಹೂರ್ತ ಸಂತೋಷಕೂಟ

ನೀರು ತುಂಬಿದ ಪಾತ್ರೆಯೊಳಗಿಂದ, ಬಾಯಿಯಿಂದಲೇ ಗೋಲಿ ಹೆಕ್ಕಿ ಓಡಿದ ಯುವಕರು, ತಲೆಯ ಮೇಲೆ ಲೋಟದಲ್ಲಿ ನೀರು ಹೊತ್ತು ಸರಾಗವಾಗಿ ಹೆಜ್ಜೆ ಹಾಕಿದ ಯುವತಿಯರು, ಬೆಲೂನ್‌ನಲ್ಲಿ ಗಾಳಿ ತುಂಬಿ ಅದರ ಮೇಲೆ ಕುಳಿತು ಒಡೆದು ಓಡಿ ಗುರಿ ಮುಟ್ಟಿದ ಮಕ್ಕಳು, ಹಣೆಯ ಮೇಲೆ ಬೆಲೂನ್ ಇಟ್ಟುಕೊಂಡು ನಡೆದ ದಂಪತಿಗಳು, ಮಹಿಳೆಯರು, ಯುವತಿಯರು, ವಯಸ್ಕರೆನ್ನದೆ ವಾಲಗ ಕುಣಿತಕ್ಕೆ ಹೆಜ್ಜೆ ಹಾಕಿ ಮೆರುಗು ತಂದವರು, ರಸಪ್ರಶ್ನೆಗೆ ಉತ್ತರ ಗೊತ್ತಾಗದೆ ತಲೆ ಕೆರೆದುಕೊಳ್ಳುತ್ತಿದ್ದವರು ಇದು ಅಕ್ಟೋಬರ್ 5 ರಂದು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಹಮ್ಮಿಕೊಂಡಿದ್ದ ಕೈಲ್‌ಮುಹೂರ್ತ ಸಂತೋಷ ಕೂಟದಲ್ಲಿ ಕಂಡು ಬಂದ ಕೆಲವು ದೃಶ್ಯಾವಳಿಗಳಷ್ಟೇ.


ಪ್ರತಿ ವರ್ಷದಂತೆ ಈ ವರ್ಷವೂ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಕೊಡಗು ಗೌಡ ವಿದ್ಯಾಸಂಘದ ಸಭಾಂಗಣದಲ್ಲಿ ಜನಾಂಗ ಬಾಂಧವರಿಗಾಗಿ ಕೈಲ್ ಮುಹೂರ್ತ ಸಂತೋಷಕೂಟವನ್ನು ಏರ್ಪಡಿಸಿತ್ತು. ಚಿಕ್ಕ ಮಕ್ಕಳಿಂದ ಹಿಡಿದು ವಯಸ್ಕರವರೆಗೆ ನಡೆದ ಸ್ಪರ್ಧೆಯಲ್ಲಿ ಅತ್ಯಂತ ಉತ್ಸಾಹದಿಂದ ಪಾಲ್ಗೊಂಡ ಜನಾಂಗ ಬಾಂಧವರು ನೆರೆದಿದ್ದ ಪ್ರೇಕ್ಷಕರಲ್ಲಿ ಸಂತಸದ ಸಿಂಚನ ಮೂಡಿಸಿದರು.

ಮಾಜಿ ಶಾಸಕರಾದ ದಂಬೆಕೋಡಿ ಮಾದಪ್ಪ, ಮಾಜಿ ಪೋಲಿಸ್ ಉಪ ಉನ್ನತ ಅಧಿಕಾರಿ ಯಾಲದಾಳು ಕೇಶವಾನಂದ, ನಿವೃತ್ತ ಇಂಜಿನಿಯರ್ ತಳೂರು ಆನಂದ, ನಿವೃತ್ತ ಶಿರಸ್ತೇದಾರ ಸೂದನ ನಾಣಯ್ಯ ಮೊದಲಾದವರೂ ಸಹ ಸ್ಪರ್ಧೆಯಲ್ಲಿ ಪಾಲ್ಗೊಂಡು ಸಂತಸ ಹಂಚಿಕೊಂಡರು. ವಿವಿಧ ಮನರಂಜನೀಯ ಸ್ಪರ್ಧೆಗಳನ್ನು ಶಿಕ್ಷಕಿ ಮಣ್ಣಂಡ್ರ ರೇಖಾ ಉಲ್ಲಾಸ ನಡೆಸಿ ಕೊಟ್ಟರು. ಹೌಸಿ ಹೌಸಿ ಸ್ಪರ್ಧೆಯನ್ನು ಕಟ್ಟೆಮನೆ ಸೋನಾ ನಡೆಸಿಕೊಟ್ಟರೆ, ರಸ ಪ್ರಶ್ನೆಗಳನ್ನು ಪಟ್ಟಡ ಶಿವಕುಮಾರ್ ನಡೆಸಿದರು.

ಬಹುಮಾನ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷರಾದ ತುಂತಜೆ ಗಣೇಶರವರು ವಹಿಸಿದ್ದರು. ಬಹುಮಾನ ದಾನಿಗಳೂ ಮುಖ್ಯ ಅತಿಥಿಗಳೂ ಆದ ಪಟ್ಟಡ ದೇವಯ್ಯ ಮತ್ತು ಶ್ರೀಮತಿ ಸೀತಮ್ಮ ದಂಪತಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದು ಬಹುಮಾನ ವಿತರಿಸಿದರು. ವೇದಿಕೆಯಲ್ಲಿ ಗೌಡ ವಿದ್ಯಾಸಂಘದ ಅಧ್ಯಕ್ಷರಾದ ಹೊಸೂರು ರಮೇಶ್ ಉಪಸ್ಥಿತರಿದ್ದರು. ಇದಕ್ಕೂ ಮೊದಲು ಕೋವಿ, ಕತ್ತಿಗಳಿಗೆ ಪೂಜೆ ಸಲ್ಲಿಸುವ ಮೂಲಕ ಪಟ್ಟಡ ದೇವಯ್ಯನವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಿರ್ದೇಶಕ ಕೊಂಪುಳಿ ಗಣೇಶ್ ಸ್ವಾಗತಿಸಿದರೆ ಪಟ್ಟಡ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿ ಸರ್ವರನ್ನು ವಂದಿಸಿದರು.

ವರದಿ: ಕೊಡಗು ಸಂಗಾತಿ.

ರಾಜ್ಯ ಮಟ್ಟದ ಭಾರ ಎತ್ತುವ ಸ್ಪರ್ಧೆ: ಮಧುಗೆ ಬೆಳ್ಳಿ ಪದಕ



ಇತ್ತೀಚೆಗೆ ಪುತ್ತೂರಿನ ಸಂತ ಫಿಲೋಮಿನಾ ಕಾಲೇಜಿನ ರಜತ ಮಹೋತ್ಸವ ಸಭಾಭವನದಲ್ಲಿ ನಡೆದ 29 ನೇ ಕರ್ನಾಟಕ ರಾಜ್ಯ ಕಿರಿಯರ ಭಾರ ಎತ್ತುವ ಸ್ಪರ್ಧೆಯಲ್ಲಿ ಜಿಲ್ಲೆಯ ಎಂ.ಜಿ. ಮಧು ಅವರು 94 ಕಿ. ಗ್ರಾಂ. ತೂಕದ ವಿಭಾಗದಲ್ಲಿ ದ್ವಿತೀಯ ಸ್ಥಾನದೊಂದಿಗೆ ಬೆಳ್ಳಿ ಪದಕವನ್ನು ಗಳಿಸಿದ್ದಾರೆ.

ಮೂಲತಃ ಅಭ್ಯತ್‌ಮಂಗಲದ ನಿವಾಸಿ, ರೇಷ್ಮೆ ಇಲಾಖೆಯಲ್ಲಿ ಉದ್ಯೋಗಿಯಾಗಿರುವ ಅಂಚೆಮನೆ ಗಣಪತಿ ಹಾಗೂ ಘನಾವತಿ ದಂಪತಿಯರ ಪುತ್ರರಾಗಿರುವ ಮಧು ಅವರು, ಸಂತ ಫಿಲೋಮಿನಾ ಕಾಲೇಜಿನ ತೃತೀಯ ಬಿ.ಎ. ವಿದ್ಯಾರ್ಥಿಯಾಗಿದ್ದಾರೆ. ಸ್ಪರ್ಧೆಯಲ್ಲಿ 212.5 ಕಿ. ಗ್ರಾಂ ಭಾರ ಎತ್ತುವ ಮೂಲಕ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ ಹಾಗೂ ರಾಷ್ಟ್ರೀಯ ಜೂನಿಯರ್ ಭಾರ ಎತ್ತುವ ಸ್ಪರ್ಧೆಗೆ ಆಯ್ಕೆ ಆಗಿರುತ್ತಾರೆ.

ಸಂಗಾತಿ

4 ನೇ ಪುಟದಿಂದ

6. ಕುಮಾರಿ ಮೆರ್ಕಜೆ ಮಾನಸ
   ತಂದೆ ಮೆರ್ಕಜೆ ಬೋಜಪ್ಪ 30
7. ಕುಮಾರಿ ಮೊಟ್ಟೆರ ಮೀನಾ
   ತಂದೆ ಮೊಟ್ಟೆರ ರಾಘವಯ್ಯ 28
8. ಕುಮಾರಿ ದೇವಾಯಿರ ಯೋಗಿತಾ
   ತಂದೆ ದೇವಾಯಿರ ಚಂಗಪ್ಪ 28
9. ಕುಮಾರಿ ಮೂಟೇರ ವಾಣಿ
   ತಂದೆ ಮೂಟೇರ ಗೋಪಾಲ 28

ಪ್ರಬಂಧ ಸ್ಪರ್ಧೆ

1. ಪೂಜಾರೀರ ಪೂರ್ಣಿಮಾ 20/25
   ತಂದೆ ಪೂಜಾರೀರ ಬೆಳ್ಯಪ್ಪ
2. ಮುದ್ಯನ ಶ್ರೀನಿಧಿ 19/25
   ತಂದೆ ಮುದ್ಯನ
3. ಬಿರುಮಣನ ನೇತ್ರಾವತಿ 18/25
   ತಂದೆ ಬಿರುಮಣನ ಬಿದ್ದಪ್ಪ
4. ದಂಬೆಕೋಡಿ ರಶ್ಮಿ 18/25
   ತಂದೆ ದಂಬೆಕೋಡಿ ಪೂಣಚ್ಚ

ಕ್ರೀಡೆಗಳ ವಿಶೇಷ ಸಾಧನೆ

1. ಕರ್ಣೆಯ್ಯನ ಈಶ್ವರ್, ತಂದೆ ಕಣೇಯ್ಯನ ಅಶೋಕ
   ಎಂ.ಪಿ.ಇ.ಎಸ್.ಪ್ರಥಮ ರ್‍ಯಾಂಕ್
2. ಕೋಟೆಮನೆ ಕವಿತಾ, ತಂದೆ ಕೋಟೆಮನೆ ಬಿದ್ದಪ್ಪ, 5000 ಮೀಟರ್ ಓಟದಲ್ಲಿ 19 ವರ್ಷ ಒಳಗಿನ ರಾಷ್ಟ್ರ ಮಟ್ಟದಲ್ಲಿ 5 ನೇ ಸ್ಥಾನ.
3. ಅಂಚೆಮನೆ ಮಧು, ತಂದೆ ಅಂಚೆ ಮನೆ ಗಣಪತಿ, ಬಾರ ಎತ್ತುವುದು. ದ್ವಿತೀಯ ಸ್ಥಾನ, ರಾಜ್ಯ ಮಟ್ಟದಲ್ಲಿ.

ಮನಸ್ಸಿನಲ್ಲಿ ಪ್ರೀತಿ ಮಾತ್ರ ಇದ್ದರೆ ಸಾಲದು, ಅದು ಕಾರ್ಯ ರೂಪದಲ್ಲಿ ವ್ಯಕ್ತವಾಗಬೇಕು.

The Gazette of India (New Delhi, Friday,June 20, 2003

MINISTRY OF SOCIAL JUSTICE AND EMPOWERMENT RESOLUTION

No.12011/1/2001-BCC.-The Government of India, vide the Ministry of Personnel, Public Grivances land pension (Department of Personnel & Training) OM No. 36012/22/93-Estt. (SCT) dated the 8th September, 1993 have reserved 27% of vacancies in Civil Posts and Services under the Central Government to be filled through direct recruitment in facour of the Other Backward Classes (OBCs).

2. The National Commission for Backward Classes (NCBC) was set up as per the provisions of the NCBC Act, 1993 Entertain, examine and recommend upon the requests for inclusion and complaints of over inclusion and under inclusion in the Central Lists of OBCs.

3. The Common Central List of OBCs in respect of 26 States/UTs were notified vide Ministry of Welfare Resolution No. 12011/68/93-BCC (c) dated the 10th September 1993, No. 12011/9/94-BCC dated the 19th October 1994, No. 12011/7/95-BCC dated the 24th May 1995, No. 12011/99/94-BCC dated the 11th December, 1997. The said lists were modified on the basis of the recommendations of the NCBC and notified from time to time vide Resolutions No. 12011/96/94-BCC dated the 9th March, 1996, No. 12011/44/96-BCC dated the 6th December, 1996, No. 12011/13/97-BCC dated the 3rd December, 1997, No. 12011/68/98-BCC dated the 27th October, 1999, No. 12011/88/99-BCC dated the 6th December, 1999, No. 12011/36/99-BCC dated the 4th April, 2000, No. 12011/44/99-BCC dated the 21st September, 2000 and No. 12015/9/2000-BCC dated 06-09-2001.

4. The NCBC have subsequently recommended castes communities (including sub castes/ synonyms) for inclusion/amendment in the Central List of OBCs in respect of Andhra Pradesh, Chandigarh, Delhi, Haryana, Karnataka, Orissa, Rajasthan and West Bengal.

5. The Government have considered and accepted the recommendations of the Commission. Accordingly, the inclusion/amendments in the Central List of OBCs in respect of afore-said States/UTs as given in the Annexure is hereby notified. These inclusions/amendments shall take effect from the date of issue of this Resolution

-Jayatichandra, Jt. Secy.

ANNEXURE :

Inclusion Amendment in the central List of other Backward Clases(OBCs) in respect of under mentioned states/ UTs.

1. Andhra Pradesh 2. Chandigarh 3. Delhi 4. Haryana 5. Karnataka 6. Orissa 7. Rajasthan 8. West Bengal

S. N.	Name of the State	Old Entry	New Entry
1.	Andhra Pradesh	90. Turupu Kapu (of Srikakulam and Visakhapatnam Districts who are subject to social custom of divorce and remarriages among their women.	90. Turupu Kapu (of Srikakulam, **Vizianagram** and Visakhapatnam Districts who are subject to social custom of divorce and remarriages among their women.
2.	Chandigarh	24 Gawala/Gwala/ Gowala/Gowale/Gawla	24 Gawala/Gwala Gowala/Gowale/Gawla/**Yadav/Ahir**
3.	Delhi	26 Julaha	26. Julaha Julaha-Ansari **(Excluding those in SCs.)**

10 ಕುಟುಂಬ 18 ಗೋತ್ರದ ಅರೆಭಾಷಿಕರಿಗೆ Gowda/Gouda ಪದ ಪ್ರಧಾನ

		16. Chippi, Tonk, Darzi 20.Dhunia Pinjara Kandera-Karan Dhunnewala 43. Nai, Hajjam, Nai (Sabita)	16. Chippi Tonk, Darzi **Idrishi** 20. Dhunia Pinjara Kandera-Karan Dhunnewala **Naddaf** **Mansoori** 43. Nai, Hajjan, Nai (Sabita) **Salmani**
4.	Haryana	66. Lodh, Lodha	66. Lodh, Lodha **Lodhi**
5.	Karnataka	156. Vokkaliga, Vakkaliga, (Rural Sarpa Vokkaliga areas Uppina Kolaga Only) Vokkaliga	156. Vokkaliga Vakkaliga, (Rural SarpaVokkaliga areas Uppina Kolaga Only) Vokkaliga, **Gouda/Gowda**
6.	Orissa	43. Gola, Golla, Gope, Sadgope, Ahir, Gour, Gouda, Goudo, Mekala Golla, Punnu Golla, Yadav, Laxminarayan Gola and Goudia Gola, Gopal/Gopala, Sholakhandia, Maghada Gouda 48. Hansi, Tanti, Sukuli, Vina, Tulabhina, Rangani, Dera, Dewanga, Kosta, Salia, Patsalia, Buna, Bunkar/ Bunkara,Bangali Tanti/Bangiya Tanti, Matobansa Tanti, Asina Tanti, Aswina Tanti, Ashani Tanti, Aswinna Tanti 103. Mali, Phulia, saghbaria, Bhajemali 188. Kalwar	43. Gola, Golla, Gope/**Gop,** Sadgope/**Sadgop,** Ahir, Gour, Gouda, Goudo, Mekala Golla Punnu Golla, Yadav, Laxminarayan Gola and Goudia Gola Gopal/Gopala. Sholakhandia Maghada Gouda, **Dumal Gouda** 48. Hansi, Tanti, Sukuli, Vina Tulabhina, Rangani Dera Dewanga, Kosta, Salia, Patsalia Buna, Bunkar/Bunkara, Bangali Tanti/Bangiya Tanti, Matibansa Tanti, Asina Tanti, Aswina Tanti Ashani Tanti, Aswinna Tanti **Rangani Tamti/Rangani Tantee.Ranganee Tantee/Rangini** Tanti/Ranguni Tanti 103. Mali Phulia, Saghbaria, Bhajemali, **Pandara Mali, Muni, Raula** (Raula in Ganjam District only) 188. Kalwar, Kalal, Kalar
7.	*Rajasthan	Nill	62. **Silawat** (Except Sompura **Murtikar)**
8	West Bengal	Nil Nil	55. Nashya-Sekh 56. Shershabadia

***** *Explanation : in the above list for the State of Rajasthan, all castes,which are known by the name of their respective traditional hereditary occupations and whose members follow different religions. include all members of those castes.irrespective of whether they follow the Hindu religion or Islam or any other religion.***

ಜನಾಂಗದ ಅರಿಯುವಿಗೆ ಭಾರತ ಸರ್ಕಾರದ ಸೂಚನಾ ಪತ್ರವನ್ನು ಪ್ರಕಟಿಸಲಾಗಿದೆ.

ಕೊಡಗು ಸಂಗಾತಿ ಬೆಳಕಿನ ಬಾಳಿಗೆ ರಹದಾರಿ



ಬಾಳಿಗೊಂದು ಮನೆ ಬೇಕು. ಬಾಳಿಗೊಂದು ಗೊನೆ ಬೇಕು. ಮಾನವ ನಡೆಯುವ ದಾರಿ, ನುಡಿಯುವ ಬಾಯಿ, ದುಡಿಯುವ ಕೈ, ನೋಡುವ ಕಣ್ಣು, ಕೇಳುವ ಕಿವಿ ಇವಿಷ್ಟು ಸ್ವಚ್ಛವಾಗಿರಬೇಕು. ಇವಿಷ್ಟೂ ಸ್ವಚ್ಛವಾಗಿದ್ದರೆ ಹೃದಯ ನಿರ್ಮಲವಾಗಿರುವುದು. ಅದೇ ರೀತಿ ನಮ್ಮ ದೇಹ ಎಂಬ ಯಂತ್ರದಲ್ಲೂ ಹೊರಗಿನ ಮಾಹಿತಿಗಳನ್ನು ಸಂಗ್ರಹಿಸುವ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳೆಂಬ ಪಂಚೇಂದ್ರಿಯಗಳಿವೆ. ಹೊರಗಿನ ಜಗತ್ತಿನ ವಸ್ತು ವಿಚಾರಗಳ ಅರಿವನ್ನುಂಟು ಮಾಡುವ ಆ ಬಾಹ್ಯ ಸಾಧನಗಳನ್ನೇ ಒಟ್ಟಾಗಿ ಬಾಹ್ಯಕರಣ ಎನ್ನಬಹುದು. ಆ ಬಾಹ್ಯಕರಣದ ಯಾವತ್ತೂ ಕೆಲಸ ಕಾರ್ಯಗಳ ರೂವಾರಿ ಆದ ಸಾಧನಗಳು ದೇಹದ ಒಳಗಿವೆ. ಅವೇ ಜ್ಞಾನೇಂದ್ರಿಯಗಳಾದ ಮನಸ್ಸು, ಬುದ್ಧಿ, ಚಿತ್ತ. ಬಾಳಿನ ನಲಿವಿಗೆ ನಾಳಿನ ಬೆಳಕಿಗೆ ತ್ಯಾಗ ಯೋಗದ ಜೀವವಾಗುವುದು. ಪ್ರೀತಿ, ಸ್ನೇಹ, ತ್ಯಾಗ ಮುಂತಾದ ಮಾತುಗಳನ್ನು ನಾವು ಬಹಳ ಹಗುರವಾಗಿ ಬಳಸುತ್ತಿರುತ್ತೇವೆ. ತ್ಯಾಗ ಮತ್ತು ಯೋಗ ಏಳ್ಗೆಯ ಹೆದ್ದಾರಿಯಿಂದ ಬೆಳಕಿನೆಡೆಗೆ ಸಾಗೋಣ. ಗೌತಮ ಬುದ್ಧ ಮನುಷ್ಯರನ್ನು ಅವರ ಆಸಕ್ತಿ, ಗಮನ, ಪರಿಸರ ಇವುಗಳ ದೃಷ್ಟಿಯಿಂದ ನಾಲ್ಕು ವಿಧಗಳಾಗಿ ವಿಂಗಡಿಸಿದ್ದಾನೆ.

1. *ಕತ್ತಲೆಯಿಂದ ಕತ್ತಲೆಗೆ ಹೋಗುವವರು*
2. *ಬೆಳಕಿನಿಂದ ಕತ್ತಲೆಗೆ ಹೋಗುವವರು*
3. *ಕತ್ತಲೆಯಿಂದ ಬೆಳಕಿನೆಡೆಗೆ ಹೋಗುವವರು*
4. *ಬೆಳಕಿನಿಂದ ಬೆಳಕಿನೆಡೆಗೆ ಹೋಗವವರು*

ಕತ್ತಲೆಯಿಂದ ಕತ್ತಲೆಗೆ ಹೋಗುವವರು, ಆತ ಹೇಗೋ ಬೆಳೆಯುತ್ತಾನೆ. ದುಷ್ಟರ ಕೂಟಕ್ಕೆ ಸೇರಿಕೊಳ್ಳುತ್ತಾನೆ. ಕತ್ತಲೆಯಿಂದ ಬೆಳಕಿನೆಡೆಗೆ ಹೋಗುವವನು ಧನ ಸಂಪಾದನೆಯ ಜೊತೆಗೆ ವಿನಯ, ಸಂಸ್ಕೃತಿಗಳನ್ನು ಬೆಳೆಸಿಕೊಳ್ಳುತ್ತಾನೆ. ಈತ ಕತ್ತಲೆಯಿಂದ ಬೆಳಕಿನೆಡೆಗೆ ಬಂದಂತಲ್ಲವೇ? ಕೆಲವರು ವಿದ್ಯಾವಂತರಾಗಿ ಒಳ್ಳೆ ಪರಿಸರದಲ್ಲಿ ಬೆಳೆದರೂ, ದುರ್ಯೋಧನ ಕ್ಲಬ್‌ನ ಮೆಂಬರನಾಗಿ, ರೋಗಗ್ರಸ್ತನಾಗಿ ಈ ಜಗತ್ತನ್ನು ತೊರೆಯುತ್ತಾನೆ. ಇವನು ಬೆಳಕಿನಿಂದ ಕತ್ತಲೆಯೆಡೆಗೆ ಹೋಗುವವನು. ಒಳ್ಳೆಯ ಕುಟುಂಬದಲ್ಲಿ ಜನಿಸಿದವರೂ ಶೈಶವದಿಂದಲೇ ಶುಭ ಸಂಸ್ಕಾರಗಳಿಂದ ಕೂಡಿದವರೂ, ಧರ್ಮಬೀರುಗಳಾದ ತಂದೆ ತಾಯಿಗಳು ಮಹಾತ್ಮರ ಪಥದಲ್ಲಿ ಮುನ್ನಡೆದು ದಿವ್ಯಾನಂದವನ್ನು ಪಡೆಯುತ್ತಾರೆ. ಇವರು ಬೆಳಕಿನಿಂದ ಬೆಳಕಿನೆಡೆಗೆ ಹೋದಂತಾಯಿತು.

ತ್ಯಾಗವೇ ಜೀವದ ಯೋಗ, ಪ್ರೀತಿ, ತ್ಯಾಗ, ಸ್ನೇಹ ಮುಂತಾದ ಮಾತುಗಳನ್ನು ನಾವು ಬಹಳ ಹಗುರವಾಗಿ ಬಳಸುತ್ತಿರುತ್ತೇವೆ. ಹೆತ್ತ ತಾಯಿಯ ಹೊತ್ತ ಜನ್ಮ ಭೂಮಿಗಾಗಿ ಮಾಡುವ ಸೇವೆಯೇ ಸ್ವರ್ಗ ಸುಖ. ಭಾರತದ ಇತಿಹಾಸದಲ್ಲಿ ಕಳೆದ ಶತಮಾನವೊಂದು ಸಂಕ್ರಾತಿಯ ಕಾಲ. ಇದು ಅನೇಕ ಮಹಾ ಪುರುಷರ ಸಾಧನೆಯ ರಂಗವಾಗಿ ಸಿದ್ಧಿಯ ಶಿಖರವಾಗಿರುವುದು ಮಾತ್ರವಲ್ಲದೆ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ಹಲವಾರು ಘಟನೆಗಳ, ಚಿಂತನೆ ಮಂಥನಗಳ ಆಲೋಚನಾಂದೋಲನಾಗಳ ಸಮಾರಾಂಗಣ ವಾಗಿದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ, ಸಾಹಿತ್ಯಿಕವಾಗಿ ಹೀಗೆ ಹಲವಾರು ವಿಧಗಳಾಗಿ ಭಾರತೀಯ ಜೀವನದ ಹೊಸ ಸ್ವರೂಪದ ಸಂಕ್ರಮಣ ಸ್ಥಿತಿಯನ್ನು ಇಲ್ಲಿ ಕಾಣಬಹುದಾಗಿದೆ. ನಾವಿಂದು 21 ನೇ ಶತಮಾನದಲ್ಲಿದ್ದೇವೆ. Twenty first century asks not for what you know, but asks for what you can do for your country. 21 ನೇ ಶತಮಾನ ನಿನಗೆ ಏನು ಗೊತ್ತಿದೆ ಎಂದು ಕೇಳುವುದಿಲ್ಲ, ನೀನು ನಿನ್ನ ತಾಯಿ ನಾಡಿಗೆ ಏನು ಮಾಡಬಲ್ಲೆ ಎಂಬುದಾಗಿ ಕೇಳುತ್ತದೆ. ಸಮಾಜದ ವ್ಯಕ್ತಿಗಳನ್ನು ಗೌರವಿಸುವುದೇ ಜೀವನದ ಅತೀ ಮುಖ್ಯವಾದ ರಹಸ್ಯ. ಸಮಾಜವು ಯಾವಾಗ ನೆಮ್ಮದಿಯಾಗಿರಬಹುದು ಎಂಬುದನ್ನು ಅರಿತವನೇ ನಿಜವಾದ ಬುದ್ಧಿವಂತ. ಸಹನೆಯುಳ್ಳ ಗುಣ ಮಾನವನ ಎಲ್ಲಾ ಒಳ್ಳೆ ಗುಣಗಳಿಗೂ ಆಭರಣವಿದ್ದಂತೆ. ಒಳ್ಳೆಯವನಾಗಿರುವುದು ಎಷ್ಟು ಪ್ರಖ್ಯಾತಿವುಳ್ಳದೆಂದು ಉತ್ತಮ ಮನಸ್ಸುಳ್ಳವರಿಗೆ ಮಾತ್ರ ಗೊತ್ತು. ದೇಶದ ಒಳಿತಿಗೆ ಅಗತ್ಯವಾದ ವಸ್ತುಗಳು, ವಿಷಯಗಳು ನಿಮ್ಮಲ್ಲಿ ಏನೇ ಇದ್ದರೂ, ಅವುಗಳನ್ನೆಲ್ಲಾ ತ್ಯಾಗ ಮಾಡಿ, ಒಬ್ಬ ವ್ಯಕ್ತಿಯ ನಡತೆ, ಅವನ ನಡಾವಳಿಕೆಯನ್ನು ಪ್ರತಿಬಿಂಬಿಸುವ ಕನ್ನಡಿಯಿದ್ದಂತೆ. ನಾವು ಇತರರನ್ನು ಸರಿಪಡಿಸಲು ಬಲು ಉತ್ಸಾಹದಿಂದ ಭಾಗವಹಿಸುತ್ತೇವೆ. ಆದರೆ ನಮ್ಮ ತಪ್ಪುಗಳನ್ನು ಮಾತ್ರ ಸರಿಪಡಿಸಿಕೊಳ್ಳುವುದಿಲ್ಲ. ಧೈರ್ಯ, ಸಹನೆ ಮತ್ತು ನಿರಂತರ ಪ್ರಯತ್ನ ಈ ಮೂರು ಮಾನವನ ಯಶಸ್ಸಿಗೆ ಕಾರಣವಾಗುತ್ತವೆ. ನಾವು ಕಷ್ಟಪಡುವುದು ನಮಗಾಗಿ, ಪತ್ರಿಕೆಗಳು ಕಷ್ಟ ಪಡುವುದು ರಾಷ್ಟ್ರದ ಹಿತಕ್ಕಾಗಿ ಮತ್ತು ಸಮಾಜದ ಅಭಿವೃದ್ಧಿಗೆ. ಈ ವಿಶ್ವದಲ್ಲಿ ಆಶ್ಚರ್ಯಕರ ಬದಲಾವಣೆಗಳನ್ನು ಮಾಡಬಲ್ಲ ಸಾಮರ್ಥ್ಯವಿರುವುದು ಶಿಕ್ಷಣ ಮತ್ತು ಮಹಿಳೆಯರಿಂದ ಮಾತ್ರ ಸಾಧ್ಯ. ಮಹಿಳೆಯರು ಮಾಡುವ ಕೆಲಸ ಚಿಕ್ಕದಾದರೂ ಅದಕ್ಕೆ ಹೆಚ್ಚು ಗೌರವವನ್ನು ತೋರುವುದರಲ್ಲೇ ಮರ್ಯಾದೆ ಅಡಗಿದೆ. ಒಳ್ಳೆ ಒಬ್ಬಳು ತಾಯಿ ಒಂದು ಸಾವಿರ ಶಾಲಾ ಶಿಕ್ಷಕರಿಗೆ ಸಮ.

ತಾಯಿಗಿಂತ ಮಿಗಿಲಾದ ಬಂಧುವಿಲ್ಲ, ಉಪ್ಪಿಗಿಂತ ಮಿಗಿಲಾದ ರುಚಿಯಿಲ್ಲ, ವಿದ್ಯೆಗಿಂತ ಮಿಗಿಲಾದ ಸಂಪತ್ತಿಲ್ಲ.

-ಶಿರಕಜೆ ನಂಜುಂಡ, ನಿವೃತ್ತ ಸ್ಕೂಲ್ ಮಾಸ್ಟರ್, ಕುಶಾಲನಗರ.

ಧೈರ್ಯ, ಸಹನೆ ಮತ್ತು ನಿರಂತರ ಪ್ರಯತ್ನ ಖಂಡಿತ ಮಾನವನ ಯಶಸ್ಸಿಗೆ ಕಾರಣವಾಗುತ್ತದೆ.

ಬಾಲ ಸಂಗಾತಿ ವಿಭಾಗ : ಜ್ಞಾನ -16

ಶಾಲೇಲಿ ಹೇಳಿಕೊಟ್ಟಿದ್ದೆಲ್ಲಾ ನಿಜ ಅಲ್ಲಾ

ಕಾಲ ಗಣನೆ

ಕೃತ, ತ್ರೇತಾ, ದ್ವಾಪರ ಮತ್ತುಕಲಿಯುಗದ ತಮ್ಮ ಸಂಧ್ಯಾ ಮತ್ತು ಸಂಧ್ಯಾಂಶಗಳೊಟ್ಟಿಗೆ ದೇವತೆಗಳ ಹನ್ನೆರಡ್ ಸಾವಿರ ವರ್ಷಗಳ ವರೆಗೆ ಇದ್ದವೆ. ಕೃತವೇ ಮೊದಲಾದ ನಾಲ್ಕು ಯುಗಗಳಲ್ಲಿ ಕಮಕ :ನಾಲ್ಕು, ಮೂರು, ಎರಡ್, ಮತ್ತೆ ಒಂದು ಸಾವಿರ ದಿವ್ಯ ವರ್ಷಗಳಿದ್ದವೆ. ಮತ್ತೆ ಪ್ರತಿಯೊಂದರ್ಲಿ ಎಷ್ಟ್ ಸಾವಿರ ವರ್ಷಗ ಉಟ್ಟೊ ಅದರ ಎರಡ್‌ಪಟ್ಟ್ ನೂರ್ ವರ್ಷಗ ಅವುಗಳ ಸಂಧ್ಯಾ ಮತ್ತೆ ಕೊನೆಲಿ ಸಂದ್ಯಾಂಶಗಳ್ಲಿ ಇದ್ದದೆ. ಯುಗದ ಆರಂಭಲಿ ಸಂದ್ಯಾ ಮತ್ತೆ ಕೊನೆಲಿ ಸಂದ್ಯಾಂಶ ಇದ್ದೆ. ಇವೆರಡರ ಮಧ್ಯ ಕಾಲನ ಕಾಲ ತಜ್ಞಂಗ 'ಯುಗ' ತೇಳಿ ಹೇಳ್ಯೊಳೊ.

ಕೃತಯುಗಲಿ 4000 ದಿವ್ಯ ವರ್ಷಗ 'ಯುಗ'ಕ್ಕೆ ಸಂಬಂಧಿಸಿದವು. 'ಸಂಧ್ಯಾ' ಮತ್ತೆ ಸಂಧ್ಯಾಂಶಗಳಿಗೆ ಸಂಬಂಧಿಸಿದವು 800 ವರ್ಷಗ. ಒಟ್ಟು 4800 ದಿವ್ಯ ವರ್ಷಗ. ಇದೇ ರೀತಿ 3600 ದಿವ್ಯ ವರ್ಷಗ ತ್ರೇತಾಯುಗಲೂ 2400 ವರ್ಷಗ ದ್ವಾಪರಲೂ ಮತ್ತೆ 1200 ದಿವ್ಯ ವರ್ಷಗ ಕಲಿಯುಗಲೂ ಇದ್ದವೆ. ಮನುಷ್ಯರ ಒಂದು ವರ್ಷ, ದೇವತೆಗಳ ಒಂದು ದಿನ ಆಗಿಟ್ಟು. ಆದ್ದರ್‌ಂದ ದೇವತೆಗಳ ಒಂದು ವರ್ಷ, ಮನುಷ್ಯರ 360 ವರ್ಷಗಳಿಗೆ ಸಮನಾಗಿಟ್ಟು. ಅದರ್‌ಂದ ಮಾನವೀಯ ಕಾಲಗಣನೆ ತರ ಕಲಿಯುಗಲಿ 4,32,00 ವರ್ಷಗ. ಇದರ ಎರಡರಷ್ಟ್ ವರ್ಷಗ ದ್ವಾಪರಯುಗಲೂ, ಮೂರರಷ್ಟ್ ವರ್ಷಗ ತ್ರೇತಾಯುಗಲೂ ಮತ್ತೆ ನಾಲ್ಕರಷ್ಟ್ ವರ್ಷಗ ಕೃತಯುಗಲೂ ಇದ್ದದೆ.

ಒಂದು ಸಹಸ್ರ ಚತುರ್ಯುಗಗ ಬ್ರಹ್ಮನ ಒಂದು ಹಗ್‌ಲಿಗೆ ಸಮ. ಮತ್ತೆ ಇಷ್ಟೇ ಪ್ರಮಾಣದ ವರ್ಷಗ ಬ್ರಹ್ಮನ ರಾತ್ರಿಲಿ ಉಟ್ಟು. ಆ ಸಮಯ ಬ್ರಹ್ಮನ ನಿದ್ರಾಕಾಲ. ಬ್ರಹ್ಮನ ಒಂದು ಹಗಲ್ ಒಂದು ರಾತ್ರಿ ಕಳ್ದರೆ ಈ ಲೋಕದ ಒಂದು ಕಲ್ಪ ಆದೆ. ಒಂದು ಕಲ್ಪಲಿ 14 ಮನುಗ ಇದ್ದವೆ. ಒಂದೊಂದು ಮನುವು 71 ಚತುರ್ಯುಗಕ್ಕಿಂತ ಸ್ವಲ್ಪ ಜಾಸ್ತಿ ಅಂದರೆ 716/19 ಚತುರ್ಯುಗ ಗಳಷ್ಟ್ ಕಾಲ ಅಧಿಕಾರನ ಅನುಭವಿಸುವೆ. ಬ್ರಹ್ಮನ ಮಾನಕ್ಕನುಗುಣ ಆಗಿ ಅವನ ಆಯಸ್ಸು 100 ವರ್ಷಗ. ಬ್ರಹ್ಮನ ಮಾನಕ್ಕನುಗುಣ ಆಗಿ ಅವನ ಆಯಸ್ಸು 100 ವರ್ಷಗ. ಬ್ರಹ್ಮನ ಅರ್ಧ ಆಯಸ್ಸುನ "ಪರಾರ್ಧ" ತ್ತೇಳಿ ಹೇಳುವೆ. ಇಲ್ಲಿವರೆಗೆ ಮೊದಲನೆಯ ಪರಾರ್ಧ ಕಾಲ ಮುಗ್ದ್ ಎರಡನೆ ಪರಾರ್ದ ಆರಂಭ ಆವುಟು. ಎರಡ್ ಪರಾರ್ಧ್ ಕಾಲ ವಿಶ್ವಾತ್ಮನಾದ ಶ್ರೀ ಹರಿಯ ಒಂದು ನಿಮಿಷತ ಹೇಳುವೆ.

ಮುಂದುವರ್ದದೆ. -ಬಿಟ್ಟೀರ ಚೊಂದಮ್ಮ

ಬಾಲ ಸಂಗಾತಿ ವಿಭಾಗ : ಕಥೆ-16

ಯಾರ್ ಮೂರ್ಖರ್

ಬಾಳ ಹಿಂದೆನ ಕಾಲಲಿ ಒಂದ್ ಊರಿಂದ ಇನ್ನೊಂದು ಊರಿಗೆ ಕಾಲ್ನಡಿಗೆಲಿ ಹೋಗಿ ಬಾಕು. ಒಂದು ದಿನ ಒಬ್ಬ ಅಜ್ಜ ಅರ್ಜೆಂಟಾಗಿ ಪಕ್ಕದ ಊರಿಗೆ ಹೋಗಿ ಏನೋ ಸುದ್ದಿ ಮುಟ್ಟಿಸಿ ವಾಪಾಸ್ ತನ್ನ ಊರಿಗೆ ಬರಕ್ಕಾಗಿತ್ತ್. ಪಾಪ ಅಜ್ಜಂಗೆ ವಯಸ್ಸಾದ ಕಾರಣ ಸ್ವಲ್ಪ ದೂರ ನಡ್ದ್ ಅದ ತಕ್ಷಣ ತುಂಬಾ ಆಯಾಸ ಆದೆ. ಒಂದು ಮರದ ಕೆಳಗೆ ಸ್ವಲ್ಪ ಹೊತ್ತ್ ಕುದ್ದ್ ಸುಧಾರಿಸಿಕಂಡ್ ಹೋಕ್‌ತ ಗ್ಯಾನ ಮಾಡಿ ಕುದ್ದದೆ. ಸ್ವಲ್ಪ ಹೊತ್ತಲಿ ಅಲ್ಲಿ ಎರಡ್ ಹೈದಗ ಬಂದ್ ಜಗಳ ಆಡುವೆ. ಅಜ್ಜ ಅವರ್‍ನ ಹತ್ರ ಕರ್ದ್ ಕಾರಣ ಕೇಳ್ದೆ. ಆಗ ಒಬ್ಬ ಹೇಳ್ದೆ, ನಮ್ಮಲ್ಲಿ ಯಾರ್ ಬುದ್ಧಿವಂತರ್ ಯಾರ್ ಶಕ್ತಿಶಾಲಿತ ಮಾತ್ ಬಾತ್. ಇವಂಗಿಂತ ನಾನ್‌ಬುದ್ಧಿವಂತ ನಾನ್ ಶಕ್ತಿವಂತತ ಹೇಳ್ದೆ. ಇಂವ ಅದರ್‍ನ ಒಪ್ಪದೆ ಅವನೇ ಬುದ್ಧಿವಂತ ಅವನೇ ಶಕ್ತಿವಂತತ ಜಗಳ ಮಾಡ್ತ ಉಟ್ಟುತ ಹೇಳ್ತ್. ಅಜ್ಜ ಹೇಳ್ತ್ ನಿಮ್ಮ ಸಮಸ್ಯೆಗೆ ನಾನ್ ಉತ್ತರ ಹೇಳ್ನೆ. ಮೊದಲ್ ನಿಮ್ಮ ಶಕ್ತಿನ ಪರೀಕ್ಷೆ ಮಾಡಿ ಮತ್ತೆ ಬುದ್ಧಿ ಪರೀಕ್ಷೆ ಮಾಡ್ನೆತ್ತೇಳಿ. ಈಗ ನನ್ನನ ಎತ್ತಿಕಂಡ್ ಪಕ್ಕದ ಊರಿಗೆ ಹೊರಡಿತ್ತೇಳ್ತ್. ವಯಸ್ಸಿನ ಹುಡ್‌ಗರ್ ಅದ್ದರ್‌ಂದ ಲೀಲಾಜಾಲಲಿ ಅಜ್ಜನ ಎತ್ತಿಕಂಡ್ ಹೋಗಿ ಪಕ್ಕದ ಊರ್‌ಲಿ ಅವ್ರು ಹೋಗಬೇಕಾದ ಮನೆಗೆ ತಲ್ಪಿಸಿದೊ. ಈಗ ಹೇಳಿ ಯಾರ್ ಶಕ್ತಿಶಾಲಿತತಕೇಳ್ದೆ ಆಗ ಅಜ್ಜ ಒಂದು ನಿಮಿಷ ಇರಿತ್ತೇಳಿ ಒಳಗೆ ಹೋಗಿ ಮನೆವುಕೆ ತಲ್ಪಿಸಬೇಕಾದ ಸುದ್ದಿನ ತಲ್ಪಿಸಿ, ಹೊರಗೆ ಬಂದ್ ಹೇಳ್ದೆ. ನೀವಿಬ್ಬರೂ ಬಾಳ ಶಕ್ತಿವಂತರೇನೋ ಸರಿ, ಆದರೆ ಇಬ್ಬರೂ ಮೂರ್ಖರೆ, ನಿಮ್ಮ ಶಕ್ತಿ ಪರೀಕ್ಷೆ ಮಾಡಿಕೆ ಇಷ್ಟ್ ದೂರ ನನ್ನನ ಹೊತ್ತ್‌ಕಂಡ್ ಬಂದೊಳರಿಯಲ್ಲತ ಜೋರಾಗಿ ನೆಗಾಡ್ದೆ. ಹುಡ್‌ಗರ್ ಮಖಿ ಮಖಿ ನೋಡಿಕಂಡ್ ಅಜ್ಜನ ಹಿಡ್ದ್ ಎತ್ತಿಕಂಡ್ ಓಡಿಬಂದ್ ಮೊದಲ್ ಕುದ್ದಿದ ಜಾಗಲಿ ಕುಕ್ಕುವೆ. ಮತ್ತೆ ಈ ಯಾರ್ ಮೂರ್ಖರ್‌ತ ಗ್ಯಾನ ಮಾಡಿಕಂಡ್ ಕುದ್ದುಕತೇಳಿ ತ್ತೇಳಿ, ಅವರ ದಾರಿ ಹಿಡ್ದ್ ಹೋದವೆ. ಅವು ಅತ್ತ ಹೋಕನ ಅಜ್ಜ ಮೆಲ್ಲೆ ಎದ್ದ್ ಮೀಸೆ ಮೇಲೆ ಕೈಯಾಡಿಸಿಕಂಡ್ ಯಾರ್ ಮೂರ್ಖರ್‌ತ ನೆಗಾಡಿಕಂಡ ಮನೆ ಸೇರಿ ಕಂಡದೆ.

-ಮುಂದುವರ್ದದೆ. ಬಿಟ್ಟೀರ ಚೊಂದಮ್ಮ

ಮಿತವ್ಯಯವನ್ನು ಪಾಲಿಸದ ಯಾರೂ ಶ್ರೀಮಂತರಾಗಲು ಸಾಧ್ಯವಿಲ್ಲ, ಪಾಲಿಸಿದ ಯಾರು ಬಡವರಾಗಲು ಸಾಧ್ಯವಿಲ್ಲ.

ಶ್ರೀ ಬಾರಿಯಂಡ ಜೋಯಪ್ಪಣ್ಣನ ಚಾಂಪ ಇನ್ನ್ ಬಾಕಿ ಕಥೆಗಳ ಸಂಚಿಯುದ ವಿಮರ್ಷೆ

ಕೊಡಗ್‌ನ ಗೌಡ ವಿದ್ಯಾಸಂಘದ ಪರವಾಗಿ ಒಬ್ಬ ವ್ಯಕ್ತಿಬರ್ದ ಬರವಣಿಗೆನ ಅಚ್ಚು ಹಾಕಿಸಿ ಜನ ಓದಿಕೆ ತಲ್ಪಿಸುವ ಕೆಲಸನ ಮಾಡಿರ್ದು ಒಂದು ಸಂತೋಷದ ವಿಷಯ. ಈ ರೀತಿ ಶ್ರೀ ಹೊಸೂರು ರಮೇಶ್ ಜೋಯಪ್ಪಣ್ಣ ಮತ್ತೆ ಅವರ ಕಾರ್ಯಕಾರಿ ಮಂಡಳಿಯ ಎಲ್ಲಾ ಸದಸ್ಯರ್ ಈ ರೀತಿ ಮಾಡಿದ್ದರ್‌ಂದ ಜೋಯಪ್ಪಣ್ಣನಂತ ಬರವಣಿಗೆಗಾರಂಗೆ ಒತ್ತು ಕೊಟ್ಟದ್ ಹೊಗಳುವ ವಿಸಯ ಆಗಿಟ್ಟು. ಕಾರಣ ನಮ್ಮ ಜನ್ರಲಿ ಸಾಹಿತ್ಯ ಕ್ಷೇತ್ರಲಿ ಕಾಲ್ ಹಾಕಿದವು ಬಾಳ ಅಪರೂಪ. ಒಂದು ಸಮಯ ಕಷ್ಟಪಟ್ಟ್ ಬರ್‌ದ್ ಅಚ್ಚ್ ಹಾಕಿಸಿರು ಆ ಪುಸ್ತಕನ ಕ್ರಯಕ್ಕೆ ತರಣಿಕೆ ಹಿಂದೆ ಮುಂದೆ ನೋಡಿವೆ. ನಂಗೆ ಈ ವಿಸಯಲಿ 1968 ರಿಂದಲೇ ಸರಿಯಾದ ಅನುಭವವುಟ್ಟು. ಇಲ್ಲಿ ಬೆಂಗಳೂರಿನ ಕೊಡಗು ಮತ್ತು ದ. ಕ. ಗೌಡ ಸಮಾಜ ಮೂಲಕ 5 ಸಲ ಪುಸ್ತಕ ಬಿಡುಗಡೆ ಮಾಡ್ರು ಒಂದೊಂದು ಸಲಕ್ಕೆ 1,000 ಪುಸ್ತಕಗಳ ಅಚ್ಚ್ ಹಾಕಿಸಿರೂ 500-600 ಪುಸ್ತಕ ಮಾರಾಟ ಆಗಿ ಬಾಕಿ ಉಳದರ್‌ನ ಪುಕ್ಸಾಟೆ ಕೊಡುವ ಸ್ಥಿತಿ ಬಾತ್. ಅದೇ ರೀತಿ ನಾನ್ ಬರ್ದ ಪುಸ್ತಕನ ಗತಿ ಆತ್. ಗೌಡ ಧ್ವನಿ ಇದೇ ಕಾರಣಂದ ನಿಂತೊತು. ಕೊಡಗು ಸಂಗಾತಿ ಪತ್ರಿಕೆ ಶುರು ಆಗಿ 6-7 ವರ್ಷ ಆದರೂ ಅದರ್ನ ಬಾಳ ಕಷ್ಟಲಿ ನಡಿಸುತ್ತಾವೊಳೋ. ಅದೇ ರೀತಿ ಶ್ರೀ ಭವಾನಿ ಶಂಕರಣ್ಣನ ಸಂತೃಪ್ತಿ ಪದ್ಯ ಸಂಕಲನ, ಶ್ರೀ ಬೈತಡ್ಕ ಜಾನಕಿ ಅಕ್ಕ ಸಂಗ್ರಹಿಸಿದ ಹಸೆ ಮಣೆ ಪುಸ್ತಕದ ಗತಿಯೂ ಅದೇ ರೀತಿ ಆತ್. ಕೊ. ಮತ್ತು ದ.ಕ. ಗೌಡ ಸಮಾಜ ಹೊರಡಿಸಿದ ಪುಸ್ತಕ ಅಲ್ಲದೆ ಬೇರೆ ಎಲ್ಲಾ ಪುಸ್ತಕದ ಹಂಗೂ ಪತ್ರಿಕೆಗ ವ್ಯಕ್ತಿಗಳ ಶ್ರಮದಿಂದ ಹೊರತಂದದ್ದರಿಂದ ಈ ರೀತಿ ನಮ್ಮ ಜನಂದ ಪ್ರೋತ್ಸಾಹ ಇಲ್ಲದೆ ನಷ್ಟಪಟ್ಟ್‌ಕೊಂಬ ಸ್ಥಿತಿ ಬಾತ್. ಬರಹಗಾರಂಗೆ ಉತ್ಸಾಹ ಇದ್ದರೂ ಹಣದ ಅಡಚಣೆಯಿಂದಾಗಿ ಬರ್ದು ಅಚ್ಚು ಹಾಕಿಸಿದವಂಗೆ ನಾನ್ ಯಾಕಾರ್ ಈ ಕೆಲ್ಸಕ್ಕೆ ಕೈ ಹಾಕಿದನೋತ್ತೇಳುವ ಜಿಗುಪ್ಸೆ ಆದೆ. ಹಂಗಾಗಿ ಅಂತಾ ಜಿಗುಪ್ಸೆ ಬಾರದಂಗೆ ಕೊಡಗ್ ಗೌಡ ವಿದ್ಯಾಸಂಘದವು ಶ್ರೀಬಾರಿಯಂಡ ಜೋಯಪ್ಪಣ್ಣ ಬರ್ದ ಚಾಂಪ ಸಣ್ಣ ಕತೆಗಳ ಪ್ರಕಟಿಸಿ ಅದರ ಮಾರಾಟದ ಉಸ್ತುವಾರಿನ ತಕ್ಕಂಡದ್ ನಮ್ಮ ಜನ ಬರಿಯವಕೆ ಒತ್ತು ಕೊಟ್ಟಂತಾತ್ತ್ತೇಳಿ ಈ ವಿಸಯಲಿ ಒಂದೆರಡ್ ಮಾತ್ ಬರೆಕಾತ್. ಇದೇ ರೀತಿ ಕೊಡಗ್ ಗೌಡ ವಿದ್ಯಾ ಸಂಘದವು ವರ್ಷಕೊಂದಾದರ್ ಪುಸ್ತಕ ಪ್ರಕಟಣೆಗೆ ಕೈ ಹಾಕಿರೆ ಗೌಡ ಸಂಸ್ಕೃತಿ ಪ್ರಚಾರ ಕೆಲಸ ಹಂಗೂ ಅರೆಭಾಸೆಯ ಅಭಿವೃದ್ಧಿ ಆದೂತ ನನ್ನ ಅನಿಸಿಕೆ.

ಇನ್ ಚಾಂಪ ಮತ್ತೆ ಕತೆಗಳ ಇಸಯ ಹೇಳ್‌ದಾದರೆ ಶ್ರೀ ಬಾರಿಯಂಡ ಜೋಯಪ್ಪಣ್ಣನ ಕತೆಗಳ್ನ ಓದುಕಾಕನ ನಮ್ಮನ್ನ 60-70 ವರ್ಸದ ಹಿಂದೆಗೆ ಕರದ್‌ಕೊಂಡ್ ಹೋಗಿ ಆಗ ನಮ್ಮ ಸಾಮಾನ್ಯ ಜನರ ದಿನ ನಿತ್ಯದ ಜೀವನದ ಬಗ್ಗೆ ನಮ್ಮ ಜನರ ಹವ್ಯಾಸ ಅವರ ಜೀವನ ಶೈಲಿ ಆಗಿನ ಕಾಲದ ಜನರ ಒಳ್ಳೆ ಹಂಗೆ ಕೆಟ್ಟ ಗುಣಗಳ್ನ ನಮ್ಮ ಕಣ್ಣ್ ಮುಂದೆ ಬರುವಂತೆ ಮಾಡ್ಯೊಳೊ.

ಈ ರೀತಿ ಅದ್ ಕತೆಗಳ ಮುಖಾಂತರ ಮಾತ್ರನೇ ಸಾಧ್ಯವಾದು. ಬೇರೆ ತರದ ಬರವಣಿಗೆ ಆಗಲಿ ಭಾಸೆ ಆಗಲಿ ಸಾಧ್ಯವಾಕಿಲ್ಲೆ. ನೀತಿ ಬೋಧನೆಗೆ ಜೀಸಸ್ ಕ್ರೈಸ್ತ, ಭಗವಾನ್, ಬುದ್ಧ, ಹಂಗೂ ಶ್ರೀ ರಾಮಕೃಷ್ಣ ಪರಮಹಂಸ ಮುಂತಾದವು ಕತೆಗಳನ್ನೇ ಹೇಳಿ ನೀತಿನ ಜನಕ್ಕೆ ಭೋದಿಸಿಳೊ. ಅದೇ ರೀತಿ ಶ್ರೀ ಜೋಯಪ್ಪಣ್ಣನ ಸಣ್ಣ ಕತೆಗ ಮುಂದಿನ ಪೀಳಿಗೆಗೆ ಈ ಕತೆಗ ಸಾಯಆದು. ಜೋಯಪ್ಪಣ್ಣ ನಮ್ಮ ಜನರ ಈ ಹಿಂದಿನ ಜೀವನದ ವಿಸಯಲೂ ಹಂಗೂ ಜನಿಗೆ ಅದೇ ರೀತಿ ನಮ್ಮ ಜನರಲ್ಲಿರುವ ಕೆಲವು ಮೂಢನಂಬಿಕೆಗ ಕೆಟ್ಟ ಚಟ ಇವುಗಳ ತಿದ್ದಿಕೆ ಇರುವ ದಾರಿನ ಸಹ ಸೂಚಿಸ್ಯೊಳೊ. ಆದರೆ ಜೋಯಪ್ಪಣ್ಣ ಅವರ ಬರವಣಿಗೆಲಿ ಕೆಲವು ಕನ್ನಡ ಹಂಗೂ ಇಂಗ್ಲೀಷ್ ಶಬ್ದಗಳಿಗಿಂತ ಅರೆಭಾಸೆಲೇ ಬರೆದಿದ್ದರೆ ಒಳ್ಳೆದಿತ್ತ್.

ಉದಾ : ತಿಥಿ-ದಿನ, ಬಚ್ಚಲಮನೆ - ಗುಡ್ನ,

ಚುನ್ನ-ಲಾಯಕ,   ಡ್ಯೂಟಿ- ಕರ್ತವ್ಯ ಅಥವಾ ಕೆಲಸ

ರಾಂಗ್- ತಪ್ಪು.

ಈ ರೀತಿ ಮಾಡ್ರೆ ಈಗಿನ ಗೂಡೆ ಹೈದಂಗಳಿಗೆ ಅರೆಬಾಸೆ ಪದಗ ಗೊತ್ತ್ ಮಾಡ್ಸಿದಂಗೆ ಆದೆ. ಇಲ್ಲದಿದ್ದರೆ ಆ ಸಬ್ಧಗ ಗೊತ್ತೇ ಇರ್ದುಲೆ.

ಅರೆಬಾಸೆಲಿ ಪದ್ಯ ಲೇಖನ ಕತೆ ಕಾದಂಬರಿಗಳ ಜೋಯಪ್ಪಣ್ಣನಂಗೆ ತುಂಬಾ ಜನ ಬರೆಯಕು. ಬರ್ದ್ ಅಚ್ಚು ಹಾಕಿರೆ ಸಾಲ್ದ್. ಅದರ್ನ ಜನಕ್ಕೆ ಓದುವ ಅಭ್ಯಾಸ ಬೇಕು. ಜನಿಗೆ ನಮ್ಮ ಭಾಷೆ ನಮ್ಮ ಸಂಸ್ಕೃತಿತ್ತೇಳುವ ನಾವ್ ಬೇರೆ ಜನಾಂಗದವರೊಟ್ಟಿಗೆ ಗುರ್ತಿಸಿಕೊಣಕು. ಪರಬಾಸೆ, ಪರ ಸಂಸ್ಕೃತಿ ಅನುಕರಣೆಗಿಂತ ನಮ್ಮ ಸಂಸ್ಕೃತಿ ನಮ್ಮ ಬಾಸೆತ್ತೇಳುವ ಭಾವನೆ ಬೆಳೆಯೋಕು. ಅದಿಲ್ಲದಿದ್ದರೆ ಕತೆ ಕವನ ಚರಿತ್ರೆ ಬರೆದವೂ ಅದರ್ನ ಅಚ್ಚ್ ಹಾಕಿಸುವ ಪ್ರಯತ್ನ ಬರೀ ಗಾಳಿಗೆ ಗುದ್ದಿದಂಗಾದೆ. ಬರೀ ಸಂಸ್ಕೃತಿ ಮತ್ತೆ ಬಾಸೆಯ ಮೋಹ ಜನಕು ಹುಟ್ಟೊಕು. ಈ ರೀತಿ ಆಕೊರೆ ಗ್ರಾಮ ಗ್ರಾಮಗಳ್ಲಿ ಗೌಡ ಸಮಾಜ ಸ್ಥಾಪನೆ ಆಗಿ ಗ್ರಾಮದ ಪ್ರಜ್ಞಾವಂತರ್ ಮುಂದೆ ಬಂದ್ ಭಾಸೆ ಮತ್ತೆ ಸಂಸ್ಕೃತಿ ವಿಸಯ ಪ್ರಚಾರ ಮಾಡಿ ಜನರ ಸಾಹಿತ್ಯ ಸಂಸ್ಕೃತಿ ಕಡೆಗೆ ಗಮನ ಹರಿಸಿಕ್ಕೆ ಕೆಲ್ಸ ಮಾಡೋಕು. ಗೌಡ ಸಮಾಜ ಸ್ಥಾಪನೆಂತೇಳ್ರೆ ಅಲ್ಲಿ ಕಟ್ಟಡ ಆಕುಂತ್ತೇಳುವ ಅರ್ಥ ಅಲ್ಲಾ. ಪ್ರತಿ ಗ್ರಾಮಲಿ ಸಂಘಟನೆ ಆಕುಂತೇಳುವ ಅರ್ಥ. ಈ ರೀತಿ ಆಕೊರೆ ಜಿಲ್ಲೆ ಮಟ್ಟದ ಸಂಘ ಸಂಸ್ಥೆಗ ಅದಿರ್ಲಿ ಹೆಚ್ಚಿನ ಶ್ರಮ ವಹಿಸೋಕು. ಗೌಡ ದಿಕ್ಕ್‌ಲಿ ಕೊಡಗ್ ವಿದ್ಯಾಸಂಘದವು ಈಗ ಹಾಕಿಕೊಂಡ ಯೋಜನೆ ಒಂದು ಗಟ್ಟಿ ಮನಸ್ಸಿನ ಹೆಜ್ಜೆತ್ತೇಳಕ್ಕ್. ಈ ರೀತಿನ ಕೆಲಸ ಇನ್ನೂ ಮುಂದುವರಿಯಲಿಂತ ನನ್ನ ಅಭಿಲಾಸೆ ಆಗಿಟ್ಟು.

ಬರೆದವು : ಪ್ರೊ|| ಪೂಜಾರಿ ಮೊಣ್ಣಪ್ಪ.

'ಶಾಲಾ ಹಂತಲೇ ಮಕ್ಕಳಿಗೆ ದೇಶಾಭಿಮಾನ ಮೂಡ್ಸೋಕು'

ಕೊಡಗು ಜಿಲ್ಲಾ ಸರ್ಕಾರಿ ಶಾಲಾ ಶಾಲಾಭಿವೃದ್ಧಿ ಸಮಿತಿಗಳ ಹಾಗೂ ಹಿತೈಷಿಗಳ ಒಕ್ಕೂಟದ ಅಧ್ಯಕ್ಷ ದಂಬೆಕೋಡಿ ಹರೀಶ್ ಬಿಚ್ಚುನುಡಿ.

ಗೌಡ ಜನಾಂಗಲಿ ಹಲವು ವ್ಯಕ್ತಿಗ ಬಾಳ ಉನ್ನತ ಸ್ಥಾನನ ತಲುಪಿದವು ಒಳೊ. ದೊಡ್ಡ ದೊಡ್ಡ ಅಧಿಕಾರ ಚಲಾಯಿಸಿದವು ಒಳೊ. ಆದರೆ, ಉನ್ನತ ಸ್ಥಿತಿಗೆ ತಲ್ಪಿದಂಗೆಲ್ಲಾ ಅವ್‌ಕೆ, ನಮ್ಮ ಭಾಷೆ ಮರ್‍ತೋದೆ. ನಮ್ಮ ಸಂಸ್ಕೃತಿ ಮರ್‍ತೋದೆ. ಕೊನೆಗೆ ನಮ್ಮ ಜನಾಂಗದವರ್‍ನ, ಅವರೊಟ್ಟಿಗೇ ಇದ್ದವರ್‍ನ ಸನ ಮರ್‍ತುಬುಟ್ಟವೆ. ಮತ್ತೆ ಅವುಕೆ ಜನಾಂಗದ ನೆನ್ಪಾದು ಉದ್ಯೋಗಂದ ನಿವೃತ್ತಿಯಾದ ಮ್ಯಾಲೆ. ಯಾರೂ ತಮ್ಮನ್ನ ಮೂಸುಲೆತ ಗೊತ್ತಾದ ಮ್ಯಾಲೆ 'ಸಂಗಾತಿ'ಪತ್ರಿಕೆ ಮೂಲಕ ಹಲವ್ರರ್‍ನ ಹತ್ರಂದ ಕಂಡ್ ಮಾತಾಡ್ನಿ, ಪತ್ರಿಕೆಲಿ ಬರ್‍ದ್, ಒಂದ್ ವರ್ಷ ಕಳ್ದ್ ಭೇಟಿಯಾಕನ ನಮಸ್ಕಾರ ಹೇಳ್ರೆ, ನೀವ್ ಯಾರ್‌ತ ಗೊತ್ತಾತ್ಲೆಲ್ಲಣ್ಣ ತ ನಂಗೆ ಹೇಳ್ದವ್ ಬಾಳಷ್ಟ್ ಜನ ಒಳೊ. ಆದರೆ ಇವ್‌ಕೆ ಅಪವಾದದಂಗೆ ಇರ್‍ವ ವ್ಯಕ್ತಿ ಶ್ರೀ ದಂಬೆಕೋಡಿ ಹರೀಶ್. ದೊಡ್ಡ ಕುಟುಂಬಲಿ ಹುಟ್ಟಿದವ್ ಇವ್. ದೂರದ ಅಮೇರಿಕಲಿ ದೊಡ್ಡ ಉದ್ಯೋಗಲಿ ಇದ್ದವ್. ಆದ್ರೆ ಅಲ್ಲಿಗೇ 'ಕೊಡಗು ಸಂಗಾತಿ'ನ ತರ್‍ಸಿಕಂಡ್ ಓದುತ್ತಿದ್ದ ಅವ್ ಅಲ್ಲಿಂದಲೇ ಸಂಗಾತಿಗೆ ಅರೆಗನ್ನಡದ ಲೇಖನಗಳ್ನ ಕಳ್ಸಿದ್ರೊ. ಅಮೇರಿಕಂದ ಹಿಂದಿರ್‍ಗಿದ ಮ್ಯಾಲೆ ಗೌಡ ಸಂಘಟನೆಗಳಲಿ ತಮ್ಮನ್ನ ತೊಡ್ಗಿಸಿಕಂಡ್, ಯುವ ಜನತೆಯ ಪ್ರೀತಿಯ ಹರಿಯಂಕಲ್‌ತ ಪ್ರಸಿದ್ಧಿಯಾಗೋಳೊ. ಇತ್ತೀಚೆಗೆ ಇವು ಕೊಡಗು ಜಿಲ್ಲಾ ಸರ್ಕಾರಿ ಶಾಲಾ, ಶಾಲಾಭಿವೃದ್ಧಿ ಸಮಿತಿಗಳ ಹಾಗೂ ಹಿತೈಷಿಗಳ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗೊಳೊ. ಈ ಹಿನ್ನಲೆಲಿ ಇವರ್‍ನ ಮಾತಾಡ್ಸಿಕಾಕನ 'ಸಂಗಾತಿ'ಯೊಟ್ಟಿಗೆ ಅವ್ ಹಂಚಿಕಂಡ ಅನುಭವನ ನಿಮ್ಮ ಮುಂದೆ ಇಡ್ತಾ ಒಳೊ.

ಕೊಡಗು ಸಂಗಾತಿ : ನಿಮ್ಮ ಸಂಘಟನೆಯ ಉದ್ದೇಶ ಎಂತ?

ಉತ್ತರ : ಸರ್ಕಾರಿ ಶಾಲಾಭಿವೃದ್ಧಿ ಸಮಿತಿಗಳ ಮತ್ತೆ ಹಿತೈಷಿಗಳ ಒಕ್ಕೂಟದ ಮುಖ್ಯ ಉದ್ದೇಶ ಜನ ಸಾಮಾನ್ಯರ ಮಕ್ಕಳ ಸರ್ವತೋಮುಖ ಅಭಿವೃದ್ಧಿ ಸಾಧುಸುದು. ಇಂದ್ ಸರ್ಕಾರ ಶಿಕ್ಷಣಕ್ಕೆ ಹೆಚ್ಚ್ ಆದ್ಯತೆ ಕೊಟ್ಟ್, ಹಲವ್ ಯೋಜನೆಗಳ್ನ ಜಾರಿಗೆ ತರ್‍ತಾ ಉಟ್ಟ್. ಅದ್ ಸಮರ್ಪಕವಾಗಿ ವಿದ್ಯಾರ್ಥಿಗಳಿಗೆ ದೊರಕುವಂಗೆ ನೋಡಿಕಣಕು. ಅಷ್ಟೇ ಅಲ್ಲದೆ ಶಾಲೆಗಳಲಿ ಹಲವ್ ಕಾರ್ಯಕ್ರಮಗಳ್ನ ಹಮ್ಮಿಕಣಕಾಕನ, ಭಾರತ ಸಾಧ್ಸಿರುವ ಪ್ರಗತಿನ ಅವ್‌ಕೆ ಮನವರ್‍ಕೆ ಮಾಡಿಕೊಟ್ಟ್ ಅವರ್‍ಲಿರುವ ಕೀಳರಿಮೆನ ತೊಡೆದ್ ಹಾಕಿ, ನಮ್ಮ ದೇಶದ ಬಗ್ಗೆ ಹೆಮ್ಮೆ, ಅಭಿಮಾನ ಮೂಡ್ಸುವ ಪ್ರಯತ್ನ ಮಾಡೋಕು. ಅಲ್ಲದೆ ಶಿಕ್ಷಣದ ಸಂಪನ್ಮೂಲ ಎಲ್ಲ ಕಡೆ ಸರಿಯಾಗಿ ಹಂಚಿಕೆ ಮಾಡ್ವ ಉದ್ದೇಶನ ಇಟ್ಕಂಡೊಳೊ. ಇದ್ಕೆ ಸಂಬಂಧಪಟ್ಟಂಗೆ ಎಲ್ಲವೂ ಸಲಹೆ, ಸೂಚನೆ ಸಹಕಾರ ನಿಡೋಕುತ ಅಧ್ಯಕ್ಷನಾಗಿ ನಾ ಕೇಳಿಕಣೆ.

ಕೊ. ಸಂ. : ನೀವ್ ಅಮೆರಿಕಲಿ ಇದ್ದ್ ಬಂದವ್, ಅಮೇರಿಕದ ಅಭಿವೃದ್ಧಿ ಹಿಂದೆ ಯಾವ ಪ್ರಯತ್ನ ಉಟ್ಟ್?

ಉತ್ತರ : ಅಮೇರಿಕಾದ ಜೀವನ ಸಂಸ್ಕೃತಿನ ತಿಳ್ಕಣುವ ಉತ್ಸಾಹದಿಂದಲೇ ನಾನ್ ಅಮೇರಿಕಕೆ ಹೋಗ್‌ವ ಪ್ರಯತ್ನ ಮಾಡ್ದೆ. ನನ್ನ ಸಹೋದರ ಲಕ್ಷ್ಮಣನವು ಅಲ್ಲಿ ಇದ್ದದ್ರಂದ ನನ್ನ ಆಸೆ ಬಾರಿ ಬ್ಯಾಗ ಕೈಗೂಡ್ತ್. ಅಮೇರಿಕದ ಏಳ್ಗೆಗೆ ಬಹು ಮುಖ್ಯ ಕಾರಣ ಅವರ ಪ್ರಾಮಾಣಿಕತೆ. ಅಲ್ಲಿ ಎಲ್ಲ ವ್ಯವಹಾರ ಪೇಪರ್ ಮೂಲಕ ನಡ್ದದೆ. ಅಂದರೆ ಕ್ರೆಡಿಟ್ ಕಾರ್ಡ್ ಚೆಕ್, ಮೂಲಕನೇ ವ್ಯವಹಾರ ನಡೀತಿದ್ದದೆ, ಇದ್ರಂದ ಅವ್ರ ಹಣ ಬ್ಯಾಂಕಲೇ ಇದ್ದ್‌ಕಂಡ್ ರಾಷ್ಟ್ರಾಭಿವೃದ್ಧಿಗೆ ಬಳಕೆ ಯಾಗ್ತಾ ಇದ್ದದೆ. ಅಲ್ಲದೆ ಪಾರದರ್ಶಕತೆ ಅಲ್ಲಿನ ಒಂದ್ ಅವಿಭಾಜ್ಯ ಅಂಗ. ಪ್ರತಿಯೊಬ್ಬಂಗೂ ಸಾಮಾಜಿಕ ಭದ್ರತೆ ನಂಬರ್, ಡ್ರೈವಿಂಗ್ ಲೈಸೆನ್ಸ್ ನಂಬರ್ ಇದ್ದದೆ. ಆ ನಂಬರ್ ಒತ್ತಿರೆ ಅವರ ಚರಿತ್ರೆ ಪೂರ್ತಿ ಗೊತ್ತಾದೆ. ಅಲ್ಲಿನ ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿನ ಉಳ್ಸುದುತೇಳಿ ಇಲ್ಲೆ, ಮಕ್ಕಳೇ ತಮ್ಮ ಗಳಿಕೆಯ ದಾರಿನ ನೋಡಿಕಂಡಿದ್ದವೆ. ಇಲ್ಲಿನಂಗೆ ಚಳುವಳಿ, ಹೋರಾಟಗಳಿಗೆ ಅಲ್ಲಿ ಬೆಲೆ ಇಲ್ಲೆ. ಪ್ರತಿಯೊಬ್ಬ ತಮ್ಮ ಕಂಪೆನಿ, ದೇಶ ಅಭಿವೃದ್ಧಿ ಹೊಂದೊಕುತ್ತೇಳಿ ದುಡಿಯುತ್ತಿದ್ದವೆ.ಹಂಗ್ಯಾಗಿ ಅಮೇರಿಕಾ ಅಭಿವೃದ್ಧಿ ಸಾಧಿಸಿಟ್ಟು. ಆದರೂ ನಾವ್ ಹಣಕ್ಕಾಗಿ ಬದ್ಕುದಲ್ಲ. ಬದ್ಕಿಗಾಗಿ ಹಣಬೇಕು. ಎನ್ನುವ ತತ್ವನ ಅರ್ಥ ಮಾಡಿಕಣಕು. ಅಮೇರಿಕಲಿ ಆರ್ಥಿಕ ಅಭಿವೃದ್ಧಿ ಇದ್ದರೂ ಸಹ ಭಾರತದಂಗೆ ಕೌಟುಂಬಿಕ ಪ್ರೀತಿ, ಸಹಬಾಳ್ವೆನ ಅಲ್ಲಿ ಕಾಂಬಕಾದುಲೆ.

ಕೊ.ಸಂ. :ಅಮೆರಿಕಲಿ ನೀವ್ ಯಾವ ಹುದ್ದೇಲಿದ್ದರಿ ? ಆ ಸಂದರ್ಭಲಿ ನಿಮ್ಮ ಸಾಂಸ್ಕೃತಿಕ ಚಟುವಟಿಕೆಗ ಏನ್?

ಉತ್ತರ : ಅಮೇರಿಕಾದ ಸ್ಯಾನಿಟೋರಿಯಾ ಲಿ ಏರ್‌ಕ್ರಾಫ್ಟ್ ಫೇರ್ ಚೈಲ್ಡ್ ವೆಬ್ ವಿಂಗ್ ತಜ್ಞನಾಗಿ ನಾಲ್ಕ್ ವರ್ಷ ಕಾರ್ಯ ನಿರ್ವಹಿಸಿದ ಮ್ಯಾಲೆ, ಟೆಕ್ಸಾಸ್ ವಿಶ್ವ ವಿದ್ಯಾಲಯಲಿ ಸಿ. ಐ.ಎಸ್. ಪದವಿನ ಪಡ್ಕಂಡೆ. ಮತ್ತೆ ಬಹುರಾಷ್ಟ್ರೀಯ M.F.Q. ಪ್ಲಾಸ್ಟಿಕ್ ಪ್ರಾಡೆಕ್ಟ್ ಕಂಪನಿಲಿ ವ್ಯವಸ್ಥಾಪಕನಾಗಿ ಕಾರ್ಯನಿರ್ವಹಿಸಿದೆ. 1999ರ್‍ಲಿ ಅಮೇರಿಕದ ಫೀನಿಕ್ಸ್ ಪಟ್ಟಣಲಿ ವಿಶ್ವ ಕನ್ನಡ ಸಮ್ಮೇಳನ ನಡೆಕಾಕನ ಸ್ಯಾನಿಟೊನಿಯಾದ ಕನ್ನಡ ಕೂಟದ ನೇತೃತ್ವಲಿ ನಾವ್ ಮಹಾದೇವಜಾತ್ರೆನ ನಡ್ಸಿಕೊಟ್ಟಿದ್ರೊ. ವೆಬ್‌ಸೈಟಲಿ ನಮ್ಮ ಅರೆಗನ್ನಡ ಭಾಷೆನ ನಾವ್ ಸೇರ್‍ಸಿದೊ. ಅಲ್ಲದೆ 'ಕೊಡಗು ಸಂಗಾತಿ'ನ ತರ್‍ಸಿಕಂಡ್ ಇಲ್ಲಿನ ವಿದ್ಯಾಮಾನಗಳ್ನ ಓದಿ ತಿಳ್ಕಂಡ್ತಿದ್ದೆ. ಅಲ್ಲಿನ ಒಕ್ಕಲಿಗರ ಸಂಘಲೂ ನಾನ್ ಸದಸ್ಯನಾಗಿದ್ದೆ.

ಕೊ. ಸಂ.: ಇಲ್ಲಿಗೆ ಹಿಂದಿರ್‍ಗಿದ ಮ್ಯಾಲೆ ನೀವ್ ಯಾವ ಸಂಘ ಸಂಸ್ಥೆಗಳಲಿ ದುಡಿತೋಳರಿ ?

ಉತ್ತರ : ನಾನ್ ಸೋಮವಾರಪೇಟೆ ತಾಲೂಕ್‌ನ "ಆಪ್ಟೆಕ್ ಮಾಹಿತಿ ಸಿಂಧು ಯೋಜನೆಯು" ಸಂಯೋಜಕರಾಗಿ ಕಾರ್ಯನಿರ್ವಹಿಸ್ತಾ ಒಳೆ. ಕೊಡಗ್ ಗೌಡ ಸಾಂಸ್ಕೃತಿಕ ಅಕಾಡೆಮಿ ನಿರ್ದೇಶಕನಾಗೊಳೆ, 'ದಂಬೆಕೋಡಿ ಕಪ್' ಸಂಚಾಲಕನಾಗಿ ಕಾರ್ಯನಿರ್ವಹಿಸಿದ್ದೆ. ಚೆಟ್ಟಳ್ಳಿ ಸ್ಪೋರ್ಟ್ಸ್‌ಕ್ಲಬ್ ಉಪಾಧ್ಯಕ್ಷನಾಗಿ, ಅಲ್ಲಿನ ವಿನಾಯಕ ಮತ್ತೆ ಚೇತನ ಕ್ಲಬ್‌ಗಳ ಸಲಹೆಗಾರನಾಗಿ, ಚೆಟ್ಟಳ್ಳಿ ಪ್ರಾಥಮಿಕ ಶಾಲೆಯ ಮೇಲುಸ್ತುವಾರಿ ಸಮಿತಿಯ ಸದಸ್ಯನಾಗಿ, ಪ್ರೌಢಶಾಲಾ ನಿರ್ದೇಶಕನಾಗಿ ಹಾಗೂ ಹಳೆ ವಿದ್ಯಾರ್ಥಿ ಸಂಘದ ಖಜಾಂಚಿಯಾಗಿ ಜಿಲ್ಲಾ ಸರ್ಕಾರಿ ಶಾಲಾ, ಶಾಲಾಭಿವೃದ್ಧಿ ಸಮಿತಿಗಳ ಹಾಗೂ ಹಿತೈಷಿಗಳ ಒಕ್ಕೂಟದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸ್ತಾ ಒಳೆ.

ಕೊ. ಸಂ. : ಗೌಡ ಯುವ ಜನತೆಗೆ ನಿಮ್ಮ ಸಲಹೆ ಏನ್?

ಉತ್ತರ: 2020ರ ವೇಳೆಗೆ ಭಾರತ ವಿಶ್ವದ ಸೂಪರ್ ಪವರ್

ರಾಷ್ಟ್ರ ಆದೊರ್ಲಿ ಯಾವ ಸಂಶಯನೂ ಇಲ್ಲೆ. ಹಂಗ್ಯಾಗಿ ನಮ್ಮ ಯುವ ಜನತೆ ಕೀಳರಿಮೆಬುಟ್ಟ್ ಒಳ್ಳೆ ವಿದ್ಯಾಭ್ಯಾಸದೊಟ್ಟಿಗೆ ಇಂಗ್ಲೀಷ್ ನಾಲೆಜ್ ಬೆಳ್ಸಿಕಂಡ್ ಸ್ಪರ್ಧಾ ಪ್ರಪಂಚಲಿ ಮುನ್ನಡೆಕು. ಇಂದ್ ಪಾಶ್ಚಾತ್ಯರೇ ನಮ್ಮ ಸಂಸ್ಕೃತಿನ ಅನುಸರಿಸಿಕೆ ಹುಡುಕಿಕಂಡ್ ಬಾಕಾಕನ ನಾವ್ಯಾಕೆ ಪಾಶ್ಚಾತ್ಯಾ ಸಂಸ್ಕೃತಿ ಕಡೆ ವಾಲಕು? ನಮ್ಮ ಜೀವನ ಸಂಸ್ಕೃತಿನ ನಾವ್ ಬೆಳ್ಸಿಕಣಕು. ಇದರೊಟ್ಟಿಗೆ ನಮ್ಮ ಕುಟುಂಬದ ಮೂಲನ ತಿಳ್ಕಂಡ್ ಕುಟುಂಬನ ಬೆಳ್ಸಿರೆ, ತನ್ನಿಷ್ಟಕ್ಕೆ, ನಮ್ಮ ಜನಾಂಗನೂ ಬೆಳ್ದದೆ. ಅಲ್ಲದೆ ಖುಷಿ ಕೊಡುವ ವಿಚಾರತೇಳ್ರೆ ಇಂದ್ ನಮ್ಮ ಯುವ ಜನತೆ ಒಳ್ಳೆ ಜವಾಬ್ದಾರಿನ ಬೆಳ್ಸಿಕಂಡ್ ಬರ್‍ತಾ ಇರ್‍ದು. ಆದರೂ ನಮ್ಮ ಯುವ ಜನರ್ ಸರಿಯಾದ ಉದ್ಯೋಗ ಇಲ್ಲದೆ ನರಳ್ತಾ ಒಳೊ. ಯಾರೇ ಆದರ್ ಅರ್ಹತೆ ಇದ್ದವಕೆ, ಏನಾರ್ ಸಹಾಯ ಬೇಕ್‌ತ್ತೇಳಿ ನನ್ನನ್ನ ಸಂಪರ್ಕಿಸಿರೆ ಖಂಡಿತಾ ನನ್ನ ಕೈಲಾದ ಸಹಾಯ ನಾನ್ ಮಾಡ್ನೆ.

ಕೊ. ಸಂ. : ಗೌಡ ಸಂಘ ಸಂಸ್ಥೆಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನ್?

ಉತ್ತರ : ನಮ್ಮಲ್ಲಿ ಇಂದ್ ಜನಸಂಖ್ಯೆ ಹೆಚ್ಚಾಗ್ತಾ ಇದ್ದಂಗೆ, ಭಿನ್ನತೆಗ ಹೆಚ್ಚಾಗ್ತಾ ಒಳೊ. ಊರ್ ಊರ್‌ಗಳಲ್ಲಿ ಗೌಡ ಸಂಘ ಸಂಸ್ಥೆಗ ತಲೆ ಎತ್ತ್‌ಕು ನಿಜ. ಆದರೆ ಅವ್ ಜನ್ರನ ಒಡೆಕಾಗದ್. ಹಂಗ್ಯಾಗಿ ನಾವ್ ಅಖಿಲ ಗೌಡ ಫೆಡರೇಷನ್ ಸ್ಥಾಪನೆ ಮಾಡೊಕು. ಅದರಡಿಲಿ ಎಲ್ಲಾ ಶಾಖೆಗ ಬರೊಕು. ಈಗಿರುವ ಸಂಘಟನೆಗಳೊಟ್ಟಿಗೆ ಉದ್ಯೋಗ, ಮಾಹಿತಿಕೇಂದ್ರ, ಕ್ರೀಡಾ ಸಮಿತಿ ಮುಂತಾದ ಶಾಖೆಗ ಬರೊಕು. ಫೆಡರೇಷನ್ ಅಧ್ಯಕ್ಷನಾಂಗವ ನಮ್ಮ ಜನಾಂಗಕ್ಕೆ ಇತರ ಜನಾಂಗದ ಯಾವುದೇ ಅವಹೇಳನ ಉಂಟಾದರೆ ಅದರ್ನ ನೇರವಾಗಿ ಖಂಡಿಸುವಂತವವಾಕು. ಎಲ್ಲಾ ಶಾಖೆಗಳ ಮೇಲೆ ಅಂವ ಪೂರ್ಣ ನಿಯಂತ್ರಣ ಹೊಂದಿರಕು. ಒಕ್ಕಲಿಗರ್ ಈ ಫೆಡರೇಷನ್‌ಗೆ ಸೇರಿರೆ ಅದರ್ನ ಸ್ವಾಗತಿಸಕ್. ಆದ್ರೆ ಅವ್ ನಮ್ಮ ಫೆಡರೇಷನ್‌ಗೆ ಸೇರಿರೆ ಅವು ನಮ್ಮ ಸಂಸ್ಕೃತಿನ ಒಪ್ಪಿಕಣಕು, ಮತ್ತೆ ಅವುಕೆ ನಮ್ಮ ಆಚಾರ ವಿಚಾರಗಳ ಬಗ್ಗೆ ಗೌರವಯಿರೊಕು.

1961 ರ ಜುಲೈ 14 ರಂದ್ ಹಿರಿಯ ಸಮಾಜ ಸೇವಕ ದಂಬೆಕೋಡಿ ಸುಬ್ರಾಯ ಮತ್ತೆ ರಾಮಕ್ಕ ದಂಪತಿಗಳ ಕೊನೆಯ ಮಣ್ಣನಾಗಿ ಜನಿಸಿದ ದಂಬೆಕೋಡಿ ಹರೀಶ್, ಚೆಟ್ಟಳ್ಳಿ ಹೈಸ್ಕೂಲ್, ಬೆಂಗ್ಳೂರ್‌ನ ಸೆಂಟ್ ಜೋಸೆಫ್ ಕಾಲೇಜ್, ಉಡುಪಿ, ಎಂ. ಜಿ. ಎಂ.ಕಾಲೇಜ್, ಮೈಸೂರ್ ಮಹಾ ರಾಜಾ ಕಾಲೇಜ್‌ಗಳ್ಲಿ ವಿದ್ಯಾಭ್ಯಾಸ ಪಡ್ದವ್. ವಿದ್ಯಾರ್ಥಿ ಜೀವನಲೇ ಇವ್ ನಾಯಕ ಗುಣನ ಬೆಳ್ಸಿಕಂಡ್, ವಿವಿಧ ಕಾಲೇಜ್‌ಗಳಲಿ ವಿದ್ಯಾರ್ಥಿ ನಾಯಕರಾಗಿದ್ದದ್ ಅಲ್ಲದೆ, ಮೈಸೂರ್‌ಲಿ ಕೊಡಗು ವಿದ್ಯಾರ್ಥಿ ಸಂಘದ ನಾಯಕರಾಗಿಯೂ ಕಾರ್ಯ ನಿರ್ವಹಿಸಿದ್ರೊ. ಕ್ರೀಡೆಲೂ ಅಸಾಧಾರಣ ಪ್ರತಿಭೆ ಹೊಂದಿದ್ದ ಇವು ಚೆಸ್ ಮತ್ತೆ ಬಾಲ್ ಬ್ಯಾಡ್ಮಿಂಟನ್‌ಲ್ಲಿ ಮಂಗಳೂರು ವಿಶ್ವವಿದ್ಯಾಲಯನ ಪ್ರತಿನಿಧಿಸಿ ಪ್ರಶಸ್ತಿ ಪಡ್ಕಂಡಿದ್ರೊ. 1989 ಮೊಟ್ಟೇರ ದಿ. ನಂಜಪ್ಪನವರ ಮಗ್ಳ್ ವೀಣಾರವರ್ನ ಮದುವೆಯಾದ್ರೊ. ವೀಣಾರವರ್‍ದೂ ಪ್ರತಿಷ್ಠಿತ ಮನೆತನ. ಇವರ ಸ್ಹೋದರರಾದ ಸುಬ್ಬಯ್ಯನವ್ ಮೇಜರ್ ಆಗಿ, ಪುರುಷೋತ್ತಮನವ್ ಕರ್ನಲ್ ಆಗಿ, ವಾಸುದೇವನವ್ ಮೇಜರ್ ಆಗಿ, ಶ್ರೀನಿವಾಸನವ್ ಬ್ಯಾಂಕ್ ಮ್ಯಾನೇಜರ್ ಆಗಿ, ಇವರ ಸೋದರಿ ಬೋಜಮ್ಮನವು ಡಾಕ್ಟರ್ ಆಗಿ ಕಾರ್ಯನಿರ್ವಹಿಸ್ತಾ ಒಳೊ. ಇವರೆಲ್ಲರ ಸಹಕಾರನ ಗೌಡ ಜನಾಂಗ ಸದುಪಯೋಗ ಪಡ್ಸಿಕಣಕತ್ತೇಳ್ದು ಹರೀಶ್‌ರವರ ಅಭಿಪ್ರಾಯ.

ಅಶ್ವಿನ್, ಐಶ್ವರ್ಯ, ಅಂಕಿತತೇಳುವ ಮೂರು ಮಕ್ಕಳ ಸುಂದರ ಕುಟುಂಬ ಹರೀಶ್‌ನವರ್‍ದ್. ಒಂದ್ ಚೂರೂ ಅಹಂಭಾವ ಇಲ್ಲದೆ, "ಜನಸೇವೆ ಮಾಡೊಕು ಜನರೊಟ್ಟಿಗೆ ಬೆರೆಯೊಕು, ಅವರ ಸಮಸ್ಯೆಗಳಿಗೆ ಸ್ಪಂದಿಸೊಕು, ಅರೆಗನ್ನಡ ಭಾಷೆನ ಮಕ್ಕಳಿಗೆ ಕಲ್ಸಿ ನಮ್ಮ ಸಂಸ್ಕೃತಿನ ಚಿರಸ್ಥಾಯಿಯಾಗಿ ಮಾಡೋಕು, ಪಾಶ್ಚಾತ್ಯ ಚಿಂತನೆಗೆ ಮಾರು ಹೋಗದೆ ಭಾರತೀಯ ಚಿಂತನೆನ ಬೆಳ್ಸಕಣಕು. ಆಗ ಮಾತ್ರ ನಮ್ಮ ಬದ್‌ಕ್ ಸಾರ್ಥಕ ಆದೆ. ನಾವೇ ಸಂಪಾದಿಸಿ, ನಾವೇ ತಿಂದ್‌ಕಂಡ್ ಇದ್ದರೆ ನಮಿಗೂ ಪ್ರಾಣಿಗಳಿಗೂ ಏನ್ ವ್ಯತ್ಯಾಸ ಉಟ್ಟ್‌ತ" ಪ್ರಶ್ನಿಸುವ ಹರೀಶ್, ಮತ್ತಷ್ಟು ಸಮಾಜಕ್ಕೆ ಸೇವೆ ಸಲ್ಲಿಸುವ ಮೂಲಕ ಗೌಡ ಜನಾಂಗದ ಧ್ರುವತಾರೆಯಾಗಿ ಮಿಂಚಕುತ್ತೇಳ್ದು ನಮ್ಮ ಹಾರೈಕೆ.

ಸಂದರ್ಶನ : ಪಟ್ಟಡ ಶಿವಕುಮಾರ್.

ಗೌಡ ಸಮಾಜ ಮುನ್ನಡೆಸಲು ಸಿದ್ಧವಾಗಲಿ

ಮಡಿಕೇರಿಯ ಗೌಡ ಸಮಾಜಕ್ಕೆ ನೂತನ ಪದಾಧಿಕಾರಿಗಳು ಇತ್ತೀಚೆಗೆ ಆಯ್ಕೆಯಾಗಿದ್ದಾರೆ. ಜನಾಂಗವನ್ನು ಮುನ್ನಡೆಸುವಲ್ಲಿ ಸಮಾಜದ ಪಾತ್ರ ಅತ್ಯಂತ ಹಿರಿದು. ಹಾಗೆ ನೋಡಿದರೆ ಕೊಡಗಿನಲ್ಲಿ ಗೌಡ ಸಮಾಜದ ಕಾರ್ಯ ಹೇಳಿಕೊಳ್ಳುವ ಮಟ್ಟದಲ್ಲಿ ನಡೆಯುತ್ತಿಲ್ಲ ಎಂಬುದನ್ನೂ ಸ್ವತಃ ಗೌಡ ಸಮಾಜದವರೇ ಒಪ್ಪಿಕೊಳ್ಳುತ್ತಾರೆ. ಗೌಡ ಸಾಂಸ್ಕೃತಿಕ ಅಕಾಡೆಮಿಯು ಕೈಲ್‌ಮುಹೂರ್ತ, ಹುತ್ತರಿ ಹಬ್ಬ, ಕೆಸರುಗದ್ದೆ ಕ್ರೀಡಾಕೂಟ, ಕುಟುಂಬವಾರು ಕ್ರಿಕೆಟ್ ಉತ್ಸವಗಳನ್ನು ಆಚರಿಸುವ ಮೂಲಕ ಗೌಡ ಸಂಘಟನೆಯ ಕಾರ್ಯದಲ್ಲಿ ಮುಂಚೂಣಿಯಲ್ಲಿದೆ. ಅದೇ ರೀತಿ ಗೌಡ ಮಹಿಳಾ ಒಕ್ಕೂಟವೂ ಸಹ ರೇಡಿಯೋದಲ್ಲಿ, ದಸರಾದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ತಮ್ಮ ಕಾರ್ಯಕ್ರಮಗಳನ್ನು ನೀಡುತ್ತಾ, ಜನಾಂಗದ ಖ್ಯಾತಿಯನ್ನು ಎತ್ತಿ ಹಿಡಿಯುತ್ತಿದೆ. ವಿದ್ಯಾಸಂಘವು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಇಡುವ ಮೂಲಕ, ಪ್ರತಿಭಾ ಪುರಸ್ಕಾರದಂತಹ ಕಾರ್ಯಕ್ರಮಗಳ ಮೂಲಕ ಯುವ ಜನಾಂಗವನ್ನೂ ಪ್ರೋತ್ಸಾಹಿಸುತ್ತಿದೆ.


ಇವೆಲ್ಲವನ್ನು ಅವಲೋಕಿಸಿದಾಗ ಗೌಡ ಸಮಾಜ ಏನು ಮಾಡುತ್ತಿದೆ ಎನ್ನುವ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಕಳೆದ ಸಾಲಿನಲ್ಲಿ ಕೆಲವು ಪ್ರತಿಷ್ಠಿತ ಹುದ್ದೆಯನ್ನು ತಲುಪಿದ ಹಲವರನ್ನು ಸಮಾಜ ಸನ್ಮಾನಿಸಿತ್ತು. ಉನ್ನತ ಹುದ್ದೆಗಳನ್ನು ತಲುಪಿದವರನ್ನು ಸನ್ಮಾನಿಸುವುದು ಒಳ್ಳೆಯ ಕಾರ್ಯವೇ. ಆದರೆ ಅಂತಹವರನ್ನೂ ಸನ್ಮಾನಿಸುವಾಗ ಅವರು ನಮ್ಮ ಜನಾಂಗಕ್ಕೆ ಸಲ್ಲಿಸಿದ ಸೇವೆಯೇನು? ಎಂಬುದನ್ನು ಸಮಾಜ ಪರಿಶೀಲಿಸಬೇಕು. ಜನಾಂಗದ ಏಳಿಗೆಗಾಗಿ ಎಳ್ಳಷ್ಟೂ ಶ್ರಮಿಸದವರು, ಅಧಿಕಾರದಲ್ಲಿದ್ದಾಗ ನಮ್ಮ ಜನಾಂಗದವರ ಯಾವ ಕೆಲಸ ಮಾಡಿಕೊಡದಿದ್ದವರು ಎಷ್ಟು ಉನ್ನತ ಹಂತಕ್ಕೇರಿದರೂ ಅಂತಹವನ್ನು ಸನ್ಮಾನಿಸುವ ಕಾರ್ಯಕ್ಕೆ ಕೈ ಹಾಕಬಾರದು. ಇದರ ಜೊತೆಯಲ್ಲಿ ಗೌಡ ಸಮಾಜ ಕೆಲವು ಪ್ರಶಸ್ತಿಗಳನ್ನೂ ರೂಪಿಸಬೇಕು. ಗೌಡ ಜನಾಂಗದ ಸೇವೆಯಲ್ಲಿ ತೊಡಗಿರುವವರಿಗೆ ವಿವಿಧ ಹಂತಗಳಲ್ಲಿ "ಪ್ರಶಸ್ತಿ"ಗಳನ್ನೂ ನೀಡುವ ಯೋಜನೆಯನ್ನು ಜಾರಿಗೆ ತಂದದ್ದೇ ಆದರೆ ಸಮಾಜದ ಕಾರ್ಯ ಸಾರ್ಥಕವಾದಂತಾಗುತ್ತದೆ. ಅಲ್ಲದೆ ಹಲವರನ್ನು ಜನಾಂಗ ಸೇವೆಗೆ ಹುರಿದುಂಬಿಸಿದಂತಾಗುತ್ತದೆ.

ನಮ್ಮ ಭಾಷೆಯ ಬಗ್ಗೆ, ಸಂಸ್ಕೃತಿಯ ಬಗ್ಗೆ, ಆಚಾರ ವಿಚಾರಗಳ ಬಗ್ಗೆ ಗೊಂದಲವೇರ್ಪಟ್ಟಾಗ ಅದನ್ನು ಬಗೆಹರಿಸಿ ಸ್ಪಷ್ಟೀಕರಣ ನೀಡುವ ಹೊಣೆಗಾರಿಕೆ ಸಮಾಜದ ಮೇಲಿದೆ. ಮುಂದಿನ ವರ್ಷ ಚುನಾವಣೆ ಬರಲಿದೆ. ಈ ಚುನಾವಣೆಯಲ್ಲಿ ಕೊಡಗಿನಲ್ಲಿ ಗೌಡ ಜನಾಂಗ ಪ್ರತಿನಿಧಿತ್ವವನ್ನು ಪಡೆಯಲು ಮಾರ್ಗೋಪಾಯಗಳನ್ನು ಹುಡುಕುವ ಕಾರ್ಯವೂ ಸಮಾಜದಿಂದಾಗಬೇಕು. ಗೌಡ ಸಮಾಜ ಗೌಡ ಸಂಘಟನೆಗಳಲ್ಲಿ ದೊಡ್ಡಣ್ಣ ನಂತಿರುವ ಸಂಸ್ಥೆ. ಅದು ಕೇವಲ ದೊಡ್ಡವರ ಸಂಸ್ಥೆ ಎಂಬ ಟೀಕೆಯಿಂದ ಹೊರಬರಬೇಕಾದರೆ, ತನ್ನಲ್ಲಿರುವ ಆರ್ಥಿಕ ಸಂಪತ್ತನ್ನು ಸಮಾಜದ ಏಳಿಗೆಗೆ ಬಳಸಿಕೊಂಡು ರಚನಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು. ಈಗಂತೂ ಅಧ್ಯಕ್ಷರೂ, ಕಾರ್ಯದರ್ಶಿ ಸೇರಿದಂತೆ ಪದಾಧಿಕಾರಿಗಳೆಲ್ಲರೂ ಅನುಭವದಿಂದ ಮಾಗಿದವರೇ ಆಗಿದ್ದಾರೆ. ಇವರಿಂದ ಜನಾಂಗವೀಗ ಬಹಳಷ್ಟು ನಿರೀಕ್ಷಿಸುತ್ತಿದೆ.

- ಪಟ್ಟಡ ಶಿವಕುಮಾರ್.

ಶುಭ ವಿವಾಹ

1. ಬೆಂಗಳೂರಿನಲ್ಲಿ ವಾಸವಿರುವ ಬಿಟ್ಟೀರ ಶಂಭು ಮತ್ತು ಚೊಂದಮ್ಮ ದಂಪತಿಗಳ ಪುತ್ರಿ ಅರ್ಚನಾಳಿಗೂ ಹಾಗೂ ಶ್ರೀ ಮಾಣಿಕಲಾಲ್ ಸರ್ಕಾರ್ ಮತ್ತು ಶ್ರೀಮತಿ ನೀಲ ಸರ್ಕಾರ್‌ರವರ ಪುತ್ರ ಅಮಿತ್ ಸರ್ಕಾರನಿಗೂ ಬೆಂಗಳೂರಿನ ಗಿರಿ ನಗರದಲ್ಲಿರುವ ನಂದಗೋಕುಲ ಕಲ್ಯಾಣ ಮಂಟಪದಲ್ಲಿ ದಿನಾಂಕ 8-8-2003 ರಂದು ಭಾರೀ ವಿಜೃಂಭಣೆಯಿಂದ ಮದುವೆಯು ನಡೆಯಿತು.
2. ಕುಶಾಲನಗರದಲ್ಲಿ ವಾಸವಾಗಿರುವ ಕುಂಜಿಲನ ಕೃಷ್ಣಯ್ಯ ಮತ್ತು ಶಾಂತಿ ದಂಪತಿಗಳ ಪುತ್ರ ವಿನೋದ್‌ಕುಮಾರ್‌ನಿಗೂ ಹಾಗೂ ನಂಜರಾಯಪಟ್ಟಣ ಗ್ರಾಮದ ಬೆಳಿಯಂಡ್ರ ಈರಪ್ಪ ಮತ್ತು ಬೇಬಿ ದಂಪತಿಗಳ ಮಗಳು ಲಾವಣ್ಯಳಿಗೂ ಕುಶಾಲನಗರದ ಗೌಡ ಸಮಾಜದಲ್ಲಿ ದಿನಾಂಕ 8-9-2003 ರಂದು ಮದುವೆಯು ವಿಜೃಂಭಣೆಯಿಂದ ಜರುಗಿತು.
3. ಮಡಿಕೇರಿ ತಾಲ್ಲೂಕು ಅವಂದೂರು ಗ್ರಾಮದ ಕಾಳೇರಮ್ಮನ ಬಸಪ್ಪ ಮತ್ತು ಮುತ್ತಮ್ಮ ದಂಪತಿಗಳ ದ್ವಿತೀಯ ಪುತ್ರ ಅಯ್ಯಣ್ಣ (ಅಶೋಕ) ನಿಗೂ ಹಾಗೂ ಸುಂಟಿಕೊಪ್ಪ ನಾಕೂರು ಶಿರಂಗಾಲ ಗ್ರಾಮದ ಚೊಕ್ಕಾಡಿ ಧನುಪಾಲ ಮತ್ತು ಕಾವೇರಮ್ಮ ದಂಪತಿಗಳ ಪುತ್ರಿ ಯಶವಂತಿಳಿಗೂ (ರಶಿ) ಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ದಿನಾಂಕ 19-10-2003 ರಂದು ಮದುವೆಯು ಸಾಂಪ್ರದಾಯಿಕವಾಗಿ ವಿಜೃಂಭಣೆಯಿಂದ ನೆರವೇರಿತು.



ಕುಂಜಿಲನ ವಿನೋದ್ ಕುಮಾರ್
ಮತ್ತು ಬೆಳಿಯಂಡ್ರ ಈ. ಲಾವಣ್ಯ

ದಿನಾಂಕ 8-9-2003 ರ ಸೋಮವಾರ ನಮ್ಮ ಮಕ್ಕಳ ಮದುವೆ ಶುಭ ಕಾರ್ಯವು ಕುಶಾಲನಗರದ ಗೌಡ ಸಮಾಜದಲ್ಲಿ ನಡೆಯಿತು. ನೀವುಗಳು, ನೆಂಟರಿಷ್ಟರು, ಹಿತೈಷಿಗಳು ಎಲ್ಲಾ ಬಂದು ಆಶೀರ್ವದಿಸಿದಿರಿ. ನಮಗೆ ಧನ್ಯತೆಯನ್ನು ತಂದಿದೆ. ನೀವುಗಳಿಗೆಲ್ಲಾ ನಮ್ಮ ಕುಲಗುರು ವೆಂಕಟರಮಣ ಮತ್ತು ಶಾರದಾಂಬೆಯು, ಕಾವೇರಿ, ಇಗ್ಗುತಪ್ಪರ ಕೃಪಾ ಕಟಾಕ್ಷೆ, ಸದಾ ಇದ್ದು ಐಶ್ವರ್ಯ ಆಯುರಾರೋಗ್ಯ ಸುಖ ಸಂಪತ್ತು ನೀಡಿ ಅನುಗ್ರಹಿಸಲಿ ಎಂದು ನಾವುಗಳು ಈ ಮೂಲಕ ಶುಭ ಹಾರೈಸುತ್ತೇವೆ.

ಯಿಂದ : ಬೆಳಿಯಂಡ್ರ ಈರಪ್ಪ, ಬೇಬಿ,
ಮಗ - ಪ್ರಶಾಂತ್, ಮಗಳು - ಹಿತೈಷಿ Phone : 297562
ಮತ್ತು ಕುಂಜಿಲನ ಕೃಷ್ಣಯ್ಯ, ಶಾಂತಿ, ಮಗ - ಭರತ್, ಮಗಳು - ವೀಣಾ
ಕುಶಾಲನಗರ Phone : 274626
ಅಜ್ಜಿ - ಅಜ್ಜಮ್ಮ ಸೀತಮ್ಮ, ಮಾವ ಅತ್ತೆಯಂದಿರು, ಚಿಕ್ಕಮ್ಮ, ಚಿಕ್ಕಪ್ಪಂದಿರು,
ದೊಡ್ಡಪ್ಪ - ಬೆಳಿಯಂಡ್ರ ಚಣ್ಣಪ್ಪ, ಮುತ್ತಮ್ಮ



ಮರೆಯಾದರೂ ಮರೆಯಲಾರದವನು

ನಾನಳಿವೆ ನೀ ನಳಿವೆ
ಅಳಿದ ಎಲುಬುಗಳ ಮೇಲೆ
ಮೂಡುವುದು ಮೂಡುವುದು ನವ ಭಾರತದ ಲೀಲೆ -ಕುವೆಂಪು

ಇದೀಗ ನಾನಿಲ್ಲಿ ಹೇಳ ಹೊರಟಿರುವುದು ಸಮರಸದ ಬದುಕನ್ನು ಸಮಾನತೆಯ ನೆಲೆಯಲ್ಲಿ ಸಹಜ ಬದುಕನ್ನು ನೀಡಿ ಸಮಯ ಮೀರುವ ಮುನ್ನವೇ 'ಸಂಸ್ಕಾರ' ಗೊಂಡ ನನ್ನ ಸಂಗಾತಿಯ ಬಗ್ಗೆ.

ಇವರು ಹುಟ್ಟಿದ್ದು ಕೊಡಗಿನ ಹುದೇರಿ ರಾಮಣ್ಣನವರ ತುಂಬು ಕುಟುಂಬದಲ್ಲಿ. ಬಾಲ್ಯದ ವಿದ್ಯಾಭ್ಯಾಸ ಬೆಟ್ಟಗೇರಿ, ಭಾಗಮಂಡಲದ ಆಸುಪಾಸುಗಳಲ್ಲಿ. ಮುಂದೆ ಬಿ.ಕಾಂ., ಎಂ.ಬಿ.ಎ., ಪದವಿಗಳೂ ಅವರ ಕಿರೀಟವೇರಿದವು. ಗಣಕಯಂತ್ರದ ಒಡನಾಟವೂ ಅವರಿಗಿತ್ತು.

ಹುದೇರಿ ರಾಮಣ್ಣನವರ ಮಗನಾಗಿ, ಓಡಿಯನ ಕಾರ್ಯಪ್ಪರವರ ಅಳಿಯನಾಗಿ, ನನ್ನ ಪತಿಯಾಗಿ ಮಾನಸಳ ತಂದೆಯಾಗಿ ಗುರುತಿಸಿಕೊಂಡವರು. ಆ ನನ್ನ ಆಪ್ತ ಸಂಗಾತಿ ಶ್ರೀ ಬಸಪ್ಪರವರು ಒಲಿದ ಸಂತಸದ ಕ್ಷಣಗಳಷ್ಟೇ ಮುನ್ನಡಿಯಾಗಿದ್ದರೆ ನನ್ನ ಸಂತಸಕ್ಕೆ ಎಲ್ಲೆ ಇರುತ್ತಿತ್ತೆ? ಕಾದಿತ್ತು ದುರ್ದೈವ. ಸಂಗಾತಿಯನ್ನು ಬಿಡದೆ ಬಾಚಿ ಕರೆದೊಯ್ದ ಯಮರಾಯ ಅಕಾಲದಲ್ಲಿ. ಅಮೂಲ್ಯ ಜೀವನವನ್ನು ಕಳೆದುಕೊಂಡಂತಾಗಿದೆ. ಮರೆಯಾಗಿದ್ದರೂ ಮರೆಯಲಾಗುತ್ತಿಲ್ಲ. ಹೆಜ್ಜೆ ಹೆಜ್ಜೆಗೂ ಅವರೊಂದಿಗೆ ಕಳೆದ ಘಟನೆಗಳು ಮುನ್ನುಲಿಗೆ ನುಗ್ಗಿ ಬರುತ್ತಿವೆ.

ಸರ್ಕಾರಿ ಚಾಕರಿಗೆ ಮುಗಿ ಬಿದ್ದವರಲ್ಲ. ಇನ್ನೊಬ್ಬರಿಗೆ ಭಾರವಾಗದ ಕ್ರಿಯಾಶೀಲರು. ಸಾಧಿಸುವ ಛಲವುಳ್ಳವರು. ಸ್ವಾಭಿಮಾನಿಗಳು, ಐಶಾರಾಮದ ಬದುಕಿಗೆ ಹಾತೊರೆದವರಲ್ಲ. ಉಳಿವಿಗಾಗಿ ಇನ್ನೊಬ್ಬರ ಕಾಲೆಳೆದವರಲ್ಲ. ತಮ್ಮ ಸಹೋದರ ಸಹೋದರಿಯರ ಬದುಕಿನ ಬೆಳವಣಿಗೆಗೆ ತನ್ನ ಇತಿಮಿತಿಯೊಳಗೆ ಇದ್ದುದನ್ನು ನೀಡುತ್ತಾ ಅವರುಗಳು ಮೇಲೇರಲು ಸಹಾಯ ಹಸ್ತ ನೀಡಿ ಸಹಕರಿಸಿದ್ದರು.

ನನಗೂ ಸಮಾನ ಸ್ಥಾನಮಾನ ನೀಡಿ ನನ್ನ ವೈಯಕ್ತಿಕ ಬೆಳವಣಿಗೆಗೂ ಒತ್ತಾಸೆಯಾಗಿ ನಿಂತು, ಪ್ರಸ್ತುತದ ಸಂದರ್ಭಗಳಲ್ಲಿ ಆದರ್ಶ ವ್ಯಕ್ತಿಯಾಗಿರುವ ಸಂಗಾತಿಯನ್ನು ನೆನಪಿಸಿಕೊಳ್ಳುವ ಸಂತಸ ಒಂದೆಡೆ. ಅಕಾಲದಲ್ಲಿ ಅಗಲಿದ ದುಃಖದ ದುರಂತ ಮತ್ತೊಂದೆಡೆ.

ಹುದೇರಿ ರಾಮಣ್ಣ ಬಸಪ್ಪರವರು ಬದ್ಧತೆಗಳನ್ನು ಯಶೋಗಾಥೆಗಳಾಗಿ ದಾಖಲಿಸಬೇಕಾಗಿದ್ದಂತಹ ಜಾಗದಲ್ಲಿ ಶೂನ್ಯವನ್ನು ಬಿಟ್ಟು ಹೋಗಿದ್ದಾರೆ. ಶೂನ್ಯವಾದ ಈ ಜಾಗದಲ್ಲಿ ಅವರಿಗಿದ್ದ ಬದ್ಧತೆಯ ಮೂಟೆಗಳನ್ನು ನಾನು ಹೊತ್ತು ಅವರೇ ಕಲಿಸಿಕೊಟ್ಟ ಸಹನೆ ಕ್ರಿಯಾಶೀಲ ಮನೋಗುಣದ ನೆಲೆಯಲ್ಲಿ ಬದುಕಿನ ಬಂಡಿಯನ್ನು ಎಳೆಯಬೇಕಾಗಿದೆ. ಅವರ ಆಶಯಗಳನ್ನು ವಾಸ್ತವಕ್ಕೆ ತರುವುದೇ ಅವರಾತ್ಮಕ್ಕೆ ನಾನು ಕೋರುವ "ಶಾಂತಿ" ಯೆಂದು ಹಾಗೂ ಸಲ್ಲಿಸುವ ಗೌರವವೆಂದು ನಾನು ಭಾವಿಸಿಕೊಂಡಿದ್ದೇನೆ.

-ಪತ್ನಿ : ಹುದೇರಿ ದೇವಕಿ, ಮತ್ತು ಮಗಳು ಮಾನಸ

ನಿಧನ




ದಿ|| ಯಂಕನ ಲಕ್ಷ್ಮಣ


ಸುಂಟಿಕೊಪ್ಪ ಸಮೀಪ ಉಲುಗುರಿ ಗ್ರಾಮದ ಯಂಕನ ದಿ|| ಪೂವಯ್ಯನವರ ಮಗ ಲಕ್ಷ್ಮಣನವರು ದಿನಾಂಕ 29-10-2003 ರ ಬುಧವಾರ ನಿಧನರಾದರು. ಇವರಿಗೆ 55 ವರ್ಷ ಪ್ರಾಯವಾಗಿತ್ತು. ಪತ್ನಿ, ಪುತ್ರ, ಪುತ್ರಿಯರಲ್ಲದೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ತಿಥಿ ಕರ್ಮಾಂತರವು ದಿನಾಂಕ 8-11-2003 ರ ಶನಿವಾರ ಉಲುಗುಲಿ ಗ್ರಾಮದ ಮೃತರ ಐನ್ ಮನೆಯಲ್ಲಿ ನಡೆಯಲಿದೆ. ಮೃತರು ಸುಂಟಿಕೊಪ್ಪನಗರ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದು, ಸ್ನೇಹಜೀವಿ ಜನಪ್ರಿಯ ವ್ಯಕ್ತಿಯಾಗಿದ್ದರು.

-ಕರಂಬಡ್ಕ ಉತ್ತಯ್ಯ


Reg. No. KA/SK/MYS-88/2003 Registered : 10-01-96 TCI Kar. 09592



ಕೊಡಗು ಗೌಡ ವಿದ್ಯಾಸಂಘದಲ್ಲಿ ಮಹಿಳಾ ಒಕ್ಕೂಟದವರಿಂದ ಶಾರದ ಪೂಜೆ



ಕೊಡಗು ಗೌಡ ಮಹಿಳಾ ಒಕ್ಕೂಟದವರೊಡನೆ ಆಯುಧಪೂಜೆ ದಿನ ಶಾರದ ಪೂಜೆಯಲ್ಲಿ ಭಾಗವಹಿಸಿದ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್ ಮತ್ತು ವಿದ್ಯಾಸಂಘದ ಅಧ್ಯಕ್ಷ ಹೊಸೂರು ರಮೇಶ್ ಮತ್ತು ಸದಸ್ಯರು.



ನವರಾತ್ರಿಯ ದಸರಾ ಸಂಸ್ಕೃತಿಯ ಜನೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗೌಡ ಮಹಿಳಾ ಒಕ್ಕೂಟದಿಂದ ಕೋಲಾಟ ಮತ್ತು ನೃತ್ಯದಲ್ಲಿ ಭಾಗವಹಿಸಿದ ನೂತನ್ ತಂಡ



ಮಡಿಕೇರಿ ದಸರಾ ಸಂಸ್ಕೃತಿಯ ಜನೋತ್ಸವ ಕಾರ್ಯಕ್ರಮದಲ್ಲಿ ಜಯಶ್ರೀ ತಂಡ

Kodagu Sangathi Kannada Fortnightly Edited, Published, Printed by **Pattada Sheelamani, # 12058 "Sangathi Nilaya", Vijayanagar IV Stage, II Phase, Hinkal Post, Mysore-570017. ☎ : 0821/2404290.**
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/2431792.